ಪುಸ್ತಕ ಪ್ರಪಂಚ

ನವೆಂಬರ್ ೧೯೯೪



ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೫ ಸಂಚಿಕೆ ೩

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Eductaion Council, Mysore-6. Price : Rupees Six

ಬಿಡಿಪ್ರತಿ : ರೂ. 6

ವಾರ್ಷಿಕ ಚಂದಾ : ರೂ. 60

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 400

ಸಂಸ್ಥೆಗೆ : ರೂ. 600

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-570 006

ಮತ್ತೆ ಬಂತು ರಾಜ್ಯೋತ್ಸವ

ಪ್ರೊ॥ ದೇಜಗೌ

ಪ್ರತಿ ವರ್ಷವೂ ನವೆಂಬರ್ ತಿಂಗಳಲ್ಲಿ ಕನ್ನಡ ರಾಜ್ಯೋತ್ಸವ ಬರುತ್ತದೆ,ಹೋಗುತ್ತದೆ. ಭಾಷಣೋನ್ಮಾದಿಗಳಿಗೆ ಮತ್ತು ಉತ್ಸವ ಪ್ರಿಯರಿಗೆ ಅದೊಂದು ದೊಡ್ಡ ಹಬ್ಬ. ಭೂಕಂಪವಾಗಲಿ, ಪ್ಲೇಗ್ ಬರಲಿ, ಭಾಷಾ ವಿವಾದದಿಂದ ನೂರಾರು ಜನರು ಕೊಲೆಯಾಗಲಿ, ಗಾಯ ಹೊಂದಲಿ, ನೂರಾರು ಹಳ್ಳಿಗಳು ಕ್ಷಾಮದ ದವಡೆಯಲ್ಲಿ ಸಿಕ್ಕಿಕೊಂಡಿರಲಿ, ಈ ಉತ್ಸವವಂತು ನಡೆಯಲೇ ಬೇಕು.

ಏಕೀಕೃತ ಕರ್ನಾಟಕ ಉದಯಿಸಿದ ದಿನ ನಾಡುನುಡಿಗಳ ಏಳ್ಗೆಯ ಜಮಾಖರ್ಚನ್ನು ಅಳೆಯುವುದಾದರೆ, ಆರ್ಥಿಕವಾಗಿ ವೈಜ್ಞಾನಿಕವಾಗಿ, ಸಾಂಸ್ಕೃತಿಕವಾಗಿ, ಕೈಗಾರಿಕೀಯವಾಗಿ ನಾಡು ಎಷ್ಟು ದೂರ ಕ್ರಮಿಸಿದೆ, ಎಷ್ಟು ದೂರ ಕ್ರಮಿಸಬೇಕಾಗಿದೆ, ಸರೋಜಿನಿ ಮಹಿಷಿಯ ವರದಿ ಕಾರ್ಯಗತವಾಗುತ್ತಿದೆಯೆ, ಕನ್ನಡದ ಸ್ಥಾನಮಾನಗಳು ಭದ್ರವಾಗಿವೆಯೆ, ಕೇಂದ್ರೀಯ ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಸಾಕಷ್ಟು ಪ್ರೋತ್ಸಾಹ ದೊರೆಯುತ್ತಿದೆಯೆ, ಗಡಿನಾಡ ಸಮಸ್ಯೆಗಳ ಪರಿಹಾರ ತೃಪ್ತಿಕರವಾಗಿದೆಯೆ, ಜಲಸಂಪನ್ಮೂಲಗಳ ಪೂರಾ ಬಳಕೆ ಸಾಧ್ಯವಾಗಿದೆಯೆ, ಕನ್ನಡ ಸರ್ವಮಾಧ್ಯಮವಾಗುವಲ್ಲಿ ಸರ್ಕಾರ ಪ್ರಾಮಾಣಿಕ ಪ್ರಯತ್ನ ನಡೆಸುತ್ತಿದೆಯೆ, ಈ ಪ್ರಶ್ನೆಗಳನ್ನು ಚರ್ಚಿಸಿ, ಸೂಕ್ತ ಸಲಹೆಗಳನ್ನು ನೀಡಬೇಕಾದ್ದು, ಪರಿಣಾಮಕಾರೀ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕಾದ್ದು ಉತ್ಸವ ವ್ಯವಸ್ಥಾಪಕರ ಗುರಿಯಾಗುವುದಾದರೆ, ಅದನ್ನು ನಡೆಸಿದ್ದು ಸಾರ್ಥಕವಾಗುತ್ತದೆ.

ರಾಜ್ಯ ಭಾಷೆಗಳನ್ನು ಕೊಲೆಗೆಯ್ಯುವುದರಲ್ಲಿ ಉತ್ತರದ ನಾಯಕರು ಆಸಕ್ತರಾಗಿದ್ದರೆ, ಅವರ ಕೃಪೆಯನ್ನು ಗಳಿಸಿಕೊಳ್ಳುವ ಸಲುವಾಗಿ ದಕ್ಷಿಣದ—ತಮಿಳುನಾಡು ಹೊರತಾಗಿ—ನಾಯಕರು ರಾಜ್ಯ ಭಾಷೆಯನ್ನು ಹಾಗೂ ರಾಜ್ಯ ಹಿತವನ್ನು ಬಲಿಗೊಡಲು ಸಿದ್ಧರಾಗಿದ್ದಾರೆ. ಅದಕ್ಕೆ ಉರ್ದು ಪ್ರಸಾರ ಯೋಜನೆಯೇ ಸಾಕ್ಷಿಯಾಗಿದೆ. ಬಾಬ್ರಿ ಮಸೀದಿಯ ಪ್ರಕರಣವನ್ನು ಮರೆಸಲು ಈ ಉಪಾಯವನ್ನು ಹೂಡಿದಂತೆ ಕಾಣುತ್ತದೆ. ರಾಜ್ಯದ ಮುಸ್ಲಿಮರಿಗೆ ಉರ್ದು ವಾರ್ತೆಯ ಅಗತ್ಯವಿಲ್ಲವೆಂದು ಅನೇಕ ಮುಸ್ಲಿಮ್ ಬಾಂಧವರು ಹೇಳಿಕೆ ಭಾಷಣಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ಮುಸ್ಲಿಮರು ಹಿಂದೂಗಳು ಸಮಪ್ರಮಾಣದಲ್ಲಿರುವ ಪ್ರಜಾಸತ್ತೆ ಮತ್ತು ಕೋಮು ಸೌಹಾರ್ದ ವೇದಿಕೆಯ

ಮೈಸೂರು ಘಟಕ ಸಹ ಸಭೆ ಸೇರಿ, ಕನ್ನಡಕ್ಕೆ ಆದ್ಯತೆ ಮತ್ತು ಪ್ರಾಶಸ್ತ್ಯ ನೀಡಬೇಕೆಂದೂ, ರಾಷ್ಟ್ರೀಯ ವಾಹಿನಿಯಲ್ಲಿ ಉರ್ದುವಿಗೆ ಅವಕಾಶ ಕಲ್ಪಿಸತಕ್ಕದ್ದೆಂದೂ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಉರ್ದು ಕರ್ನಾಟಕದಲ್ಲಿ ಜನ್ಮ ತಾಳಿದ್ದರೂ ಅಖಿಲ ಭಾರತೀಯ ಭಾಷೆಯಾದ್ದರಿಂದ ಅದನ್ನು ರಾಷ್ಟ್ರೀಯ ಜಾಲದಲ್ಲಿ ಸೇರಿಸಬೇಕೇ ಹೊರತು, ಬೆಂಗಳೂರಿನ ವಾಹಿನಿಯಲ್ಲಿ ಅದಕ್ಕವಕಾಶ ಕೊಡಬೇಕಾಗಿಲ್ಲ. ತಮಿಳುನಾಡಿನಲ್ಲಿ ತಮಿಳಿಗೆಷ್ಟು ಪ್ರಾಶಸ್ತ್ಯವಿದೆಯೋ ಅಷ್ಟೇ ಪ್ರಾಶಸ್ತ್ಯ ಕನ್ನಡಕ್ಕಿರಬೇಕು, ಬೆಂಗಳೂರು ಕೇಂದ್ರದಲ್ಲಿ. ಕನ್ನಡದ ಸ್ವತಂತ್ರ ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚಿಸಬೇಕೇ ಹೊರತು, ಕಡಮೆ ಮಾಡಕೂಡದು. ಉರ್ದು ವಾರ್ತಾ ಪ್ರಸಾರದ ಹಿನ್ನೆಲೆಯಲ್ಲಿ ಅವನ್ನು ದ್ವಿತೀಯ ರಾಜ್ಯ ಭಾಷೆಯನ್ನಾಗಿ ಘೋಷಿಸುವ ಹವಣಿಕೆಯಿದೆ ಎಂಬ ವದಂತಿಯಿದೆ. ಅದು ನಿಜವಾದುದಾದರೆ ಅನೂಹ್ಯ ಘೋರ ದುರಂತ ಕಾದಿದೆ ಎಂಬುದಕ್ಕೆ ಬೆಂಗಳೂರಿನ ಈಚಿನ ದುರಂತ ಮುನ್ಸೂಚಿಯಾಗಿದೆ.

ಬೆಂಗಳೂರು ದೂರದರ್ಶನ ಕೇಂದ್ರದಿಂದ ಅಲ್ಪಸಂಖ್ಯಾತ ಭಾಷೆಗಳಿಗೂ ಅವಕಾಶ ಕಲ್ಪಿಸುವ ಯೋಚನೆಯಿದೆಯಂತೆ. ಅದು ಸಹ ಭಾವಸಾಮರಸ್ಯಕ್ಕೆ ಅಪಾಯಕಾರಿಯಾಗುತ್ತದೆ. ತುಳು ಕೊಡವ ಭಾಷೆ ಬಿಟ್ಟು ಉಳಿದುವುಗಳು ಬೇರೆ ಕಡೆ ರಾಜ್ಯ ಭಾಷೆಗಳಾಗಿರುವ ಪ್ರಯುಕ್ತ ಬೆಂಗಳೂರಿನ ಕೇಂದ್ರದಲ್ಲಿ ಅವುಗಳಿಗೆ ಅವಕಾಶ ಕಲ್ಪಿಸಬೇಕಾಗಿಲ್ಲ. ಕೊಡವ ತುಳುಗಳಿಗಾದರೂ ಪ್ರತ್ಯೇಕ ವಾಹಿನಿಯನ್ನು ಕಲ್ಪಿಸಬೇಕು. ಅತ್ಯವಶ್ಯವಾದರೆ ಇತರ ಅಲ್ಪಸಂಖ್ಯಾತ ಭಾಷೆಗಳಿಗೂ ಅಷ್ಟೇ.

ಕನ್ನಡಕ್ಕೆ ರಾಜ್ಯದಲ್ಲಿರುವ ಕೇಂದ್ರೀಯ ಕಚೇರಿ ಕಾರ್ಖಾನೆಗಳಿಂದ, ನವೋದಯ ಶಾಲೆಗಳಿಂದ, ಬ್ಯಾಂಕುಗಳಿಂದ ಘೋರ ಅಪಾಯ ಕಾದಿದೆ. ಮುಂದಾದರೂ ಅನ್ಯ ಭಾಷೆಗಳ ಆಘಾತದಿಂದ ಪಾರಾಗಬೇಕಾದರೆ, ರಾಜ್ಯದಲ್ಲಿರುವ ಎಲ್ಲ ರಾಜ್ಯೇತರ ಕಚೇರಿ ಕಾರ್ಖಾನೆ ಕಂಪೆನಿ ಸಂಸ್ಥೆಗಳೊಡನೆ ಸರ್ಕಾರವೂ ಕನ್ನಡಿಗರೂ ಕನ್ನಡದಲ್ಲಿಯೇ ವ್ಯವಹರಿಸಬೇಕು. ಆಗ ಕನ್ನಡಿಗರ ನಿರುದ್ಯೋಗ ಸಮಸ್ಯೆಯೂ ತಕ್ಕಮಟ್ಟಿಗೆ ಬಗೆಹರಿಯುತ್ತದೆ. ಕನ್ನಡಿಗರ ಮೇಲೆ ಹಿಂದಿಯನ್ನು ಹಿತ್ತಲ ಬಾಗಿಲಿಂದ ಹೇರುವ ಕಪಟೋಪಾಯದ ಸಂಕೇತಗಳಾಗಿವೆ ನವೋದಯ ಶಾಲೆಗಳು. ಅಂಥ ಶಾಲೆಗಳನ್ನು ರಾಜ್ಯಗಳಲ್ಲಿ ಪ್ರಾರಂಭಿಸುವ ಆಗತ್ಯವೇನಿತ್ತು? ಪ್ರಾರಂಭಿಸಲೇಬೇಕಾಗಿದ್ದರೆ, ಅವುಗಳ ವಹಿವಾಟನ್ನು ರಾಜ್ಯ ಸರ್ಕಾರಗಳಿಗೆ ವಹಿಸಬೇಕಾಗಿತ್ತು; ರಾಜ್ಯಗಳಲ್ಲಿ ಚಾಲ್ತಿಯಲ್ಲಿರುವ ಪಠ್ಯಕ್ರಮವನ್ನು ಅನುಸರಿಸಬೇಕಾಗಿತ್ತು. ರಾಜ್ಯಭಾಷೆಗಳಿಗೆ ಆದ್ಯತೆ ನೀಡಬೇಕಾಗಿತ್ತು. ಅವೀಗ ಅಸಮತೆಯ, ಅನ್ಯೈಕ್ಯದ, ವೈರತ್ವದ, ಸಂಶಯದ ಭಾಷಾ ದ್ವೀಪಗಳಾಗಿವೆ. ಅವುಗಳ ಬಗ್ಗೆ ಕನ್ನಡಿಗರು ಎಚ್ಚರಿಕೆ ವಹಿಸಬೇಕಾಗಿವೆ.

ಬ್ಯಾಂಕುಗಳಂತು ಕೇಂದ್ರ ಸರ್ಕಾರದ ಕೈಗೊಂಬೆಗಳಾಗಿವೆ. ಕನ್ನಡಿಗರ ಬೆವರಿನಿಂದ, ಹಣದಿಂದ ಬದುಕುತ್ತಿರುವ (ಇತರ ಭಾಷೆಗಳಿಗೂ ಈ ಮಾತು ಅನ್ವಯಿಸುತ್ತದೆ) ಈ ಬ್ಯಾಂಕುಗಳಿಗೆ ಕನ್ನಡ ಸೇರುವುದಿಲ್ಲ. ಇದಕ್ಕೆ ಕಾರಣ ಕೇಂದ್ರ ಸರ್ಕಾರದ

ಒತ್ತಾಯ. ಹಿಂದಿಯನ್ನು ಗುಪ್ತವಾಗಿ ನುಗ್ಗಿಸುನ ಕನ್ನಡದ ಕೋಟೆಯನ್ನು ಭೇದಿಸುವ ವಂಚನೆಯ ಜಾಲವಿದು. ಚೆಕ್ಕುಗಳು ಕೇವಲ ಇಂಗ್ಲಿಷಿನಲ್ಲಿದ್ದರೆ ಬೇಡವೆನ್ನುವುದಿಲ್ಲ; ಇಂಗ್ಲಿಷ್ ಕನ್ನಡಗಳೆರಡನ್ನು ಬಳಸಿದರೆ ಮೇಲು. ಆದರೆ ಫಾರಂಗಳು ಚಲನ್‌ಗಳು ಪತ್ರ ವ್ಯವಹಾರಗಳು ಕನ್ನಡದಲ್ಲಿರಬೇಕು. ಕನ್ನಡದಲ್ಲಿಲ್ಲದಿದ್ದರೆ ಬ್ಯಾಂಕಿನ ಮುಂದೆ ಧರಣಿ ಹೂಡಬೇಕು; ಬಹಿಷ್ಕರಿಸಬೇಕು. ಇಂಗ್ಲಿಷಿನ ಪತ್ರಗಳಿಗೆ ಉತ್ತರ ಕೊಡಬಾರದು. ಅಕಸ್ಮಾತ್ತಾಗಿ ಕೊಟ್ಟರೂ ಅದು ಕನ್ನಡದಲ್ಲಿರಬೇಕು. ಕನ್ನಡದಲ್ಲಿಲ್ಲದ ಫಾರಂ ಚಲನ್‌ಗಳನ್ನು ಸುಡಬೇಕು. ಪ್ರತಿವರ್ಷವೂ ಅವು ಹಿಂದಿ ದಿನಾಚರಣೆ ಮಾಡುತ್ತವೆ. ಮಾಡಿಕೊಳ್ಳಲಿ. ಕನ್ನಡ ರಾಜ್ಯೋತ್ಸವವನ್ನಾಚರಿಸುವಂತೆ ಅವರಿಗೆ ಕರೆ ಕೊಡಬೇಕು; ಕರೆಯನ್ನು ಮನ್ನಿಸದಿದ್ದರೆ ತಕ್ಕ ಶಾಸ್ತಿಯನ್ನು ಯೋಚಿಸಬೇಕು; ಬ್ಯಾಂಕ್ ವಿರೋಧಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು

'ಸಿ' ದರ್ಜೆಯ ನೌಕರಿಗಳಿಗೆ ಆಯ್ಕೆಯ ಪೂರ್ವದ ಕನ್ನಡಜ್ಞಾನ ಅನವಶ್ಯವೆಂದು ಸರ್ಕಾರ ನಿರ್ಧರಿಸಿದೆ ಎಂದೂ ಅದಕ್ಕಾಗಿ ಕನ್ನಡ ಶಕ್ತಿಕೇಂದ್ರ ಪ್ರತಿಭಟನೆ ನಡೆಸಿದೆ ಎಂದೂ, ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾಗಿದೆ. ಇದು ದಿಟವಾದರೆ, ಇಂಥ ಶೋಚನೀಯ ಸಂಗತಿ ಮತ್ತೊಂದಿರಲಾರದು. ಇದು ಕನ್ನಡಕ್ಕೆ ಸಮಾಧಿ ತೋಡುವ, ಅನ್ಯಭಾಷೆಗಳಿಗೆ ಹೂವಿನ ಹಾಸುಗೆ ಹಾಸುವ, ಕನ್ನಡ ನಾಡಿನಲ್ಲಿ ಎಂದೆಂದಿಗೂ ಭಾಷಾ ವಿವಾದವನ್ನು ಜೀವಂತವಾಗಿಡುವ, ಕನ್ನಡಿಗರನ್ನು ನಿರುದ್ಯೋಗಿಗಳನ್ನಾಗಿ ಮಾಡುವ, ಕನ್ನಡಿಗರ ಸರ್ವಹಿತವನ್ನು ಪರರಿಗೆ ಮಾರುವ ಅಪಾಯದ ಉಪಾಯವಿದೆಂದು ಪರಿಗಣಿಸಬಹುದಾಗಿದೆ. ಅಂಥ ಪರಿಸ್ಥಿತಿ ಬರಲಾರದೆಂದು, ಆಳುವ ಜನ ಈಗಾಗಲೇ ಅಬ್ಬರಿಸಿರುವ ಎಚ್ಚರಿಕೆಗಂಟೆಯ ಘೋಷವನ್ನು ಮರೆಯಲಾರದೆಂದು ಆಶಿಸುತ್ತ ಮಹಾಕವಿ ಕುಮಾರವ್ಯಾಸನ ಪದ್ಯವೊಂದನ್ನು ರಾಜ್ಯೋತ್ಸವದ ಸಂದರ್ಭದಲ್ಲಿ ಕೇಂದ್ರ ರಾಜ್ಯಗಳ ನಾಯಕರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಧರೆಯೊಳಗೆ ಕಡುಮೂರ್ಖರಿವರಿ
ಬ್ಬರು ಕಣಾ ದುರಿಯೋಧನನು ದಶ
ಶಿರನು ಗೋಗ್ರಹಣದಲಿ ವನಭಂಗದಲಿ
ಮುಂಕೊಂಡು
ಅರಿನೃಪರ ಸತ್ವಾತಿಶಯದು
ಬ್ಬರದ ಬಲುಹನು ಕಂಡು ಕಂಡೆ
ಚ್ಚರದೆ ಮರುಳಹುದುಚಿತವೇ
ಭೂಪಾಲ ಕೇಳೆಂದ.

ಮನಸ್ಸಿನ ಚಿಂತಾಭ್ರಾಂತಿಗಳಿಗೆ ಅಹಂಕಾರವೇ ಕಾರಣವಾಗಿದೆ. ಅಹಂಕಾರದಿಂದ ದೂರಿರುವುದರಿಂದಲೇ ಮನಸ್ಸಿಗೆ ಶಾಂತಿ ನೆಮ್ಮದಿಗಳು ಲಭಿಸುತ್ತವೆ.

ಮಹಾವೀರ

ತೋರಿಕೆ ನಿಜವಲ್ಲ

ಪ್ರೊ|| ದೇಜಗೌ

ಒಂದಾನೊಂದು ಕಾಲದಲ್ಲಿ ವಿಯಟ್ ನಾಮ್‌ನಲ್ಲಿ ಶ್ರೀಮಂತನೊಬ್ಬನಿದ್ದ. ಅವನಿಗೊಬ್ಬಳು ಮಗಳಿದ್ದಳು. ಅವಳ ಹೆಸರು ನ್ಹಾನ್‌ದೀಪ್. ಚೆಲುವಿಗೆ ಮತ್ತು ಚುರುಕು ಬುದ್ಧಿಗೆ ಅವಳು ದೇಶದಲ್ಲೆಲ್ಲ ಹೆಸರುವಾಸಿಯಾಗಿದ್ದಳು. ಸಮುದ್ರದ ತಡಿಯ ರಾಜಸೌಧದಲ್ಲವಳು ತನ್ನ ತಂದೆಯೊಡನೆ ವಾಸಿಸುತ್ತಿದ್ದಳು. ಪ್ರತಿದಿನ ಯಾವನಾದರೊಬ್ಬ ವಿವಾಹಾರ್ಥಿ ಬಂದು ಅವನ ಮಗಳನ್ನು ಮದುವೆ ಮಾಡಿಕೊಡುವಂತೆ ಶ್ರೀಮಂತನನ್ನು ಕೇಳುತ್ತಿದ್ದನು. ವಿವಾಹಾರ್ಥಿಗಳೊಡನೆ ತಾನೇ ಮಾತಾಡುವುದಾಗಿ ನ್ಹಾನ್‌ದೀಪ್ ಹೇಳುತ್ತಿದ್ದಳು. ತನ್ನ ಪ್ರಶ್ನೆಗಳಿಗೆ ವಿವಾಹಾರ್ಥಿಗಳು ಕೊಡುತ್ತಿದ್ದ ಉತ್ತರ ಅವಳಿಗೆ ಸಮಾಧಾನಕರವಾಗಿರಲಿಲ್ಲ. ಕೈಹಿಡಿಯ ಬಂದವರು ಸುಂದರರು, ಕುಲೀನರು, ಶ್ರೀಮಂತರು ಅಹುದಾದರೂ ಅವರ ಮತಿ ಹೃದಯಗಳೆರಡೂ ಖಾಲಿಯೆಂದು ಅವಳಿಗನಿಸುತ್ತಿತ್ತು. ತನ್ನನ್ನು ವರಿಸಬಹುದಾದ ಗಂಡು ಸುಂದರನಾಗಿರಬೇಕಷ್ಟೆ, ಅಲ್ಲ, ಬುದ್ಧಿವಂತನೂ ಆಗಿರಬೇಕೆಂದು ಅವಳು ನಿಶ್ಚಯಿಸಿಕೊಂಡಿದ್ದಳು.

ಪ್ರತಿದಿನ ಬೆಳಗ್ಗೆ ಅವಳು ತನ್ನ ಕೋಣೆಯ ಕಿಟಕಿಯ ಬಳಿ ಕುಳಿತು ಸಮುದ್ರದ ಕಡೆಗೆ ದಿಟ್ಟಿ ಬೀರುತ್ತ, ತನಗೆ ತಕ್ಕ ವರ ಲಭಿಸಬಹುದೆ ಎಂದು ಯೋಚಿಸುತ್ತಿದ್ದಳು. ಒಂದು ದಿನ ತಳತಳನೆ ಹೊಳೆಯುವ ಸಾಗರವನ್ನು ಬಿಡುಗಣ್ಣಾಗಿ ನೋಡುತ್ತಿದ್ದಾಗ, ಮನಮೋಹಕವಾದ ಹಾಡು ಅವಳ ಕಿವಿದೆರೆಗೆ ತಾಕಿತು. ಹಾಡುಗಾರನ ಶ್ರೀಕಂಠವೂ ಹಾಡಿನ ಮಾತುಗಳೂ ಅವಳ ಮನಸ್ಸನ್ನು ಸೆರೆಹಿಡಿದುವು. ಹಾಡುಗಾರನನ್ನು ತನ್ನೆಡೆಗೆ ಕೂಡಲೆ ಕರೆತರುವಂತೆ ಅವಳು ಆಳುಗಳಿಗೆ ಆಜ್ಞಾಪಿಸಿದಳು.

ಮನಮೋಹಕ ಶಾರೀರದ ಮನುಷ್ಯನನ್ನು ನೋಡುವ ಕಾತರತೆ ಕ್ಷಣಕ್ಷಣಕ್ಕೂ ಅವಳೊಳಗೆ ತೀವ್ರವಾಗುತ್ತಿತ್ತು. ತನ್ನ ಆಳೊಡನೆ ಬಂದ ವ್ಯಕ್ತಿಯನ್ನು ನೋಡಿ ನ್ಹಾನ್‌ದೀಪ್ ಭಾರಿ ನಿರಾಶೆಗೊಳಗಾದಳು. ಅವನು ಕುಳ್ಳ, ಗೂನ, ಸೊಟ್ಟ ಮೂಗ, ಸಿಡುಬು ಕಲೆಯ ಮುಖದವ, ದಟ್ಟವಾದ ಗಡ್ಡದವ. ಆದರೂ ಅವನು ಬಾಯಿ ತೆರೆದಾಗ, ಅವನ ಶ್ರೀಮಂತ ಸಂಗೀತಧ್ವನಿ ಮತ್ತೆ ಅವಳನ್ನು ಮರುಳು ಮಾಡಿತು. 'ನನ್ನ ಹೆಸರು ಗುಯೆನ್‌ಕೈ. ಕಲ್ಲಂಗಡಿ ಹಣ್ಣಿಗೆ ಪ್ರಸಿದ್ಧವಾದ ಥನಹೋವ ಎಂಬ ದೂರ ದೇಶದ ಸಂಗೀತಗಾರ ನಾನು' ಎಂದವನು ನುಡಿದನು. 'ಒಂದು ಗಾನವನ್ನು ಹಾಡು' ಎಂದು ನ್ಹಾನ್‌ದೀಪ್ ಕೇಳಿದಳು.

ಆ ಸುಂದರಿಯನ್ನು ಆನಂದಗೊಳಿಸಲು ಅವನು ಏನು ಮಾಡಲೂ ತಯಾರಾಗಿದ್ದ.

ಅವನ ಹಾಡು ಕೇಳಿದಷ್ಟು ಇನ್ನಷ್ಟು ಕೇಳುವ ಆಸೆ ಸ್ಹಾನ್‌ದೀಪಳಲ್ಲಿ ಗಳಿಗೆ ಗಳಿಗೆಗೂ ಹೆಚ್ಚುತ್ತಿತ್ತು. ಒಂದು, ಮತ್ತೊಂದು, ಇನ್ನೊಂದು ಎಂದವಳು ಕೇಳುತ್ತಿದ್ದಳು. ಅವನ ಜೀವನದ ಬಗ್ಗೆ ಮತ್ತು ಸುಂದರ ಕಾವ್ಯಮಯ ಹಾಡುಗಳ ರಚನೆಯ ಬಗ್ಗೆ ಅವಳು ಹಲವು ಪ್ರಶ್ನೆಗಳನ್ನು ಹಾಕಿದಳು. ಕೊನೆಗೆ ತಾನಲ್ಲಿಂದ ಹೋಗುವುದಾಗಿ ಹೇಳಿದ. ಅಷ್ಟುಹೊತ್ತಿಗೆ ಕತ್ತಲಾಗಿತ್ತು. ಶ್ರೀಮಂತ ಮನೆಗೆ ಹಿಂದಿರುಗುವ ಹೊತ್ತಾಗಿತ್ತು. ನಿರಾಶೆಯ ನೇತ್ರಗಳಿಂದ ದೀಪ್ ಆ ಕುರೂಪಿಯನ್ನೆ ನೋಡುತ್ತ 'ನೀನು ತುಂಬ ವಿವೇಕಿ ಹಾಗೂ ಸಂವೇದನಾಶೀಲ. ಈ ಗುಣಗಳೊಡನೆ ಚೆಲುವೂ ಸೇರಿದ್ದರೆ ನಿನ್ನಂಥ ವ್ಯಕ್ತಿಯೇ ಜಗತ್ತಿನಲ್ಲಿ ಸಿಗುತ್ತಿರಲಿಲ್ಲ. ನೀನು ಕುರೂಪಿಯಾಗಿರದಿದ್ದರೆ ನಿನ್ನನ್ನೇ ನಾನು ಮದುವೆಯಾಗುತ್ತಿದ್ದೆ' ಎಂದು ಮಾತು ಹರಿಸಿದಳು.

ಅವಳ ಆ ಮಾತಿನಿಂದ ನ್ಯೂಗೆನ್‌ಕೈಗೆ ಕೋಪವಾಗಲಿ ನೋವಾಗಲಿ ಆಗಲಿಲ್ಲ. 'ನೀನೆಷ್ಟೊ ಪ್ರಶ್ನೆಗಳನ್ನು ಕೇಳಿದ್ದೀಯೆ' ನಾನು ಇಲ್ಲಿಂದ ಹೊರಡುವ ಮುನ್ನ ಒಂದೇ ಒಂದು ಪ್ರಶ್ನೆ ಕೇಳಬಹುದೆ?' ಎಂದನು. 'ಆಗಲಿ'! ಎಂದಳವಳು. 'ನಿನ್ನ ತಂದೆ ಸಂಗ್ರಹಿಸಿದ್ದ ಪಾನೀಯ ಭಂಡಾರದಿಂದ ರುಚಿಕರವಾದ ವೈನು ಕೊಟ್ಟು ನನ್ನನ್ನು ತಣಿಸಿದ್ದೀಯೆ. ಎಂಥ ಜಾಡಿಗಳಲ್ಲಿ ವೈನು ತುಂಬಿಡಲಾಗಿದೆ ತಿಳಿಸುವೆಯಾ?' ಎಂದವನು ಪ್ರಶ್ನಿಸಿದನು. 'ಕುಂಬಾರ ಮಾಡಿದ ಮಣ್ಣಿನ ಜಾಡಿಗಳಲ್ಲಿ' ಎಂದವಳು ಪ್ರಶ್ನೆಗೆ ಬೆರಗಾಗಿ ಉತ್ತರಿಸಿದಳು.

'ನಿಜ, ನಿಜ. ಚಿನ್ನದ ಅಥವಾ ಬೆಳ್ಳಿಯ ಜಾಡಿಗಳಲ್ಲಿ ವೈನ್ ತುಂಬಿಟ್ಟಿದ್ದರೆ, ಅದು ತನ್ನ ರುಚಿ ಕಳೆದುಕೊಳ್ಳುತ್ತಿತ್ತು. ಕೆಟ್ಟು ಹೋಗುತ್ತಿತ್ತು. ಅಂತೆಯೇ ನನ್ನ ಕುರೂಪದಿಂದ ನನಗೆ ಸ್ವಲ್ಪವೂ ಕಿರಿಕಿರಿಯಾಗಿಲ್ಲ. ನನ್ನ ಹೃದಯದಲ್ಲಿ ದಯೆ ತುಂಬಿದೆ. ಮತಿ ಚುರುಕಾಗಿದೆ. ಈ ಕುರೂಪದ ಶರೀರದಲ್ಲಿದ್ದುದರಿಂದಲೇ ಅವು ಹಾಗಿರಲು ಸಾಧ್ಯವಾಗಿದೆ. ವಸ್ತುಗಳ ತೋರಿಕೆ ನನ್ನ ನಿರ್ಣಯಕ್ಕೆ ಆಧಾರವಾಗದು; ಅದರಿಂದ ನನಗೆ ಹೆಮ್ಮೆಯಾಗಲಿ ದುಃಖವಾಗಲಿ ಇಲ್ಲ. ನನಗೀಗ ಹೊತ್ತಾಯ್ತು ಹೋಗ್ತೇನೆ' ಎಂದವನು ಅವಳ ಕಡೆಗೆ ಬೆನ್ನು ತಿರುಗಿಸಿದನು.

ಸ್ಹಾನ್‌ದೀಪ್ ಕೂಡಲೇ ಬಾಗಿಲಲ್ಲಿ ಅಡ್ಡಲಾಗಿ ನಿಂತು 'ಕ್ಷಮಿಸು. ನನ್ನನ್ನು ಮದುವೆಯಾಗಲು ನಿಮ್ಮೊಪ್ಪಿಗೆ ಕೊಡಿ. ನನ್ನ ತಂದೆ ಮನೆಗೆ ಮರಳಿದ ಕೂಡಲೇ, ತಕ್ಕ ವರ ಸಿಕ್ಕಿದ್ದಾನೆ ಎಂದವರಿಗೆ ತಿಳಿಸುತ್ತೇನೆ' ಎಂಬುದಾಗಿ ಅವನನ್ನು ತಡೆದಳು.[೩]

ವಿಯಟ್ನಾಮ್‌ನ ಈ ಜಾನಪದ ಕಥೆಯನ್ನೋದಿದಾಗ ಜನ್ನನ ಯಶೋಧರ ಚರಿತೆಯ ಅಮೃತಮತಿ ಅಷ್ಟಾವಂಕರ ಕತೆ ನೆನಪಿಗೆ ಬರುತ್ತದೆ. ಯಶೋಧರ ಚರಿತೆಯ ಆ ಕಥೆಗೂ ಜಾನಪದ ಕಥೆಯೊಂದು ಮೂಲದಲ್ಲಿದ್ದಿರಬಾರದೆ? ಜಗತ್ತಿನ ಇತರ ಕಡೆಗಳಲ್ಲಿ ಇದೇ ಆಶಯದ ಕಥೆಗಳು ದೊರೆಯಬಹುದೇನೊ ಎನಿಸುತ್ತದೆ. ಈ ಬಗ್ಗೆ ಸಂಶೋಧನೆ ಅಗತ್ಯ.

---

೩ ಆಕರ: ೨೨-೧೦-೧೯೯೪ನೆಯ ದಿನಾಂಕದ 'ಹಿಂದೂ'.

ಅವಳ ತಾಯಿ

ಸಿ. ನಾಗಣ್ಣ

[ಮೂಲ ಕಥೆ "ಹರ್ ಮದರ್", ಇದರ ಕರ್ತೃ ಅಂಜನಾ ಅಪ್ಪಚಾನಾ ಅವರು. ೧೯೮೪ರಲ್ಲಿ ಇವರು ತಮ್ಮ ಪತಿಯೊಡನೆ ಅಮೆರಿಕಾ ದೇಶಕ್ಕೆ ಹೋಗಿ ನೆಲೆಸಿದ್ದಾರೆ; ಇಬ್ಬರೂ ಈಗ ಅಲ್ಲಿನ ಅರಿಜೋನಾ ಸ್ಟೇಟ್ ವಿಶ್ವವಿದ್ಯಾನಿಲಯದಲ್ಲಿ ಬೋಧಿಸುತ್ತಿದ್ದಾರೆ. ಅಂಜನಾ ಅವರ ಅನೇಕ ಕಥೆಗಳು ಭಾರತ ಮತ್ತು ಅಮೆರಿಕಾದ ನಿಯತ ಕಾಲಿಕೆಗಳಲ್ಲಿ ಪ್ರಕಟವಾಗಿವೆ. ಪ್ರಸ್ತುತ ಕಥೆ "ಹರ್ ಮದರ್" "ದ ೧೯೮೯ ಓ. ಹೆನ್ರಿ ಫೆಸ್ಟಿವಲ್ ಸ್ಟೋರೀಸ್" ಎಂಬ ಸಂಕಲನದಲ್ಲಿ ಮೊದಲು ಪ್ರಕಟವಾಯಿತು.]

ಅಮೆರಿಕಾದಿಂದ ಮಗಳು ಬರೆದ ಮೊದಲ ನೆಯ ಕಾಗದ ಕೈಸೇರುತ್ತಿದ್ದ ಹಾಗೆಯೇ ಆಕೆ ಬಹಳ ದುಃಖಗೊಂಡರು. ಇಲ್ಲಿ ಎಲ್ಲಾ ಚೆನ್ನಾಗಿದೆ ಎಂದು ಮಗಳು ಬರೆದಿದ್ದಳು. ವಿಮಾನಯಾನ ಚೆನ್ನಾಗಿತ್ತು, ವಿಮಾನ ನಿಲ್ದಾಣದಲ್ಲಿ ತನ್ನನ್ನು ಭೇಟಿ ಮಾಡಿದ ಪ್ರೊಫೆಸರ್ ಬಹಳ ಒಳ್ಳೆಯವರು, ಅವಳು ಸೇರಿದ್ದ ವಿಶ್ವವಿದ್ಯಾನಿಲಯ ಚೆನ್ನಾಗಿತ್ತು, ಇಬ್ಬರು (ಬಹಳ ಒಳ್ಳೆಯ) ಅಮೆರಿಕಾದ ಹುಡುಗಿಯರೊಡನೆ ಅವಳು ಹಂಚಿಕೊಂಡಿದ್ದ ಆ ಮನೆ ಅದೂ ಚೆನ್ನಾಗಿತ್ತು, ಅವಳ ತರಗತಿಗಳು ಪರವಾಗಿರಲಿಲ್ಲ. ಅವಳ ಬೋಧನೆಯಂತೂ ಆಶ್ಚರ್ಯಕರವಾದ ರೀತಿಯಲ್ಲಿ ಚೆನ್ನಾಗಿದ್ದಿತು. ತಾನು ಚೆನ್ನಾಗಿದ್ದೀನಿ ನೀನು ಮತ್ತು ಅಪ್ಪಾ ಚೆನ್ನಾಗಿರುವಿರಾಗಿ ನಿರೀಕ್ಷಿಸುವೆನೆಂದು ಅವಳು ತನ್ನ ಪತ್ರವನ್ನು ಮುಗಿಸಿದ್ದಳು. ಒತ್ತರಿಸಿ ಬಂದ ದುಃಖವನ್ನು ತಡೆಯಲಾರದೆ ತಾಯಿ ನೋವು ಮತ್ತು ಜಿಗುಪ್ಸೆಯಿಂದ ಚೆನ್ನಾಗಿ ಅತ್ತಿದ್ದಳು. ಎಲ್ಲವನ್ನೂ 'ಚೆನ್ನಾಗಿದೆ', 'ಹಿತವಾಗಿದೆ', 'ಓಕೆ' ಅಂತ ಬರೆದಿರುವ ಮಗಳು ತೌಲನಿಕ ಸಾಹಿತ್ಯದಲ್ಲಿ ಪಿಎಚ್‌ಡಿ ಮಾಡುತ್ತಿದ್ದಾಳೆ ಎಂದು ಯಾರಾದರೂ ನಂಬುವುದಕ್ಕಾಗುತ್ತದೆಯೇ? ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕವನ್ನು ಗೆದ್ದವಳು ಇವಳೇ ಎಂದು ಹೇಳುವುದಕ್ಕೆ ಸಾಧ್ಯವೆ? ಅಷ್ಟು ಚೆನ್ನಾಗಿ ಮಾತನಾಡುತ್ತಿದ್ದ ಅಷ್ಟು ಉತ್ಕಟವಾಗಿ ಆಲೋಚಿಸುತ್ತಿದ್ದ ಹುಡುಗಿ ಹೀಗೆ ಬೋಳುಬೋಳಾಗಿ ನಿರ್ಜೀವವಾದ ವಿಶೇಷಣಗಳ ಏಕತಾನತೆಗೆ ಮುಜುಗರಗೊಳ್ಳದೆ ಬರೆಯುವಳೆಂದು ಯಾರಾದರೂ ನಂಬುವುದ

ಕ್ಕಾಗುತ್ತದೆಯೇ? ಪತ್ರ ಬರೆಯುತ್ತೇನೆ ಎಂದು ಮಾತುಕೊಟ್ಟಿದ್ದವಳು ಅದಕ್ಕೆ ತಪ್ಪದಂತೆ ಪತ್ರವನ್ನೇನೋ ಬರೆದಿದ್ದಳು, ಹಬೆ ಆವರಿಸಿದ ಕನ್ನಡಕದ ಗಾಜನ್ನು ಒರೆಸಿಕೊಳ್ಳುತ್ತಾ ತಾಯಿ ಚಿಂತಿಸಿದಳು. ತನ್ನ ಮಗಳ ಹಸ್ತಾಕ್ಷರವನ್ನು ಪರೀಕ್ಷಿಸಿದಳು. ಆ ಹಸ್ತಾಕ್ಷರದಲ್ಲಿ ಯಾವ ಬಗೆಯ ಒಂಟಿತನದ ದಿಗಿಲಾಗಲೀ, ಅಭದ್ರತೆಯಾಗಲಿ ಕಾಣಲಿಲ್ಲ—ಬರವಣಿಗೆ ದುಂಡಗೆ, ಸ್ಪಷ್ಟವಾಗಿತ್ತು. ವಿಮಾನ ನಿಲ್ದಾಣದಲ್ಲಿ ಹೆಚ್ಚುಗೆಳೆತನದಿಂದ ಮಾತನಾಡಿಸಿದ್ದ ಆ ಗಂಡಸು ಅವಳ ಪಕ್ಕ ಕುಳಿತುಕೊಂಡನೋ ಇಲ್ಲವೋ ಎಂದು ತಿಳಿಸಿರಲಿಲ್ಲ. ಸದ್ಯ ಅವನು ಪಕ್ಕ ಕುಳಿತುಕೊಳ್ಳದಿದ್ದರೆ ಒಳಿತು ಎಂದುಕೊಂಡಳು. ಯಾವುದಾದರೂ ಹೊರದೇಶಕ್ಕೆ ಅಂತ ಭಾರತೀಯ ಗಂಡಸರು ವಿಮಾನ ಏರಿ ಕುಳಿತರು ಎಂದರೆ ಪ್ರಾಪ್ತವಾಗುವ ಅನಾಮಧೇಯತೆ ಅವರಿಗೆ ಮರುಳು ತರುತ್ತದೆ. ಪಾನಮತ್ತರಾಗಿ ಗಗನಸಖಿಯರನ್ನು ಮತ್ತಿತರರನ್ನು ಗೋಳು ಹೊಯ್ದುಕೊಳ್ಳುವುದೇ ಅಲ್ಲದೆ ಬಹಳ ಸೊಗಸಾಗಿ ತಾವು ಮೋಜು ಮಾಡುತ್ತಿದ್ದೇವೆ ಎಂದುಕೊಳ್ಳುತ್ತಾರೆ. ನಮ್ಮ ಜೊತೆ ವಾಗ್ವಾದ ಮಾಡುವ ಹುಡುಗಿ ಇವಳಾದರೂ ಇಂಥ ಗಂಡಸರನ್ನು ಹೇಗೆ ನಿಭಾಯಿಸಬೇಕೆಂದು ಅವಳಿಗೆ ಗೊತ್ತಿಲ್ಲ ಎಂದುಕೊಂಡರು—ಹುಬ್ಬು ಗಂಟಿಕ್ಕಿ ಊಟದ ಟೇಬಲ್‌ನ ಮೇಲಿಟ್ಟಿದ್ದ ಫೈಲಿನಿಂದ ಕಾಗದವೊಂದನ್ನು ತೆಗೆದುಕೊಂಡು ತಾಯಿ ಪತ್ರ ಬರೆಯಲು ಶುರು ಮಾಡಿದಳು. ಸರಿಯಾಗಿ ಊಟ ಮಾಡು, ಎಂದು ಬರೆದಳು. ಸಾಕಷ್ಟು ಹಾಲು, ಬೆಣ್ಣೆ ಮತ್ತು ಕಾಳುಗಳನ್ನು ಉಪಯೋಗಿಸು. ಯದ್ವಾತದ್ವಾ ತಿಂದರೆ ಬೇಗ ಮುದಿಯಾಗ್ತೀಯಾ. ಅದಕ್ಕೇನೆ ಹೊರದೇಶದ ಹೆಂಗಸರು ಹಾಗೆ ಕಾಣೋದು. ನೋಡೋದಕ್ಕೆ ಹಂಚಿ ಕಡ್ಡಿ ತರಹ ಅವರು ಇದ್ದರೂ ಅವರ ಮುಖದ ಮೇಲಿನ ಗೆರೆಗಳನ್ನು ನೋಡಬೇಕು. ಮೂವತ್ತು ವಯಸ್ಸಿಗೇನೇ ಎಲ್ಲಾ ಮುಗಿದ ಹಾಗೆ ತೋರುತ್ತಾರೆ. ಹಾಗಾಗಿ ಆ ಮೂರ್ಖರ ತರಹ ಊಟ ತಿಂಡಿಯಲ್ಲಿ ಅವರನ್ನ ಅನುಸರಿಸಬೇಡ. ವಾರಕ್ಕೊಂದಾವರ್ತಿಯಾದ್ರೂ ತಲೆಗೆ ಎಣ್ಣೆ ಹಾಕಬೇಕು, ಆ ಹಾಳು ಶಾಂಪೂ ಹಚ್ಚಬೇಡ. ಅದು ಇದು ಹಚ್ಕೊಂಡ್ರೆ ತಲೆ ಹಾಳಾಗ್ತದೆ. ಅಮೆರಿಕದಲ್ಲಿ ನೂರೆಂಟು ತರಹದ ಶಾಂಪೂ ಸಿಗಬಹುದು, ಆದರೆ ಅಮೆರಿಕದ ಹೆಂಗಸರ ತಲೆಕೂದಲು ಭಾರತದ ಹೆಣ್ಣುಮಕ್ಕಳ ಕೇಶರಾಶಿಯ ಮುಂದೆ ಏನೇನೂ ಅಲ್ಲ. ನಿಮ್ಮ ಅಜ್ಜಿ ಸಾಯುವ ತನಕ ಕಪ್ಪಗೆ ಕಂಗೊಳಿಸುವ ಕೇಶರಾಶಿಯನ್ನು ಹೊಂದಿದ್ದಳು.

ಎರಡು ತಿಂಗಳ ಹಿಂದೆ ಒಂದು ದಿನ ಇದ್ದಕ್ಕಿದ್ದ ಹಾಗೆಯೇ ತನ್ನ ಮಗಳು ತನ್ನ ನೀಳವಾದ ತಲೆಗೂದಲನ್ನು ತುಂಡಗೆ ಕತ್ತರಿಸಿಕೊಂಡಿದ್ದಳು. ಹೇಳದೇ ಕೇಳದೆ ಈ ರೀತಿಯಾಗಿ ಅವಳು ಕೂದಲು ಕತ್ತರಿಸಿಕೊಂಡದ್ದನ್ನು ನೆನೆದರೆ ಈಗಲೂ ಅವಳ ಅಮ್ಮನಿಗೆ ವ್ಯಸನವಾಗುತ್ತಿತ್ತು. ಆ ಸಂಜೆ ಮಗಳು ಬಂದಳು ಅಂತ ಬಾಗಿಲು ತೆರೆದರೆ ಎದುರಿಗೆ ನಿಂತಿದ್ದವಳ ಕೇಶರಾಶಿ ಮಾಯವಾಗಿ ಕೇವಲ ಕಿವಿಯವರೆಗೆ ಮಾತ್ರ ಬರುವಂಥ ತುಂಡುಗೂದಲು ಕಾಣಿಸಿತು. ಅವಳು ಮಾತ್ರ ತನ್ನ ತಂದೆಯ ಕಡೆಯಾಗಲೀ ಅಥವಾ ತಾಯಿಯ ಕಡೆಯಾಗಲೀ ನೋಡದೆ

ಬೇರೆಲ್ಲಿಯೋ ದೃಷ್ಟಿ ನೆಟ್ಟಿದ್ದಳು. ಅವಳ ಮುಖದ ಮೇಲೆ ಬಿಡುಗಡೆ, ತಿರಸ್ಕಾರ ಮತ್ತು ಕೋಪ ಇವೆಲ್ಲವುಗಳ ಮಿಶ್ರಣ ವಿದ್ದಂತೆ ತೋರಿತು. ಅವರ ತಂದೆ ಮಾತ್ರ ವಿಚಿತ್ರವಾಗಿ ಮೂತಿ ಸೊಟ್ಟಗೆ ಮಾಡಿ ಕೊಂಡು, ಯಾಕೆ ಹೀಗೆ? ಎಂಬಂತೆ ಅವಳ ಕಡೆಯೇ ನೋಡುತ್ತಿದ್ದರು. ನಗೆಗೆ ತುಂಡಾ ಗಿದ್ದರೇನೇ ಚೆನ್ನ ಎಂದಿದ್ದಳು. ಹದಿನೈದು ವರ್ಷಗಳಿಂದ ಆರೈಕೆ ಮಾಡಿ, ವಾರವಾರವೂ ತೈಲವೆರೆದು ಪೋಷಿಸಿದ ಕೂದಲು, ಅದನ್ನ ಒಂದೇ ಏಟಿಗೆ ತುಂಡರಿಸಿಕೊಂಡೆಯಾ? ನಮ್ಮ ಮೇಲೆ ಕೋಪಗೊಂಡು ಈ ರೀತಿ ಯಾಗಿ ಸೇಡು ತೀರಿಸಿಕೊಳ್ಳಲು ಮನಸ್ಸು ಮಾಡಿದೆಯಾ? ಎಂದು ತಾಯಿ ಅವಳ ಕೆನ್ನೆ ಮುಟ್ಟಿದರು. ಪ್ರೀತಿಯಿಂದ ಒತ್ತಿದ ಆ ಕೈಯನ್ನು ನಿವಾರಿಸಿಕೊಂಡು, ತಂದೆ ತಾಯಿಗಳು ಮತ್ತು ಅವರ ಹಿಂದೆ ನಿಂತಿದ್ದ ಭಾವನನ್ನೂ ದಾಟಿಕೊಂಡು ಅವಳು ತನ್ನ ಕೊಠಡಿಗೆ ನಡೆದಳು. ತಂದೆಯ ಪಾಲಿಗಾದರೆ ಯಾವುದೋ ಒಂದು ಅಂಗವನ್ನು ಕತ್ತರಿ ಸಿದ ಹಾಗೆ ಅನ್ನಿಸಿತ್ತು. ವರಾಂಡಾದ ಮೂಲೆಯ ಕುರ್ಚಿಯಲ್ಲಿ ಕುಳಿತು ಅನೇಕ ದಿನಗಳವರೆಗೆ ಅವರು ಇದರ ಬಗ್ಗೆ ಯೋಚಿ ಸಿದರು. ತಾಯಿ ಮಾತ್ರ ನಮಗೆ ನೋವುಂಟು ಮಾಡುವ ಕಲೆಯನ್ನು ನೀನು ಕರಗತ ಮಾಡಿಕೊಂಡಿದ್ದಿ ಎಂದು ಗೊಣಗಿ ದರು.

ಕಡೆಗೂ ನಿಮ್ಮ ಭಾವನವರಿಗೆ ಮೂರು ಕೊಠಡಿಯ ಮನೆಯೊಂದು ಅಲಾಟ್ ಆಗಿ ಕಳೆದ ವಾರ ಅವರು ಅಲ್ಲಿಗೆ ಹೋದರು ಎಂದು ಬರೆದಳು. ಈ ಒಂದೆರಡು ತಿಂಗಳು ಗಳಿಂದ ನಮ್ಮ ಜೊತೆ ಇದ್ದು ಅವರಿಗೆ ಕೊಂಚ ಬೇಸರವಾಗಿತ್ತೋ ಏನೋ ಅಂತೂ ಅವರೂ ಸಂತೋಷವಾಗಿಯೇ ತಮ್ಮ ಮನೆಗೆ ಹೋದರು. ಈಗ ನೋಡು ಆ ದೊಡ್ಡ ಮನೆಯಲ್ಲಿ ತಾವೊಬ್ಬರೇ, ಎರಡು ಮಂದಿ ಆಳುಗಳು, ನಿಮ್ಮ ಅಕ್ಕ ಮಾತ್ರ ಬೊಂಬಾಯಿಯಲ್ಲೇ ಮುಂದುವರಿದಿದ್ದಾಳೆ. ಗಂಡ ಹೆಂಡತಿ ಬೇರೆ ಬೇರೆ ಊರುಗಳಲ್ಲಿ ಇದ್ದುಕೊಂಡೂ ದಾಂಪತ್ಯ ಸಾಗಿಸುವುದು ಅಂತ ನಿಮ್ಮಕ್ಕನ ಅಭಿಮತ; ಅವಳೂ ನಿನ್ನ ಹಾಗೇನೇ, ನನ್ನ ಅಭಿಪ್ರಾಯ ಅಂದರೆ ಸುತರಾಂ ಒಗ್ಗದು. ಹೀಗೇನೇ ಬಹಳ ವರ್ಷ ಅವರು ಕಾಲ ನೂಕ್ತಾರೆ ಅಂತ ಕಾಣುತ್ತೆ, ಸದ್ಯಕ್ಕೆ ಅವರಿಗೆ ಮಕ್ಕಳು ಬೇಡ, ಸದ್ಯಕ್ಕೆ ಅವರು ಒಟ್ಟಿಗೆ ಇರುವುದು ಬೇಡ, ಒಂದು ದಿನ ನನ್ನ ಹಾಗೆ, ನಿಮ್ಮ ಪ್ಪನ ಹಾಗೆ ಮುದಿಯಾದ ಮೇಲೆ ಅವರು ಯಾತಕ್ಕಾದರೂ ಬದುಕಬೇಕು ಅಂತ ಅನ್ನುವ ಕಾಲ ಬರುತ್ತೆ. ನೀವಿಬ್ಬರೂ ಇಲ್ಲದೇ ಇದ್ರೆ ನಾವು ತಾನೇ ಏನು ಮಾಡ್ತಿದ್ವಿ? ನಿನ್ನ ಅಭಿಪ್ರಾಯವಂತೂ ಗೊತ್ತಿದೆ. ನೀನು ಯಾವತ್ತೂ ನಿನ್ನ ಅಕ್ಕ ಮತ್ತು ಭಾವನನ್ನೇ ಬೆಂಬಲಿಸಿ ಅವರ ವಿಚಿತ್ರವಾದ ಮದುವೆಯನ್ನು ಒಪ್ಪಿ ಕೊಳ್ಳುವವಳು. ಪ್ರಾಯಶಃ ನಿನ್ನ ಕನಸೂ ಅದೇ ಇರಬಹುದು. ಈಗಂತೂ ಸಾಧಾರಣ ವಾದ ಕಲ್ಪನೆ ಯಾರಿಗೂ ಬೇಕಾದ ಹಾಗೆ ತೋರುವುದಿಲ್ಲ.

ಪ್ರೀತಿ, ಪ್ರೇಮ, ವಿಶಾಲವಾದ ಮನೆ, ರೇಷ್ಮೆ ಸೀರೆಗಳು ಮತ್ತು ಒಡವೆಗಳು ಇವು ಗಳ ಬಗ್ಗೆ ತಾಯಿ ಒಮ್ಮೆ ಕನಸು ಕಂಡಿ ದ್ದಳು. ಆದರೆ ತನ್ನ ಗಂಡ ತನ್ನ ಉದ್ಯೋಗ ದಲ್ಲಿ ಒದ್ದಾಡುವುದನ್ನು ಕಂಡದ್ದು,

ಮಕ್ಕಳು ಅವತರಿಸಿದ್ದು, ಜೊತೆಜೊತೇನೇ ಗಂಡನ ತಂಗಿಯರ ಮದುವೆ—ಇವುಗಳ ಮಧ್ಯೆ ಅವಳ ಕನಸು ಭಗ್ನವಾಗಿತ್ತು. ಮುಂದಿನ ಹದಿನೈದು ವರ್ಷಗಳಲ್ಲಿ ಅವಳು ತಲೆಹಾಕಿದ್ದು ತನ್ನ ಹೆಣ್ಣುಮಕ್ಕಳಿಗಾಗಿ ರೇಷ್ಮೆ ಸೀರೆಗಳು ಮತ್ತು ಒಡವೆಗಳು—ಆದರೆ ಆ ಹೆಣ್ಣುಮಕ್ಕಳಿಗೆ ಮಾತ್ರ ಇವುಗಳಲ್ಲಿ ಒಂದಿನಿತೂ ವ್ಯಾಮೋಹವಿಲ್ಲ. ದೊಡ್ಡ ಮಗಳು ರಿಜಿಸ್ಟರ್ಡ್ ಮ್ಯಾರೇಜ್ ಮಾಡಿಕೊಂಡಳು, ಅವಳ ಗಂಡನೂ ಅಂಥವನೇ. ಅವನಾಗಲೀ, ಇವಳಾಗಲೀ ತಮ್ಮ ತಂದೆ ತಾಯಿಗಳಿಂದ ಒಂದು ಕರವಸ್ತ್ರವನ್ನೂ ತೆಗೆದುಕೊಂಡವರಲ್ಲ. ಮದುವೆ ಆರತಕ್ಷತೆಗೂ ಒಪ್ಪಲಿಲ್ಲ ಅವರು. ಚಿಕ್ಕವಳಂತೂ ದೇಶ ಬಿಡುವುದಕ್ಕೆ ಮೊದಲು ಖಡಾಖಂಡಿತವಾಗಿ ಹೇಳಿದ್ದಳು. ನನಗೆ ಮದ್ವೆ ಯೋಚನೆಯೇ ಇಲ್ಲ ಎಂದು.

ವರಾಂಡದಲ್ಲಿ ಕುಳಿತ ಗಂಡನ ಬೆನ್ನು ಕಾಣಿಸಿತು ತಾಯಿಗೆ. ಕಛೇರಿಯಿಂದ ಬಂದ ನಂತರ ಅವರು ತೊಡಗುವ ನಿತ್ಯ ಕಾಯಕವೆಂದರೆ ಇದೆ. ವರಾಂಡದಲ್ಲಿ ಕುಳಿತು ತನ್ನ ಮುದ್ದಿನ ಹೆಣ್ಣುಮಕ್ಕಳ ಬಗ್ಗೆ ಚಿಂತಿಸುವುದು, ಆ ಸಮಯದಲ್ಲಿ ಅಡುಗೆ ಮಾಡ್ತಾ, ಹೋದವರು ಬಂದವರನ್ನ ನೋಡಿಕೊಳ್ಳುತ್ತಾ, ಅವರ ಅಕ್ಕ ತಂಗಿಯರಿಗೆ ಮತ್ತು ತಮ್ಮ ಅಂಕ್ಕತಂಗಿಯರಿಗೆ ಪತ್ರ ಬರೆಯುವುದು ಈ ಅಮ್ಮನ ಕೆಲಸ.

ಹೇಗೆ ನಿಭಾಯಿಸ್ತೀಯಾ ರಾಣಿ? ಎಂದು ಬರೆದಳು. ನಿನಗೆ ಬೇಕಾದ್ದು ಬೇಡವಾದ್ದಕ್ಕೆಲ್ಲಾ ಅಮ್ಮ ಇರಬೇಕಾಗಿತ್ತು. ನಾನು ನಿನ್ನ ಹೆತ್ತವಳು, ನಿನಗೋಸ್ಕರ ನಾನು ಏನು ಮಾಡೋದಕ್ಕೂ ಮುಜುಗರ ಪಟ್ಟುಕೊಳ್ಳಲ್ಲ, ಆದರೆ ನೀನು ಮದುವೆಯಾದವನಿಗೋಸ್ಕರ ಕೆಲಸಗಳನ್ನ ಮಾಡಬೇಕಾಗುತ್ತೆ, ನಿನಗೆ ಸೂಜಿಗೆ ದಾರ ಪೋಣಿಸುವುದಕ್ಕೂ ಬರೋದಿಲ್ವಲ್ಲ ಚಿನ್ನ?

ಅವಳ ಮಗಳಿಗೆ ಮಾತ್ರ ಮದುವೆ ಬೇಕಾಗಿರಲಿಲ್ಲ. ಕಳೆದ ಕೆಲವು ತಿಂಗಳುಗಳಿಂದ ಬಹಳ ಖಡಾಖಂಡಿತವಾಗಿಯೇ ಅವಳು ಆ ಬಗ್ಗೆ ತಿಳಿಯಹೇಳಿದ್ದಳು. ಅಪ್ಪ ಅಮ್ಮನನ್ನ ದೂರಿದರು. ಹೆಣ್ಣುಮಕ್ಕಳಿಗೆ ಅಡುಗೆ ಕಲಿಸಲಿಲ್ಲ, ಹೊಲಿಗೆ ಕಲಿಸಲಿಲ್ಲ, ಅವರು ಮನಸ್ಸಿಗೆ ಬಂದ ಹಾಗೆ ಬದುಕಲಿಕ್ಕೆ ಬಿಟ್ಟುಬಿಟ್ಟು ಈಗ ಯೋಚಿಸಿದರೇನು ಬಂತು? ಪರಿಸ್ಥಿತಿ ಹೀಗಾಗುವುದಕ್ಕೆ ತಾನೇ ಹೊಣೆಗಾರಳಾಗಿ ಮೊಮ್ಮಕ್ಕಳನ್ನು ಆಡಿಸುವ ಭಾಗ್ಯವಿಲ್ಲವಲ್ಲ ಅಂತ ಈಗ ಹಲುಬಿದರೆ ನ್ಯಾಯವೆ? ಅಪ್ಪ ಈ ಬಗೆಯಾಗಿ ಮೂದಲಿಸಿದಾಗ ಅಮ್ಮ ಅವರ ಜೊತೆ ಜಗಳವಾಡುವುದುಂಟು, ಉಳಿದಂತೆ ತನ್ನೊಳಗೇ ಗೊಣಗುತ್ತಾ ಇಲ್ಲವೇ ಕಣ್ಣೀರು ಗರೆಯುತ್ತಾ ಕಾಲ ಹಾಕುವುದುಂಟು.

ಅಮ್ಮ ತನ್ನ ಲೇಖಣಿ ಪಕ್ಕಕ್ಕಿಟ್ಟಳು. ತನ್ನ ಮಗಳಿಗೆ ಉಪನ್ಯಾಸ ಕೊಡಬಾರದು ಎಂದು ಅದೆಷ್ಟು ಬಾರಿ ಅವಳು ಪ್ರತಿಜ್ಞೆ ಮಾಡಿಲ್ಲ? ಇಷ್ಟು ಕುಪಿತಳಾಗಿ ನಮ್ಮನ್ನು ನೀನು ತೊರೆದು ಹೋದದ್ದೇಕೆ ಎಂದಷ್ಟೇ ಅವಳು ಕೇಳಬಯಸಿದ್ದು. ಆದರೆ ಈಗ ನೋಡಿದರೆ ಪುಟಗಟ್ಟಳೆ ಪುರಾಣ ಬರೆಯುತ್ತಿದ್ದಾಳೆ. ನಿನಗೋಸ್ಕರ ನಾವು ಏನೆಲ್ಲಾ ಮಾಡಲಿಲ್ಲ? ಏಕೆ, ಏಕೆ ಹೀಗೆ ಮಾಡಿದೆ? ಇಲ್ಲ, ಅವಳನ್ನ ಬಲವಂತ ಮಾಡುವುದಿಲ್ಲ. ಪಾಪ, ಮಗುವನ್ನು ನಾನಾ ಬಗೆಯಾಗಿ ಪೀಡಿಸಬಾರದು.

ಎಷ್ಟು ದೂರವಿದ್ದೀಯ ನನ್ನ ಚಿನ್ನ, ಎಂದು ಬರೆದಳು. ಇಡೀ ಜಗತ್ತಿನ ವಿರುದ್ಧ ಇಷ್ಟು ಕೋಪಗೊಂಡು ನೀನು ಹಾಗೆ ಹೊರಟುಹೋಗಬಹುದಾ ? ನಿನ್ನನ್ನು ಸ್ವೇಚ್ಛೆಯಾಗಿ ನಾನು ಬೆಳೆಸಿದ ಕಾರಣ ದಿಂದಲೇ ಎಲ್ಲರನ್ನೂ ತೊರೆದು ಹೋಗು ವಷ್ಟು ಧಾರ್ಷ್ಟ್ಯ ನಿನಗೆ ಬಂದದ್ದೆಂದು ನಿನ್ನ ಅಪ್ಪ ಆಪಾದಿಸುತ್ತಾರೆ. ತಪ್ಪು ನನ್ನದೇ ಎಂದು ಅವರನ್ನುತ್ತಾರೆ. ನನ್ನ ದಾಂಪತ್ಯ ಜೀವನದಲ್ಲಿ ಅದೆಷ್ಟು ಬಾರಿ ನಾನು ಈ ಪಲ್ಲವಿಯನ್ನು ಕೇಳಿಲ್ಲ? ನಿನಗೆ ಪಾಠ ಹೇಳಿಕೊಟ್ಟು, ಲಾಲಿಸಿ ಪಾಲಿಸಿ, ಆರೈಕೆ ಮಾಡಿದ್ದೇನಾದರೂ ನಿನ್ನ ಅಪ್ಪ ನಿನ್ನನ್ನು ಹೆಚ್ಚು ಅರ್ಥಮಾಡಿಕೊಂಡಿರುವುದಕ್ಕೆ ಕಾರಣ ನೀನು ಅವರನ್ನೇ ಹೆಚ್ಚು ಹೋಲು ತ್ತೀಯಂತೆ. ನಾನದನ್ನು ಅಲ್ಲಗಳೆಯಲಾರೆ, ಏಕೆಂದರೆ ಅದು ವಾಸ್ತವ ಸಂಗತಿಯೂ ಕೂಡ ಹೌದು. ಅವರು ನಿನಗೆ ಮತ್ತು ನಿನ್ನಕ್ಕನಿಗೆ ಬರೇ ಚಾಕೊಲೇಟ್ ಮತ್ತು ಪುಸ್ತಕಗಳನ್ನು ಕೊಟ್ಟರು ಅಂತ ಹೇಳಿದರೆ ಸುಳ್ಳು ಹೇಳಿದ ಹಾಗಾಗುತ್ತದೆ.

ಮಾರನೇ ದಿನ ತನ್ನ ಗಂಡ ಕಛೇರಿಗೆ ತೆರಳಿದ ನಂತರ ತಾಯಿ ಕಾಗದ ಬರೆಯು ವುದನ್ನು ಮುಂದುವರಿಸಿದಳು. ಹಸ್ತಾಕ್ಷರ ವನ್ನು ಇನ್ನೂ ಸಣ್ಣಗೆ ಕೊರೆಯಲು ಮನಸ್ಸು ಮಾಡಿದ್ದೇಕೆಂದರೆ ಏರ್‌ಮೇಲ್ ಹಾಳೆಯಲ್ಲಿ ತುಂಬಾ ವಿಷಯಗಳನ್ನು ಹೇಳು ವುದಿತ್ತು. ದೀರ್ಘವಾದ ಪತ್ರವನ್ನು ನೀನು ಬರೆಯಬೇಕು ರಾಣಿ ಎಂದು ಕಾಣಿಸಿದಳು, ನನ್ನ ಜೊತೆ ಮಾತನಾಡುತ್ತಿದ್ದೀಯೇನೋ ಎನ್ನುವ ಹಾಗೆ ಇರಬೇಕು ನಿನ್ನ ಬರ ವಣಿಗೆ. ಅಲ್ಲಿನ ಮಾರ್ಗಗಳನ್ನ, ಕಟ್ಟಡಗಳನ್ನ ಮತ್ತು ಜನರನ್ನು ವರ್ಣಿಸಿ ಬರೆ. ನಿನ್ನ ಮಾಮೂಲಿ ಬಿಗುಮಾನ ತೋರಬೇಡ, ನಿನ್ನ ಕಣ್ಣು ಮೂಲಕ ನಿನ್ನ ಅಮ್ಮ ಅಮೆರಿಕಾವನ್ನು ಕಾಣಲಿ. ನಾನು ಮರೆ ಯೋದಕ್ಕೆ ಮೊದಲು ನಿನಗೆ ಅಗತ್ಯವಾಗಿ ಹೇಳಬೇಕಾದ ಮತ್ತೊಂದು ವಿಚಾರವೆಂದರೆ ನೀನು ಪ್ರತಿನಿತ್ಯ ಸ್ನಾನ ಮಾಡಬೇಕು. ಚಳಿಗಿಳಿ ಅಂತ ತಪ್ಪಿಸಿಬಿಟ್ಟೀಯೇ. ಅಲ್ಲಿನ ಜನ ಕೊಳಕರಾಗಿರಬಹುದು. ಆದರೆ, ನನಗೆ ನೆನಪಿರುವ ಹಾಗೆ ಇಂಗ್ಲೀಷಿನವರು ಮತ್ತು ಉಳಿದ ಯೂರೋಪಿನವರು ಸ್ನಾನದ ಬಗ್ಗೆ ಅಸಡ್ಡೆ ತೋರುವವರು. ನಿನ್ನ ನೈನಾ ಆಂಟಿ ಯೂರೋಪು ಪ್ರವಾಸ ಮುಗಿಸಿ ಕೊಂಡು ಬಂದ ಮೇಲೆ ಹೇಳ್ತಿದ್ದಳು, ಅಲ್ಲಿನ ಜನ ಭಾಳ ಕೊಳಕರು ಅಂತ. ಅಮೆರಿಕಾ ದವರು ಭಾರತೀಯರಷ್ಟೇ ಶುಭ್ರ ವಾಗಿರ್ತಾರೆ.

ಅಮ್ಮ ತನ್ನ ಮೂಗು ಸೀಟಿ, ಕೆನ್ನೆ ಒರೆಸಿಕೊಂಡಳು. ಎರಡು ವರ್ಷ, ಅಥವಾ ಅದಕ್ಕಿಂತ ಕೊಂಚ ಹೆಚ್ಚು ಸಮಯ ತೊಗೊ, ಆದ್ರೆ ಬಂದುಬಿಡು ಎಂದು ಬರೆ ದಳು. ನಮಗೆಷ್ಟು ದಿಗಿಲು, ಎಷ್ಟು ದಿಗಿಲು. ನೀನೇನಾದ್ರೂ ಗಂಡನ ಜೊತೆಯಲ್ಲಿ ಹೊರ ದೇಶಕ್ಕೆ ಹೋಗಿದ್ರೆ ನಮಗೆ ನೆಮ್ಮದಿ ಇರ್ತಿತ್ತು, ಆದರೆ ಈಗ? ನಿನಗೇನಾದ್ರೂ ಹುಷಾರು ಗಿಷಾರು ತಪ್ಪಿದ್ರೆ ನಿನ್ನನ್ನು ನೋಡಿಕೊಳ್ಳುವವರಾರು? ನಿನಗೆ ಒಂದು ದಾಲ್ ಕೂಡ ಮಾಡಿಕೊಳ್ಳೋದಕ್ಕೆ ಬರೋಲ್ಲ. ಯಾವಾಗ್ಲೂ ಬ್ರೆಡ್ಡು ಬೆಣ್ಣೆ ತಿಂದುಕೊಂಡು ಇರಬಲ್ಲೆಯಾ? ನೀನು ಇದ್ರೂ ಇದ್ದುಬಿಡಬಹುದು. ಆಗ ನಿನ್ನ ಅಂದ ಕೆಡುತ್ತೆ, ಮೈಬಣ್ಣ ನಿನ್ನ ಕೂದಲ

ಹೊಳಪು ಎಲ್ಲಾ ಹೋಗತ್ತೆ. ನಿನ್ನ ತಲೆ ಗೂದಲ ಬಗ್ಗೆ ನಾನು ತಾನೆ ಯಾಕೆ ಪರಿತಪಿಸಬೇಕು ಹೇಳು? ಒಂದೇ ಏಟಿಗೆ ಎಲ್ಲಾ ಕತ್ತರಿಸಿಕೊಂಡುಬಿಟ್ಟೆ.

ನಿನ್ನನ್ನ ನಾನು ಚೆನ್ನಾಗಿ ಅರ್ಥಮಾಡಿಕೊಂಡಿದ್ದೀನಿ ಅಂತ ನಾನು ತಿಳಿದುಕೊಂಡಿದ್ದೆ ಎಂದು ಬರೆದಳು. ನೀನು, ನಿನ್ನ ಕನಸುಗಳು, ನಿನ್ನ ಸಮಸ್ಯೆಗಳು ಇದೆಲ್ಲಾ, ಆದರೆ ಈಗ ಅನ್ನಿಸ್ತಾಯಿದೆ ನೀನು ನನಗೆ ಏನೇನೂ ಅರ್ಥವಾಗಿಲ್ಲ ಅಂತ. ನೋಡು ಇನ್ನು ತಡಮಾಡದೆ ವಿಷಯವೊಂದನ್ನ ನಿನಗೆ ನಾನು ಹೇಳಲೇಬೇಕು. ನೀನು ಹೋದ ಮಾರನೇ ದಿನವೇ ನೆರೆಮನೆಯ ಶ್ರೀಮತಿ ಗುಪ್ತಾ ಬಂದು ನನಗೆ ಸಾಂತ್ವನ ಹೇಳಿದರು, ಆಕೆ ತಣ್ಣಗಿರಲಿ. ನೀನು ವ್ಯಾಸಂಗ ಮುಗಿಸಿಕೊಂಡು ವಾಪಸ್ಸು ಬಂದೇಬರ್ತೀಯ ಅಂತ, ಹುಡುಗರನ್ನ ನಂಬುವುದಕ್ಕಾಗುವುದಿಲ್ಲ. ಗಂಡುಮಕ್ಕಳಾದರೆ ತಮ್ಮ ಹೆಂಡಂದಿರಿಗೆ ಅಂಟಿಕೊಂಡು ಬಿಡ್ತಾರೆ, ಹೆಣ್ಣುಮಕ್ಕಳೇನೇ ನಿಜವಾಗಿ ತಮ್ಮ ತಂದೆತಾಯಿಗಳ ಮನೆಯನ್ನು ತಮ್ಮ ಮನೆ ಅಂತ ಭಾವಿಸುವವರು. ನಿನಗೆ ಗೊತ್ತಿರುವ ಹಾಗೆ ಅವಳಿಗೆ ನಾಲ್ಕು ಜನ ಗಂಡುಮಕ್ಕಳು, ಎಲ್ಲರಿಗೂ ಮದುವೆಯಾಗಿದೆ, ಎಲ್ಲರೂ ತಮ್ಮ ಹೆಂಡ್ತೀರು ಹೇಳಿದ ಹಾಗೆ ಕೇಳಿಕೊಂಡು ಬಿದ್ದಿದ್ದಾರೆ. ನಿಮ್ಮಪ್ಪನನ್ನ ನಾನು ಒಬ್ಬರನ್ನೇ ಮನೇಲಿ ಬಿಟ್ಟು ತೌರಿಗೆ ಹೋಗುವಾಗ ಬಹಳ ಪ್ರಯಾಸ ಪಡ್ತಿದ್ರು. ಆಯಾ ಹೇಳ್ತಿದ್ದಳು, ಅಮ್ಮಾವ್ರೆ ಅಯ್ಯನವರಿಗೆ ತಮ್ಮ ಮಡಿಬಟ್ಟೆಗಳು ಎಲ್ಲಿವೆ ಅಂತ ಗೊತ್ತಾಗೋದಿಲ್ಲ, ಕನ್ನಡಕ ಎಲ್ಲೋ ಇಟ್ಟುಬಿಟ್ಟು ಎಲ್ಲೋ ಹುಡುಕ್ತಾರೆ, ಒಂದು ಲೋಟ ನೀರು ಕೂಡ ತೆಗೆದುಕೊಳ್ಳಲಾರರು, ಮೂರು ಹೊತ್ತು ಅಂಚೆಯವನ ದಾರಿ ಕಾಯ್ತಿರ್ತಾರೆ ಅಂತ.

ನಿಜವಾಗಿ ಈ ಮಗಳು ನೇರ ನಡೆಯವಳು ಅಂತ ಅಮ್ಮನಿಗನ್ನಿಸಿತು, ತಾನು ಪ್ರೀತಿಪಟ್ಟವರಿಗೆ ನಿಷ್ಠೆಯಿಂದ ನಡಕೊಳ್ಳುವವಳು. ತನ್ನ ಅಕ್ಕ ಐದು ವರ್ಷಗಳ ಹಿಂದೆ ಮದುವೆಯಾದಾಗ ಭಾರತೀಯ ಮದುವೆ ರೀತಿರಿವಾಜುಗಳ ಕಗ್ಗವನ್ನು ತಿರಸ್ಕರಿಸಿ ಅಕ್ಕ ಭಾವನಿಗೆ ಬೆಂಬಲವಾಗಿ ನಿಂತವಳು. ಭಾವ ದೆಹಲಿಗೆ ವರ್ಗವಾಗಿ ಬಂದರು, ಅಕ್ಕ ಬೊಂಬಾಯಿಯಲ್ಲಿ ತನ್ನ ಉದ್ಯೋಗದಲ್ಲಿ ಮುಂದುವರಿದಾಗ ಅವನ್ನೂ ಸ್ವಾಗತಿಸಿದಳು. ಅಪ್ಪ ಅಮ್ಮ ಅಕ್ಕನ ನಿರ್ಧಾರವನ್ನು ಬದಲಿಸುವಂತೆ ಕಾಗದ ಬರೆದಾಗ ಇವಳು ಬಹಳ ಸಿಟ್ಟಾಗಿದ್ದಳು, ಭಾವ ಮನೆಯಲ್ಲಿ ಇರುವಷ್ಟು ದಿನ ಅವರ ಮನ ನೋಯದಂತೆ ನಡಕೊಳ್ಳಬೇಕೆಂದು ತಾಕೀತು ಮಾಡಿದ್ದಳೂ ಕೂಡ.

:·: ಮನದಾಳದಲ್ಲಿ ಅಮ್ಮನಿಗೆ ಅಳಿಯನ ಬಗ್ಗೆ ಒಂದು ನಮೂನೆಯ ಅಕ್ಕರೆ ಇದ್ದಿತಾದರೂ, ಆತನ ಬೇಜವಾಬ್ದಾರಿತನ, ಸೋಮಾರಿತನ ಮುಜುಗರ ತಂದಿದ್ದವು. ಬಹಳ ರೂಪವಂತನೇನೊ ಹೌದು, ಆದರೆ ತನ್ನ ಹೆಂಡತಿಗೆ ಆಗಾಗ್ಗೆ ಪತ್ರ ಬರೆಯಬೇಡವೆ? ಸಂಬಳದಲ್ಲಿ ನಾಲ್ಕು ಕಾಸು ಉಳಿಸಬೇಡವೆ? (ಜೀವವಿಮೆ ಪಾಲಿಸಿಯ ಮುಖವನ್ನೂ ಕಾಣ, ಮನೆಮಠ ಮಾಡಬೇಕು ಅಂಬೋದು ಅವನ ಕನಸಿನಲ್ಲೂ ಸುಳಿದಿರಲಾರದು); ಮದುವೆಯಾದ ಸದ್ಗೃಹಸ್ಥನಿಗೆ ಒಪ್ಪುವ ಹಾಗೆ ಸಂಜೆಹೊತ್ತು

ಮನೆಯಲ್ಲಿ ತೆಪ್ಪಗೆ ಇರುವ ಬದಲು ನಾದಿನಿ ಕರ್ಕೊಂಡು ಹೊರಗೆ ಅಡ್ಡಾಡುವುದು, ಸಿಕ್ಕಿದ್ದು ತಿನ್ನುವುದು, ಇದು ಒಪ್ಪುತ್ತೇ? ಅವನ ಹೆಂಡತಿ ಜಾಣೆ. ಹಣಕಾಸಿನ ವಿಷಯದಲ್ಲಿ ಇಷ್ಟಿದೆ, ಹೀಗಿದೆ ಅಂತ ತಪ್ಪದೆ ಅಮ್ಮನಿಗೆ ವರದಿ ಒಪ್ಪಿಸುವಳು. ಇವನು ತದ್ವಿರುದ್ಧ, ಎಲ್ಲಾ ಉಡಾಯಿಸ್ತಾನೆ.

ನಿನ್ನೆ ದಿನ, ಪತ್ರ ಮುಂದುವರಿಸಿದಳು, ನೈನಾ ಆಂಟಿಯಿಂದ ಕಾಗದ ಬಂತು ಕಣೆ. ಅವಳ ಸ್ನೇಹಿತೆಯ ಮಗ, ಇಪ್ಪತ್ತಾರು ವರ್ಷವಂತೆ, ಸ್ಟ್ಯಾನ್‌ಫರ್ಡ್‌ನಲ್ಲಿ ಪಿ.ಹೆಚ್.ಡಿ ಮಾಡ್ತಿದ್ದಾನಂತೆ. ಎತ್ತರಕ್ಕೆ, ಬೆಳ್ಳಗೆ ಲಕ್ಷಣವಾಗಿದ್ದಾನಂತೆ. ಬುದ್ಧಿವಂತ ನಾಗಿರ್ಲೇಬೇಕಲ್ಲ ಅವನ ಮನೆಕಡೆ ಕೂಡ ಜನರು ಸುಸಂಸ್ಕೃತರೇನೇ. ಅವನ ತಂದೆ ತಾಯಿ ಇಬ್ಬರೂ ವಕೀಲರು. ಅವನಿಗೋಸ್ಕರ ತಕ್ಕನಾದ ಹುಡುಗಿ ನೋಡ್ತಿದ್ದಾರಂತೆ. ಇನ್ನು ನೈನಾ ಆಂಟಿಗೆ ನೀನು ಅಂದ್ರೆ ಪಂಚಪ್ರಾಣ, ನೀನೂ ಸ್ಟೇಟ್ಸ್‌ನಲ್ಲಿ ಇರುವುದಾಗಿ ತಿಳಿಸಿದ್ದಾರಂತೆ. ನನ್ನ ಬಗ್ಗೆ ಸಿಟ್ಟಾಗುವ ಮೊದಲು ಕೊಂಚ ನಾನು ಹೇಳುವುದನ್ನು ಕೇಳು. ಇದು ಬರೀ ಸಲಹೆ ಮಾತ್ರ. ನಿನಗೆ ಇಷ್ಟವಿಲ್ಲದ ಮದ್ವೆಗೆ ನಾವು ನಿನ್ನನ್ನ ನೂಕ್ತಾಯಿದ್ದೇವೆ ಅಂತ ತಿಳೀಬೇಡ. ಆದರೆ ಮುಕ್ತವಾಗಿ ನೀನು ಆಲೋಚಿಸಬೇಕು. ಕಡೇಪಕ್ಷ ಆತನನ್ನು ನೀನು ಭೇಟಿ ಮಾಡು. ಇಲ್ಲ, ಅವನೇ ಯೂನಿವರ್ಸಿಟಿಗೆ ಬಂದು ನಿನ್ನನ್ನ ಭೇಟಿ ಮಾಡ್ತಾನೆ. ಮಾತನಾಡು, ಹೊರಗೆ ಹೋಗು ಅವನ ಜೊತೆ, ನೀವಿಬ್ಬರೂ ಒಬ್ಬರನ್ನೊಬ್ಬರು ಎಷ್ಟು ಚೆನ್ನಾಗಿ ಅರ್ಥ ಮಾಡಿಕೊಳ್ಳಬಲ್ಲಿರಿ ಅಂತ ಸ್ವಲ್ಪ ನೋಡು. ಅವನ ಜೊತೆ ಮುಖ ಕೊಟ್ಟು ಮಾತನಾಡಿಸು, ಪ್ರಸನ್ನವಾಗಿ ವರ್ತಿಸು. ನಮ್ಮ ಮಗುವನ್ನ ನೋಡಿಕೊಳ್ಳೋದಕ್ಕೆ ಅಂತೂ ಒಬ್ಬ ಇದಾನಪ್ಪ ಅನ್ನುವ ನೆಮ್ಮದಿಯನ್ನು ನನಗೆ ಮತ್ತು ನಿಮ್ಮ ತಂದೆಗೆ ನೀನು ಕೊಡಬೇಕು. ನಮಗೇನಾದ್ರೂ ಆದ್ರೆ ನಿನ್ನನ್ನ ನೋಡಿಕೊಳ್ಳುವವರು ಯಾರು? ನೀನು ಎಂಥ ಕನಸಿನ ಹುಡುಗಿ ಅಂತ ನನಗೆ ಗೊತ್ತು. ಆದ್ರೆ ಏರ್ಪಡಿಸಿದ ಮದುವೆಗಳೇ ಯಾವತ್ತು ಕ್ಷೇಮ, ಇದನ್ನ ನೀನು ನಂಬಬೇಕು. ಇಷ್ಟಾದ್ರೂನೂ ನಿನ್ನ ಮೇಲೆ ಒತ್ತಡ ತರಬೇಕು ಅಂತ ನಮ್ಮ ಉದ್ದೇಶವಲ್ಲ. ಆ ಹುಡುಗ ನಿನ್ನನ್ನ ಬಂದು ಕಾಣಬಹುದು ಅಂತ ಆದ್ರೆ ನೈನಾ ಆಂಟಿಗೆ ಬರೀತೇನೆ. ಪ್ರತಿನಿತ್ಯ ನಾನು ಪ್ರಾರ್ಥಿಸುದೇನೆಂದರೆ ನೀನು ಮಾತ್ರ ಅಮೆರಿಕದವನನ್ನ ಮದುವೆಯಾಗಬಾರದು. ಅದು ನಮ್ಮಿಂದ ತಡಕೊಳ್ಳೋದಕ್ಕೆ ಆಗದ ವಿಚಾರ. ಈಗ ನಿಮ್ಮಪ್ಪ ಮತ್ತು ನನ್ನನ್ನೇ ತೊಗೊ. ನಿನ್ನ ತಂದೆಯ ತಪ್ಪುಗಳು ಏನೇ ಇರಲಿ, ದಾಂಪತ್ಯನಿಷ್ಠೆಗೆ ಮಾತ್ರ ಅವರು ಎಂದೂ ದ್ರೋಹ ಬಗೆದವರಲ್ಲ. ಈ ಅಮೆರಿಕಾದವರಿದ್ದಾರಲ್ಲ ಚಿಟುಕಿ ಹೊಡೆಯುದರೊಳಗೆ ವಿಚ್ಛೇದನ ಮಾಡಿಬಿಡ್ತಾರೆ. 'ಮದುವೆಯ ಬಂಧನ' ಎಂಬ ಪದದ ಅರ್ಥವಾದರೂ ಗೊತ್ತೇ ಅವರಿಗೆ? ನನ್ನ ಚಿನ್ನ, ನೀನು ಒಂದು ವೇಳೆ ಒಬ್ಬ ಅಮೆರಿಕನನ್ನ ಮದುವೆಯಾಗಿ ಆತ ವಿಚ್ಛೇದನ ಮಾಡಿಬಿಟ್ಟರೆ, ನಾವೂ ಕಣ್ಣು ಮುಚ್ಚಿದರೆ, ಆಗ ನಿನ್ನ ಗತಿಯೇನು?

ಟೀ ಕುಡಿಯುವುದನ್ನು ಮುಗಿಸಿ, ಪತ್ರ ಮುಂದುವರೆಸಿದಳು ಅಮ್ಮ. ನಾನು ನಿನಗೆ ಹೇಳುವ ಬುದ್ಧಿವಾದವೆಂದರೆ ಅಮೆರಿಕಾದ ಗಂಡಸರಿಂದ ಮಾತ್ರ ದೂರ ಇರು. ವಿರಕ್ತ

ಪ್ರೇಮ ಅನ್ನುವುದು ಬರೀ ಸುಳ್ಳು. ಅಮೆರಿಕಾದಲ್ಲಂತೂ ಅಂಥದೊಂದು ಇದೆ ಅಂತಲೂ ಜನ ನಂಬುವುದಿಲ್ಲ. ಚುಂಬನ ವೆಂದರೆ ಕೈಕೈ ಹಿಡಿದುಕೊಳ್ಳುವಷ್ಟೇ ಸಲೀಸು ಅಲ್ಲ. ಅದಾದ ಬಳಿಕ ಮತ್ತೇ ನಾಗುತ್ತೆ ಅಂತ ನಿನಗೆ ಗೊತ್ತು. ಒಂದ ರಿಂದ ಇನ್ನೊಂದಕ್ಕೆ ದಾರಿಯಾಗುತ್ತೆ; ಆಮೇಲೆ ಕಡೆಗೆ ನೀನು ನಮಗೊಬ್ಬ ಅಮೆ ರಿಕದ ಅಳಿಯನನ್ನು ಕರೆದು ತರ್ತೀಯ. ವಿಧಿಯಿಲ್ಲ ಅಂದ ಮೇಲೆ ನಾವು ಅವನ್ನೂ ಸ್ವೀಕರಿಸಬೇಕಾಗುತ್ತದೆ. ಆದರೆ ಸುಮ್ಮನೆ ಮನಸ್ಸಿಲ್ಲದ ಮನಸ್ಸಿನಲ್ಲಿ ಮೂಗು ಮುಚ್ಚಿ ಕೊಂಡ ಸಹಿಸಿಕೊಳ್ತೀವಿ ಅನ್ನುವುದನ್ನು ಮರೆಯಬೇಡ.

ತಾಯಿ ನರಳಿದಳು. ಅಯ್ಯೋ ಮಗು, ಮಗು. ನೋಯುವ ಗಂಟಲಿನ ಹತ್ತಿರ ಕೈಯೆತ್ತಿ ನೀವಿಕೊಂಡಳು. ಈಗ ಕಣ್ಣೀರು ಹರಿಯುತ್ತಿರಲಿಲ್ಲ ಮತ್ತೆ ಬರವಣಿಗೆ ಮುಂದುವರಿಸಿದಳು. ಯಾರಾದರೂ ಕಷ್ಟ ದಲ್ಲಿರುವ ಕಾಲಕ್ಕೆ, ಪ್ರಾಯಶಃ ಪರಿಹಾರ ವೆಂದರೆ ಪ್ರಾರ್ಥನೆಯೊಂದೇ. ಮುಂದಡಿ ಯಿಡೋದಕ್ಕೆ ಅದರಿಂದ ಶಕ್ತಿ ಬರುತ್ತೆ. ಆಚರಣೆಗಳಲ್ಲಿ ನಿನಗೆ ನಂಬಿಕೆಯಿಲ್ಲ ಅನ್ನೋದು ನನಗೆ ಚೆನ್ನಾಗಿ ಗೊತ್ತು; ನಾನು ನಿನ್ನನ್ನ ಕೇಳ್ತಾಯಿರೋದು ಇಷ್ಟೆ, ಬೆಳಗಿನ ಹೊತ್ತು ಒಂದು ದೀಪ ಹಚ್ಚು, ಒಂದು ಅಗರಬತ್ತಿ ಹಚ್ಚು, ಕೈಮುಗಿದು, ಕಣ್ಣು ಮುಚ್ಚಿ ಸತ್ಯ ಮತ್ತು ಸರಿಯಾದ ಮಾರ್ಗದ ಬಗ್ಗೆ ಯೋಚಿಸು. ಅಷ್ಟೇನೇ. ನಿನ್ನ ಸೂಟ್ ಕೇಸ್‌ನಲ್ಲಿ ಹಾಕಿದ್ದೀನಲ್ಲ ಆ ಐಟಮ್ ಗಳನ್ನ ಮತ್ತು ಬೆಳ್ಳಿ ಗಣೇಶ ಇತ್ಯಾದಿ ಗಳನ್ನ ನಿನ್ನ ಬೀರುವಿನ ಒಂದು ಮೂಲೆ ಯಲ್ಲೋ ಅಥವಾ ನಿನ್ನ ಡೆಸ್ಕಿನ ಮೇಲೋ ಇಡು. ಜೀವನವಿಡೀ ಪ್ರಾರ್ಥನೆ ಸಲ್ಲಿಸಿರುವ ಅಮ್ಮನಿಗೆ ಪ್ರಾರ್ಥಿಸುವುದೆಂದರೆ ಹಲ್ಲು ಜ್ಜುವ, ಸ್ನಾನ ಮಾಡುವ ಅಥವಾ ಈರುಳ್ಳಿ ಹೆಚ್ಚುವ ಕೆಲಸದಷ್ಟೇ ಸಲೀಸು–ಈ ಎಲ್ಲದ ರಿಂದ ಮನಸ್ಸಿಗೆ ಏನೋ ಒಂದು ಬಗೆಯ ನೆಮ್ಮದಿ, ಶಾಂತಿ ಲಭ್ಯವಾಗುತ್ತಿತ್ತು. ಒಂದು ಬಾರಿ ಊಟಕ್ಕೆ ಎಂಟು ತರಹದ ಪದಾರ್ಥ ತಯಾರಿಸು ಎಂದು ಯಜ ಮಾನರು ಆಜ್ಞೆ ಮಾಡಿದಾಗ ಅಡುಗೆ ಮನೆಯಲ್ಲಿರುವ ಪಾತ್ರೆ ಪಡಗ ಎಲ್ಲವನ್ನೂ ಚಚ್ಚಿ ಪುಡಿಪುಡಿ ಮಾಡಿಬಿಡೋಣ ಎನ್ನು ವಷ್ಟು ಸಿಟ್ಟಾಗಿತ್ತು, ಆದರೆ ಮೂಲೆಯಲ್ಲಿ ಕುಳಿತ ಆ ದೇವರುಗಳ ಸಮೀಪ ಕೊಂಚ ಹೊತ್ತು ನಿಂತ ಬಳಿಕ ಕೋಪ ಇಳಿದು ಹೋಗಿ ಯಾವ ಅನಾಹುತವೂ ಘಟಿಸಿರ ಲಿಲ್ಲ. ತನ್ನ ಮಗುವಿಗೆ ಇದನ್ನ ವಿವರಿಸಿ ಹೇಳಲು ಅವಳಿಗೆ ಆಗಲಿಲ್ಲ.

ನೀನೇನಾದರೂ ಮುಂದಿನ ವರ್ಷ ವಾಪಸ್ಸು ಬಾರದೇ ಇದ್ದರೆ–ಪತ್ರ ಮುಂದು ವರಿಸಿದಳು, ತನ್ನ ಮಗಳು ಬರುವುದಿಲ್ಲ ವೆಂದು ಅವಳಿಗೆ ಗೊತ್ತಿತ್ತು–ನೀನು ಬರುವ ಹಾಗೆ ಮಾಡ್ತೀನಿ. ಹೃದಯಾಘಾತವಾದ ಹಾಗೆ ನಟಿಸುತ್ತೇನೆ, ತಾಯಿ ತನ್ನಷ್ಟಕ್ಕೇ ಅಂದುಕೊಂಡಳು; ಹೃದಯ ವೇಗವಾಗಿ ಬಡಿದುಕೊಳ್ಳುವಾಗ, ಕಣ್ಣೀರು ಧಾರಾ ಕಾರವಾಗಿ ಹರಿಯುವಾಗ, ತನ್ನ ತಲೆ ಯನ್ನು ಬಲವಾಗಿ ಹಿಡಿದುಕೊಂಡು ಮಗ ಳಿಗೆ ಫೋನ್ ಮಾಡಿ 'ನಾನು ಸಾಯ್ತಾ ಯಿದ್ದೇನೆ, ನಾನು ಕಣ್ಣು ಮುಚ್ಚಿಕೊಳ್ಳು ವುದಕ್ಕೆ ಮೊದಲು ನಿನ್ನನ್ನು ಒಮ್ಮೆ ನೋಡಬೇಕು', ಎಂದು ಹೇಳುತ್ತೇನೆ. ಆಗ ಅವಳು ಬಂದೇ ಬರ್ತಾಳೆ, ಮತ್ತೆ ತನ್ನ ತಲೆಗೂದಲನ್ನು ಬೆಳೆಸುತ್ತಾಳೆ.

ಸಮುರಾಯಿ ರಾಜಕುಮಾರಿ

ಎಂ. ಜಯಂತಿಬಾಯಿ

ಉದಾತ್ತ ಧ್ಯೇಯವುಳ್ಳ ಸುರಿತ ಯೋಧರ ವಂಶಜಳಾಗಿ ಜಪಾನ್-ಸಮ್ರಾಜ್ಞಿ ಯಾಗಿ ಮೆರೆದ ಮಸಾಕೋ ಹೊಸ-ಯುಗವೊಂದರಲ್ಲಿ ಪ್ರವೇಶ ಮಾಡಿದಳು.

ಮಸಾಕೋ ಒವೆಡಾ ಹಿಂದೆ ಹಾರ್ವರ್ಡ್‌ನ ವಿದ್ಯಾರ್ಥಿನಿಯಾಗಿದ್ದ ಸಮಯದಲ್ಲಿ 'ಸಮ್ರಾಟ' ಎಂಬ ಇಸ್ಪೀಟಾಟವನ್ನು ತನ್ನ ಕೆಲವಾರು ಸ್ನೇಹಿತರಿಗೆ ಪರಿಚಯಿಸಿದಳು. ಆಟಗಾರರು ಸಮ್ರಾಟನಿಂದ ಹಿಡಿದು ಸಾಮಾನ್ಯ ವ್ಯಕ್ತಿಯವರೆಗಿನ ಬಿರುದುಗಳನ್ನು ಆಟದಲ್ಲಿ ಪಡೆಯುತ್ತಿದ್ದರು. ಇಲ್ಲಿಯ ತಮಾಷೆಯೆಂದರೆ ಒವೆಡಾ ಈ ಆಟವನ್ನು ಆಡಿದಾಗಲೆಲ್ಲ ಸಾಮ್ರಾಜ್ಞಿ ಎಂಬ ಬಿರುದನ್ನೇ ಪಡೆಯುವುದು ರೂಢಿಯಾಗಿತ್ತು.

ಇಸ್ಪೀಟಿನ ಎಲೆ ಅದೃಷ್ಟದ ಕೈಯನ್ನ ಹಿಡಿಯುವುದಿಲ್ಲ ಎಂದು ಯಾರು ಹೇಳುತ್ತಾರೆ? ೧೯೯೩ರ ಜೂನ್‌ನಲ್ಲಿ ಒವೆಡಾಳು ನರುಹಿಟೋ ಎಂಬ ಯುವರಾಜನೊಡನೆ ವಿವಾಹವಾದಳು. ಅವನು ಪ್ರಪಂಚದ ಅತ್ಯಂತ ಹಿರಿಯ ರಾಜಪ್ರಭುತ್ವವಾಗಿರುವ ಜಪಾನಿನ ಭಾವೀ ಸಮ್ರಾಟನಾಗಲಿದ್ದನು. ಯುವರಾಣಿಯಾಗಿದ್ದ ಒವೆಡಾ ಪ್ರಪಂಚದ ಅತ್ಯಂತ ಶಕ್ತಿಶಾಲಿಗಳೂ ಮತ್ತು ಕುತೂಹಲ ಜನಕರಾದ ಹಿರಿಯ ರಾಜ್ಯ ತಂತ್ರಜ್ಞರು, ವ್ಯಾಪಾರೀ ಮುಖಂಡರು, ಶಿಕ್ಷಕರು ಮತ್ತು ಕಲಾವಿದರೊಡನೆ ವ್ಯವಹರಿಸಬಹುದಿತ್ತು ಮತ್ತು ಸಮಸ್ತ ಭೂಮಂಡಲವನ್ನೆಲ್ಲ ಸುತ್ತಬಹುದಾಗಿತ್ತು.

ಅವಳನ್ನು ಮದುವೆಯಾದ ಪತಿಯಂತೂ ಆಕೆಯ ಬಗ್ಗೆ ಅತೀವ ಪ್ರೀತಿಯನ್ನು ಹೊಂದಿದವನೆಂದೂ ಆಕೆಯನ್ನು ಚೆನ್ನಾಗಿ ನೋಡಿಕೊಳ್ಳುವವನೆಂದೂ ಕಾಣಿಸಿಕೊಳ್ಳುತ್ತಿತ್ತು. ಆಕೆಯ ಒಲವನ್ನು ಸಂಪಾದಿಸಿ, ಆಕೆಯನ್ನು ಗೆಲ್ಲಲು ಅವನು ಬಹುಕಾಲದ ವರೆಗೆ ಕಠಿಣ ಪರಿಶ್ರಮ ವಹಿಸಬೇಕಾಯಿತು. ಈ ಜೋಡಿ ೧೯೮೬ರಲ್ಲಿ ಮೊದಲಬಾರಿಗೆ ಪರಸ್ಪರ ಭೇಟಿಯಾದ ಆರುವರ್ಷಗಳ ಅನಂತರ ಮತ್ತು ಆಕೆ ಆತನನ್ನು ಎರಡೆರಡು ಬಾರಿ ನಿರಾಕರಿಸಿದ ಅನಂತರ ಆಕೆಯ ಒಲವನ್ನು ಗೆಲ್ಲುವಲ್ಲಿ ಸಫಲನಾದ. "ಇದೇನೂ ಒಂದು ಸುಲಭದ ನಿರ್ಧಾರವಾಗಿರಲಿಲ್ಲ"

೧೯೯೪ರ ಅಗಸ್ಟ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಮಾರ್ಥಾಫಡಿ ಅವರು ಬರೆದ "ಸಮುರಾಯಿ ಪ್ರಿನ್ಸೆಸ್" ಎಂಬ ಲೇಖನದ ಭಾವಾನುವಾದ.

ಎಂದು ಒವಡಾ ಕುಟುಂಬದ ಓರ್ವ ಸದಸ್ಯರು ಸ್ಮರಿಸುತ್ತಾರೆ. ಆಕೆ ರಾಜಕುಮಾರನಿಂದ ತಾನು ಪಡೆದ ಅಗಾಧ ಪ್ರೀತಿಯ ಒಲವೇ ಒಂದು ನಿರ್ಧಾರಕ ಅಂಶವಾಗಿತ್ತು.

ಈ ಆಯ್ಕೆ ಬಹಳ ಕಠಿಣದ್ದಾಗಿತ್ತು. ಏಕೆಂದರೆ ಆಕೆಯ ಪದತಲದಲ್ಲಿ ಮತ್ತೊಂದು ಜಗತ್ತು ಇತ್ತು—ಅದು ವಂಶಪರಂಪರಾಗತವಾಗಿ ಪಡೆಯದ ಅಥವಾ ವಿವಾಹ-ಬಂಧನದಿಂದ ಆರ್ಜಿಸಿದ್ದುದಾಗಿರದೆ, ಅದು ಆಕೆ ತನ್ನ ಸ್ವ-ಪ್ರಯತ್ನದಿಂದ ಪಡೆದುದಾಗಿತ್ತು. ಅದು ರಾಜಮನೆತನ ಸದಸ್ಯತ್ವದೊಂದಿಗೆ ಹೊಂದಿಕೆಯಾಗದಂತಹದ್ದಾಗಿತ್ತು. ಐದು ತಿಂಗಳ ಹಿಂದೆ ಅವಳು ರಾಜೀನಾಮೆಕೊಡುವವರೆಗೆ ಆಕೆ ವಿದೇಶಾಂಗ ಸಚಿವಾಲಯದ ಉದಯೋನ್ಮುಖ ಯುವ ಸದಸ್ಯೆಯಾಗಿದ್ದಳು. ಅತಿ-ನಿರ್ವಾಹಕ ವ್ಯಾಪಾರದ ಮಾತುಕತೆಗಳಂತಹ ವಿಷಯಗಳಲ್ಲಿ ವಾಷಿಂಗ್‌ಟನ್‌ನೊಂದಿಗೆ ಪಟಲ್-ಸಾಮೋಪಾಯ ಮತ್ತು ವಿದೇಶೀ ನ್ಯಾಯವಾದಿಗಳನ್ನು ಅಂಗೀಕರಿಸಲು ಜಪಾನಿನ ನಿರಾಕರಣೆ ಮುಂತಾದ ವಿಷಯಗಳಲ್ಲಿ ಆಕೆ ಭಾಗವಹಿಸುತ್ತಿದ್ದಳು. ಆಕೆ ೨೯ ವರ್ಷಗಳ ವಯಸ್ಸಿನಲ್ಲಿ ಪಡೆದ ಅತ್ಯಂತ ಗೌರವಾರ್ಹವಾದ ನಿರ್ದುಷ್ಟ ಇಂಗ್ಲಿಷ್ ಪ್ರೌಢಿಮೆ ಹಾಗೂ ಆಕೆಯ ನಿಶಿತವಾದ, ವಿಶ್ಲೇಷಣಾತ್ಮಕ ಬುದ್ಧಿಶಕ್ತಿಗಳಿಂದ ಜಪಾನ್ ಸರ್ಕಾರದಲ್ಲಿ ಮತ್ತು ವ್ಯಾಪಾರ ಕ್ಷೇತ್ರದಲ್ಲಿ ಜಪಾನೀ ಮಹಿಳೆಯರು ಪ್ರತಿಷ್ಠಿತ ಸ್ಥಾನಮಾನಗಳನ್ನು ಗಳಿಸದಂತೆ ತಡೆಯುತ್ತಿದ್ದ ಗಾಜಿನ ತೆರೆಯನ್ನು ಹಾದು ಒಳಸರಿಯಲು ಆಕೆಗೆ ಅವಕಾಶ ನೀಡಿತು. ಒವಾಡಾಳಿಗೆ ತನ್ನ ಯೋಗ್ಯತೆಯೇನೆಂಬುದು ಗೊತ್ತಿತ್ತು ಎನ್ನುವಲ್ಲಿ ಯಾವ ಸಂದೇಹವೂ ಇಲ್ಲ.

ಅವಳ ನಾಡಿನವರಿಗೂ ಆಕೆಯ ಯೋಗ್ಯತೆಯ ಅರಿವಿತ್ತು. ಅವಳು ಮಸಾಕಾ-ಸಾನ್ ಎಂಬ ಬಿರುದನ್ನು ಗೆದ್ದುಕೊಂಡಿದ್ದು ಸಾಮಾನ್ಯವಾಗಿ ಆಕೆಯನ್ನು ಅದೇ ವಾಡಿಕೆಯ ಮತ್ತು ಅಕ್ಕರೆಯ ಹೆಸರಿನಿಂದ ಕರೆಯುತ್ತಿದ್ದರು ಮತ್ತು ಅದು ಚಕ್ರವರ್ತಿ ಪರಿವಾರದ ಮಹಾನ್ ವಿಜಯವೆಂದು ಪರಿಗಣಿಸಲಾಗುತ್ತಿತ್ತು. ಆಧುನಿಕ ಜಪಾನೀಯರು ಬಹುವಾಗಿ ಮೆಚ್ಚುತ್ತಿದ್ದಂತಹ ಮೌಲ್ಯಗಳನ್ನು ಒವಾಡಾ ಪ್ರತಿನಿಧಿಸುತ್ತಿದ್ದಳು. ಅಂದರೆ ಶಿಸ್ತು, ವ್ಯಾಸಂಗ-ಪ್ರೇಮ, ಸ್ವಂತ ವಿವೇಚನೆ ಮತ್ತು ಎಲ್ಲಕ್ಕಿಂತ ಮಿಗಿಲಾಗಿ, ಅವರ ಸರಹದ್ದುಗಳಿಂದ ಆಚೆಗಿರುವಂಥ ಪ್ರಪಂಚದೊಂದಿಗೆ ವ್ಯವಹರಿಸುವಲ್ಲಿಯ ಸಮಚಿತ್ತ ಹಾಗೂ ಕೂಟತರ್ಕ-ಇತ್ಯಾದಿಯಾಗಿ ಆಕೆಯಲ್ಲಿನ ಸಕಲ ಗುಣಗಳು ಪ್ರಶಂಸಾರ್ಹವಾಗಿದ್ದುವು.

ಸಾಂಪ್ರದಾಯಿಕವಾಗಿ ಗೋಪ್ಯ ಪ್ರವೃತ್ತಿಯವಳು :

ಆಕೆ ಮದುವೆಯಾಗುವವರೆಗೆ ತನ್ನ ತಂದೆಯ ಉಜ್ವಲವಾದ, ಯಶಸ್ವಿಯಾದ ರಾಯಭಾರಕುಶಲ ಜೀವನಗತಿಗನುಸಾರವಾಗಿ (ಹಿಶಾಶಿ ಒವಾಡಾ ಅವರು ಯುನೈಟೆಡ್ ನೇಶನ್ಸ್‌ಗೆ ಜಪಾನ್ ರಾಯಭಾರಿಯಾಗಿದ್ದರು) ತನ್ನ ಜೀವನವನ್ನು ರೂಪಿಸಿದ್ದಳು. ಅಂತರರಾಷ್ಟ್ರೀಯ ರಾಜಕೀಯ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಜಪಾನಿನ ಪಾತ್ರವನ್ನು ವಿಸ್ತರಿಸುವ ಬಗ್ಗೆ ಆಕೆಯಲ್ಲಿ ಪ್ರಬಲವಾದ ದೃಢನಿಶ್ಚಯವಿತ್ತು ಎಂದು

ಹಿಂದಿನ ಶಿಕ್ಷಕರು ಹೇಳುತ್ತಾರೆ. ಜಗತ್ತಿನ ಬಹುಭಾಗವು ಜಪಾನೀಯರು ವ್ಯಾಪಾರದಲ್ಲಿ ಸಾಧಿಸಿದ ಪ್ರಾಬಲ್ಯಕ್ಕಾಗಿ ಅವರ ಮೇಲೆ ಅಸೂಯೆಪಡುತ್ತಾರೆ ಎಂಬುದು ನಿಜವಾದರೂ, ಅನೇಕ ಜಪಾನೀಯರು ತಮ್ಮ ದೇಶವು ಏಕಾಂತವಾಸಿಯೆಂದೂ, ದ್ವೀಪವಾಸಿಗಳೆಂದೂ ಮತ್ತು ಚರ್ಚ್ ಆಫ್ ಇಂಗ್ಲೆಂಡ್‌ನ ಮತಪದ್ಧತಿಗಳನ್ನು ಅನುಸರಿಸುವವರೆಂದೂ ಪರಿಗಣಿಸಲಾಗಿದೆ ಎಂದು ಭಾವಿಸುತ್ತಿದ್ದರು.

ತನ್ನ ಪತ್ನಿಯಾಗಿ ಒವಾಡಾ ತನ್ನಲ್ಲಿಯ ರಾಯಭಾರ ಕೌಶಲಗಳನ್ನು ಅತ್ಯಂತ ಪರಿಣಾಮಕಾರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಲು ಸಮರ್ಥಳಾಗಿರಬೇಕೆಂದು ಯುವರಾಜನು ಪತ್ನಿ ಒವಾಡಾಳನ್ನು ಒತ್ತಾಯಿಸುತ್ತಿದ್ದ. ಹಾಗಿದ್ದಲ್ಲಿ ಅವನು ಅದಕ್ಕಾಗಿ ನೆರವಾಗಬಹುದಾಗಿತ್ತು. ಚಕ್ರವರ್ತಿಯ ರಾಜಪರಿವಾರವೆಂಬುದು ನಿಜವಾಗಿಯೂ ಒಂದು ನಿಗೂಢ ಸಂಸ್ಥೆಯಾಗಿದ್ದುದರಿಂದ ಅದು ಗೋಪ್ಯವಾಗಿತ್ತು ಮತ್ತು ಒಟ್ಟಿನಲ್ಲಿ ಸಂಪ್ರದಾಯಬದ್ಧವಾಗಿತ್ತು. ಧಾರ್ಮಿಕ ಮತಾಚರಣೆಗಳ ನಿರ್ವಹಣೆಗೆ ರಕ್ಷಣೆಯನ್ನೊದಗಿಸುವಲ್ಲಿ ಅದರ ಪಾತ್ರವೊಂದನ್ನು ಬಿಟ್ಟರೆ ಅದರ ಬಗೆಗೆ ಹೆಚ್ಚಿನ ಬೇರಾವುದೇ ವಿಷಯ ತಿಳಿದು ಬಂದಿಲ್ಲ. ಇವಕ್ಕೆ ಹೋಲಿಸಿದರೆ ಯುರೋಪಿಯನ್ ರಾಜಮನೆತನಗಳು ತೆರೆದ ಪುಸ್ತಕಗಳಾಗಿವೆ.

ಟೋಕಿಯೋದ ಸೋಫಿಯ ವಿಶ್ವವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ರಾಜ್ಯಶಾಸ್ತ್ರದ ಪ್ರಾಧ್ಯಾಪಕರಾಗಿರುವ ಕುಣಿಕೋ ಇನೋಗುಚಿ, ಅವರು ಒವಾಡಾ ಅವರ ಆಯ್ಕೆ ರಾಜಮನೆತನವು ಅಗ್ರಗಾಮಿಯಾಗಿ ಮುನ್ನಡೆಯ ಬಯಸುತ್ತದೆ ಎನ್ನುವುದಕ್ಕೆ ಸೂಚಕವಾಗಿದೆ ಎಂದು ಭಾವಿಸುತ್ತಾರೆ. ಅದರ ಸದಸ್ಯರನ್ನು ಯಾವಾಗಲೂ ಇಂಪೀರಿಯಲ್ ಹೌಸ್ ಹೋಲ್ಡ್ ಏಜೆನ್ಸೀಯು, ಅಂದರೆ ಬಿಗಿಯಾನ ರಕ್ಷಣೆಯಿಂದ ಹಿಡಿದು ಪತ್ರಿಕಾ ಸಂದರ್ಶನ (ಬಹುಮಟ್ಟಿಗೆ ಯಾವುದೂ ಇಲ್ಲ)ಗಳಿಗೆ ರಾಜಸೇವೆಯವರೆಗಿನ ಸಮಸ್ತ ವ್ಯವಹಾರಗಳನ್ನು ನಿಯಂತ್ರಿಸುವಂತಹ ೧೧೩೨— ಜನರನ್ನೊಳಗೊಂಡ ಅಧಿಕಾರ ಶಾಹಿಯ ಸೆರೆಯಾಳುಗಳಂತೆಯೇ ಹೆಚ್ಚಾಗಿ ಕಾಣಲಾಗುತ್ತಿತ್ತು. ಆದರೆ, ಪ್ರಸಕ್ತ ಸಮ್ರಾಜ್ಞಿಯಾಗಿದ್ದ ಮಿಚಿಕೋ, ಒವಾಡಾ ಅವರಂತೆಯೇ ಒಬ್ಬ ಸಾಮಾನ್ಯ ಮಹಿಳೆಯಾಗಿದ್ದರು. ತನ್ನ ಸ್ವಂತ ಮಕ್ಕಳನ್ನು ಬೆಳೆಸುವ ಧೈರ್ಯವಹಿಸಿದ್ದಳು ಮತ್ತು ಯುವರಾಜ ನಾರುಹಿಟೋ ಜೀವನೋಪಾಯಕ್ಕಾಗಿ ದುಡಿಯುತ್ತಿದ್ದಂಥ ಮಹಿಳೆಯೊಬ್ಬಳನ್ನು ವಿವಾಹ ಮಾಡಿಕೊಂಡಿದ್ದರು.

ಕರ್ತವ್ಯದಳರೆ :

ಈಗಲೂ ಮದುಮಗಳು ಚಕ್ರಾಧಿಪತಿಗಳ ಪರಿವಾರಕ್ಕೆ ಸಂಬಂಧಿಸಿದ ಧಾರ್ಮಿಕ ಮತಾಚರಣೆಗಳನ್ನು ಮತ್ತು ಸಂಪ್ರದಾಯಗಳನ್ನು ಕಲಿತುಕೊಳಲು ಸತತವಾಗಿ ಆರು ವಾರಗಳ ಕಾಲ ವ್ಯಾಸಂಗ ಮಾಡಬೇಕಾಗುತ್ತದೆ. ಮೊದಲಬಾರಿಗೆ ರೇಷ್ಮೆಯ ಔಪಚಾರಿಕ ಕಿಮೋನೋವನ್ನು ಧರಿಸುವುದೆಂದರೆ ಯಾರಿಗೇ ಆಗಲಿ ಸ್ಮರಣೀಯವಾಗಿರುತ್ತದೆ. ಆಕೆ ತಮ್ಮ ವಾಸದ ಕೊಠಡಿ

ಯಲ್ಲಿ ತನ್ನ ತಂದೆ ತಾಯಿಯ ಜೊತೆಯಲ್ಲಿ ಯುವರಾಜನ ಮನೆತನ ಸೈನ್ಯದ ನೈಟ್ ಬರುವಿನ ಶ್ರೇಣಿಯವರ ನಾಯಕನಿಂದ ಸಾಂಪ್ರದಾಯಿಕ ವಿಧಿವಿಹಿತವಾದ ಉಡುಗೊರೆಗಳನ್ನು ಸ್ವೀಕರಿಸಬೇಕಾಗಿತ್ತು (ರೇಷ್ಮೆ ಬಟ್ಟೆಯ ಐದು ಸುರುಳಿ, ಅಕ್ಕಿಯ ಮದ್ಯದ ಆರು ಬಾಟಲ್ಲುಗಳು ಮತ್ತು ಒಂದು ಜೊತೆ ಸಮುದ್ರದ ಮೀನುಗಳು.) ಉಡುಗೊರೆಗಳನ್ನು ಅಂಗೀಕರಿಸಿದ್ದಾರೆ ಎಂದು ಮಹಾ ಚಕ್ರವರ್ತಿಗಳಿಗೆ ಸುದ್ದಿ ತಲುಪಿದಕೂಡಲೇ ಅವರು ತಮ್ಮ ವಿವಾಹ-ನಿಶ್ಚಯದ ದೇವತೆಗಳಿಗೆ ಅದನ್ನು ತಿಳಿಸುವ ಸಲುವಾಗಿ ಅರಮನೆಯ ಆವರಣದಲ್ಲಿರುವ ದೇವಸ್ಥಾನಗಳಿಗೆ ತೆರಳುವರು. ಅದು ೩೦ನೇ ಶತಮಾನದ ಹಿಂದಿನ ಪ್ರಸ್ತಾವಗಳಿಗಿಂತ ಬಹು ಭಿನ್ನವಾಗಿದೆ.

ಮಸಾಕೋ-ಸ್ಯಾನ್ ಅವರ ಈ ಪ್ರಪಂಚದಲ್ಲಿ ಪ್ರವೇಶಮಾಡುವುದನ್ನು ಏಕೆ ಆಯ್ದುಕೊಂಡರು? ಟೋಕಿಯೋ ಸುತ್ತಲಿನ ಯುವಜನರು, ಅವಳಿಗೆ ಮೂವತ್ತು ವರ್ಷ ಪ್ರಾಯದ ಹತ್ತಿರ ಹತ್ತಿರವಾಗುತ್ತಿದೆ ಮತ್ತು ಆ ವಯಸ್ಸು ಜಪಾನೀ ಮಹಿಳೆಯರ ವಿವಾಹಕ್ಕೆ ಮತ್ತು ಮಕ್ಕಳಾಗಲು ಕಾಲ ವಿಳಂಬವಾಗಿರುವುದು ಎಂದು ಊಹಿಸಿದರು. ಆದಕ್ಕಿಂತ ಹೆಚ್ಚು ಗಂಭೀರವಾದ ಇದರ ವಿವರಣೆಯೇನೆಂದರೆ ಅವಳು ಮೇಲು ನೋಟಕ್ಕೆ ಥೇಟು ಜಪಾನೀಯಳ ಹಾಗೆಯೇ ಕಾಣಿಸುತ್ತಾಳೆ ಮತ್ತು ಕರ್ತವ್ಯದ ಕರೆಯಂತೂ ಬಲವಾಗಿದೆ. ಆಕೆಯ ಕುಟುಂಬದ ಎರಡೂ ಕಡೆಗಳಿಂದ ನೋಡಿದಾಗ ಆಕೆಯು ಊಳಿಗ ಮಾನ್ಯ ಪದ್ಧತಿಯ ಕಾಲದಲ್ಲಿ ನುರಿತ ಯೋಧರಾಗಿದ್ದ, ಆಡಳಿತಗಾರರಾಗಿದ್ದ ಮತ್ತು ಅನಂತರ ಬೋಧಕರಾಗಿದ್ದ ಸಮುರಾಯಿ ವರ್ಗದಿಂದ ವಂಶಪರಂಪರಾಗತವಾಗಿ ಹುಟ್ಟಿದವಳು "ಸಮುರಾಯ್ ಎಂಬ ಪದಕ್ಕೆ" ಸೇವೆ ಮಾಡುವುದಕ್ಕೆ ಎಂಬ ಅರ್ಥವಿದೆ.

ಸ್ನೇಹಿತೆಯರು ಅವಳನ್ನು ಪುಸ್ತಕಗಳಿಗಿಂತ ಹೆಚ್ಚಾಗಿ ಕ್ರೀಡೆಗಳನ್ನು ಮತ್ತು ಪ್ರಾಣಿಗಳನ್ನು ಮೆಚ್ಚಿದ್ದ, ಪ್ರೀತಿಸುತ್ತಿದ್ದ ಮಗುವೆಂದು ನೆನಪಿಸಿಕೊಳ್ಳುತ್ತಾರೆ. ಒಮ್ಮೆಯಂತೂ ಆಕೆ ತಾನೂ ಪಶುವೈದ್ಯೆಯಾಗಲು ಬಯಸಿದ್ದಳು ಮತ್ತು ಅವಳು ವಿದೇಶಾಂಗ ಸಚಿವಾಲಯವನ್ನು ಬಿಡುವವರೆಗೆ ತನ್ನ ಕಚೇರಿಯ ಡೆಸ್ಕಿನ ಮೇಲೆ ನಾಯಿಗಳ ಮತ್ತು ಬೆಕ್ಕಿನ ಮರಿಗಳ ಚಿತ್ರಗಳನ್ನು ಇಟ್ಟುಕೊಂಡಿದ್ದಳು. ಆಕೆಗೆ ಭಯವೆಂಬುದೇ ಇರಲಿಲ್ಲ. ಹೀಗಾಗಿ ಆಕೆ ತರಗತಿಯಲ್ಲಿ ಅನ್ಯಾಯ ನಡೆದಿದೆ ಎಂದು ಆಕೆಗೆ ಅನ್ನಿಸಿದಾಗ ಅಧ್ಯಾಪಕರ ಮುಂದೆ ಎದ್ದು ನಿಂತು ತರಗತಿಯಪರವಾಗಿ ಮಾತನಾಡ ಬಯಸುತ್ತಿದ್ದಳು.

ಅಪಾಯಕಾರಕ ಮತ್ತು ಹೆಣ್ಣುಮಕ್ಕಳಿಗೆ ಹೇಳಿಸಿದ ಆಟವಲ್ಲ ಎಂದು ಶಾಲೆಯಿಂದ ಅಂಗೀಕೃತವಾಗದೆ ಇದ್ದಂತಹ ಸಾಫ್ಟ್-ಬಾಲ್ ಕ್ರೀಡೆಗಾಗಿ ತಂಡವನ್ನು ಸಂಘಟಿಸುವುದರಲ್ಲಿ ಮಸಾಕೋ ಮುಖ್ಯ ವ್ಯಕ್ತಿಯಾಗಿದ್ದಳು'. ಆಕೆ ಓರ್ವ ಛಲಗಾರ್ತಿ ಆಟಗಾರಳಾಗಿದ್ದಳು, ದಾಂಡುಗಾರದ ಅಂಕಣದಲ್ಲಿ ಆಕೆ ಪಿಚ್ಚರ್ ಅನ್ನು ದಿಟ್ಟಿಸಿ ನೋಡುತ್ತಿದ್ದಳು. ಕಾಕಪೋಕ ಜನರ ಗುಂಪಿನವರು ಶಿಕ್ಷಕರೊಡನೆ ಆಡಿದಾಗ, ಆಕೆ ತನ್ನ ಕಣ್ಣೆದುರಿನಲ್ಲಿನ ಅವರ ಲೈನ್ ಡ್ರೈವ್ ಗಳನ್ನು ಕ್ಯಾಚ್ ಹಿಡಿಯಬಯಸಿದ್ದಳು.

"ಆಕೆಯು ಸಾಮಾನ್ಯ ಹುಡುಗಿಯರಿಗೆ ಅಸಾಧ್ಯವಾದಂತಹ ಕೆಲಸಗಳನ್ನು ಮಾಡಿ ಮುಗಿಸುತ್ತಿದ್ದಳು" ಎಂದು ಅವಳನ್ನು ಮೆಚ್ಚುತ್ತಿದ್ದ ಸಹಪಾಠಿಯೊಬ್ಬಳು ನೆನಪಿಸಿ ಕೊಳ್ಳುತ್ತಾಳೆ.

ತೀಕ್ಷ್ಣಬುದ್ಧಿಯ ವಿದ್ಯಾರ್ಥಿನಿ :

ಆಕೆಯ ತಂಡವು ಒಂದು ಟೂರ್ನಮೆಂಟ್ ಅನ್ನು ಗೆದ್ದುಕೊಂಡಾಗ ಮತ್ತು ದೊಡ್ಡ ದೊಂದು ಟ್ರೋಫಿಯನ್ನು ಪಡೆದುಕೊಂಡ ಅನತಿಕಾಲದಲ್ಲಿಯೇ ಮಸಾಂಕೋಳ ತಂದೆ ಹಾರ್ವರ್ಡ್ ಲಾ ಸ್ಕೂಲಿನಲ್ಲಿ ಬೋಧಿಸ ಬೇಕೆಂಬ ಆಹ್ವಾನವನ್ನು ಅಂಗೀಕರಿಸಿದನು ಮತ್ತು ಕುಟುಂಬದವರೆಲ್ಲ ಸಾಮಾನು ಗಳನ್ನೆಲ್ಲ ಪ್ಯಾಕುಮಾಡಿ ಬೆಲ್‌ಮೊಂಟ್‌ನ ಉಪನಗರವಾಗಿರುವ ಬಾಸ್ಟನ್‌ನಗರಕ್ಕೆ ತೆರಳಿದರು. ಗುರಿಗೋಲಿನ ಬಳಿ ಕಾಯುವ ಆಟಗಾರ ಮತ್ತು ಆಟಗಾರನಾಗಬೇಕೆಂದು ವ್ಯರ್ಥವಾಗಿ ಬಯಸುವನು. ಕ್ರಮೇಣ ಗಂಭೀರ ಮುದ್ರೆಯವರೂ, ಅಭ್ಯಾಸ ನಿರತರೂ ಮತ್ತು ಅದರಲ್ಲಿಯೇ ದೃಷ್ಟಿ ಯನ್ನು ಕೇಂದ್ರೀಕರಿಸಿ ಅಭ್ಯಾಸ ಮಾಡ ತೊಡಗಿದರು.

ಹಿರಿಯರಾದ ಒವಾಡಾ ಅವರ ಎರಡು ವರ್ಷಗಳ ಬೋಧನಾವಧಿ ಕೊನೆಗೊಂಡಾಗ, ಅವರ ಮಗಳು ಯುನೈಟೆಡ್ ಸ್ಟೇಟ್ಸ್ ನಲ್ಲಿಯೇ ಉಳಿದಳು ಮತ್ತು ಹಾರ್ವರ್ಡ್‌ಗೆ ತೆರಳಿ ಅರ್ಥಶಾಸ್ತ್ರದಲ್ಲಿ ಅತಿ ಹೆಚ್ಚಿನ ಅಂಕ ಗಳನ್ನು ಗಳಿಸಿ ಪದವೀಧರೆಯಾದಳು. "ಅವಳಲ್ಲಿ ಖಂಡಿತವಾಗಿ ಒಂದು ಹೆಚ್ಚಿನ ಆಯಾಮವಿದೆ, ನಿಜವಾದ ವಿಶ್ಲೇಷಕ ಬುದ್ಧಿ ಇದೆ" ಎಂದು ಆಕೆಯ ಸಲಹೆಗಾರ ಜಾಫ್‌ರೀ ಫ್ರ್ಯಾಂಕ್ಸ್ ಅವರು ಕಂಡುಕೊಂಡಿದ್ದಾರೆ." ಆಕೆಯ ಮಹಾ ನಿಬಂಧವು ಜಪಾನಿನ ವಾಣಿಜ್ಯನಿರ್ವಹಣೆಗೆ ಸಂಬಂಧಿಸಿದುದಾ ಗಿತ್ತು ಮತ್ತು ೭೦ರಲ್ಲಿ ಮತ್ತು ೮೦ರಲ್ಲಿ ತೈಲದ ಬೆಲೆಗಳಲ್ಲಿನ ಪ್ರತಿಯೊಂದು ಸಲ ಆಘಾತವುಂಟಾದಾಗಲೂ ಅಲ್ಲಿನ ವ್ಯಾಪಾರ ನಿರ್ವಹಣೆಗೆ ಸಂಬಂಧಿಸಿದ್ದಾಗಿತ್ತು ಮತ್ತು ಅವರ ದೇಶವು ರಫ್ತನ್ನು ಹೆಚ್ಚಿಸುವುದರ ಮೂಲಕ ಇಂಧನಕ್ಕೆ ಹೇಗೆ ಹಣವನ್ನು ಪಾವತಿ ಮಾಡಿತೆಂದು ತಿಳಿಸಿದರು. ಆಕೆಯ ಕಂಪ್ಯೂಟರ್ ಕಾರ್ಯಕ್ರಮವೊಂದನ್ನು ರೂಪಿಸಿದಳು. ಅದು ವಿಶೇಷವಾಗಿ ಒಬ್ಬ ಸ್ನಾತಕಪೂರ್ವ ವಿದ್ಯಾರ್ಥಿಯು ಉಪಯೋಗಿಸುವಂಥದ್ದಾಗಿತ್ತು.

೧೯೮೬ರಲ್ಲಿ ಮಸಾಕೋ ಟೋಕಿಯೋ ವಿಶ್ವವಿದ್ಯಾಲಯದ ನ್ಯಾಯಶಾಸ್ತ್ರ ವಿಭಾಗ ವನ್ನು ಸೇರಿದಳು. ಅವರಲ್ಲಿ ವಿದೇಶಾಂಗ ಸಚಿವಾಲಯದ ಪ್ರವೇಶ ಪರೀಕ್ಷೆಗಾಗಿ ಅಧ್ಯಯನಮಾಡುವವರಲ್ಲಿ ವಿದ್ಯಾರ್ಥಿನಿ ಯರು ಶೇಕಡಾ ೩ ಕ್ಕಿಂತ ಕಡಿಮೆ ಸಂಖ್ಯೆ ಯಲ್ಲಿದ್ದರು. ಆಕೆ ಅದಕ್ಕೆ ಸೇರಿದ ಒಂದು ವರ್ಷದ ಅನಂತರ ಪ್ರವೇಶಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದಳು.

ಹೆಚ್ಚಿನ ಜನರಿಗೆ ಅದರ ಅಧ್ಯಯನಕ್ಕೇನೇ ಎರಡು ವರ್ಷಗಳ ಅವಧಿ ಬೇಕಾಗುತ್ತಿತ್ತು ಮತ್ತು ಓವಾಡಾ ತೇರ್ಗಡೆಹೊಂದಿದ ವರ್ಷ ದಲ್ಲಿ ಕೇವಲ ಶೇಕಡಾ ೫.೩ರಷ್ಟು ವಿದ್ಯಾರ್ಥಿ ಗಳು ಮಾತ್ರ ಉತ್ತೀರ್ಣರಾಗಿದ್ದರು. ಈಗಲೂ ಕೂಡ ಟೋಕಿಯೊದ ರಾಜಕೀಯ ವೃತ್ತಿಬಾಂಧವರು "ಆಕೆ ಒಬ್ಬ ಪುರುಷ ನಿಂದಲೂ ಮಾಡಲಾಗದಂತಹ ಕಠಿಣ ಕೆಲಸ ವನ್ನು ಮಾಡಿದಳು" ಎಂದು ಹೇಳುವುದನ್ನ

ಕೇಳಬಹುದು ಮತ್ತು ಆ ಕೂಡಲೇ ಅವರು ತಮ್ಮನ್ನು ತ್ವರಿತವಾಗಿ ಸರಿಪಡಿಸಿಕೊಂಡರು.

ಕ್ಲಾಂಡಸ್ಟಿನ್ ಪ್ರಣಯಾಚರಣೆ:

೧೯೮೬ರ ಅಕ್ಟೋಬರ್‌ನಲ್ಲಿ ಆಕೆಗೆ ಟೋಕಿಯೋದಲ್ಲಿ ಸ್ಪೇಯಿನ್ನಿನ ರಾಜಕುಮಾರಿ ಎಲಿಸಾಳಿಗೆ ನೀಡಿದ ಸ್ವಾಗತ ಸಮಾರಂಭದಲ್ಲಿ ಅದೃಷ್ಟ ಒಲಿಯಿತು. ಅವಳನ್ನು ಸಮಾರಂಭದಲ್ಲಿ ಕಂಡ ಅವಿವಾಹಿತ ಯುವರಾಜ ನಾರುಹಿಟೋ ಆ ಕ್ಷಣದಲ್ಲಿಯೇ ಆಕೆಯನ್ನು ಮೆಚ್ಚಿಕೊಂಡ. ಪತ್ರಿಕೆಯವರು ನಾರುಹಿಟೋನ ಆಸಕ್ತಿಯನ್ನು ಕಂಡುಹಿಡಿದು ಪ್ರಸಾರ ಮಾಡಿದಾಗ ಒವಾಡಾರವರನ್ನ ಜನ ಸುತ್ತುಗಟ್ಟಿದರು. ಅಷ್ಟರಲ್ಲಿಯೇ ಮಸಾಕೋಸಾನ್ ಅವರಿಗೆ ೧೯೮೮ರಲ್ಲಿ ವಿದೇಶಾಂಗ ಸಚಿವಾಲಯ ಎರಡು ವರ್ಷಗಳ ಅಧ್ಯಯನಕ್ಕೆಂದು ಆಕ್ಸ್‌ಫರ್ಡ್‌ಗೆ ನಿಯೋಜಿಸಿದುದರಿಂದ ಆಕೆ ಅಲ್ಲಿಗೆ ವಿಮಾನ ಮೂಲಕ ಪ್ರಯಾಣ ಬೆಳೆಸಿದಳು. ಆದರೂ ಒಬ್ಬ ಪತ್ರಿಕಾ ವರದಿಗಾರನು ಆಕೆ ಅಲ್ಲಿ ವಾಸವಾಗಿದ್ದ ಮನೆಯಿರುವ ಮಾರ್ಗದ ಆಚೆಕಡೆಯಲ್ಲಿ ಒಂದು ಕೊಠಡಿಯನ್ನು ಬಾಡಿಗೆಗೆ ತೆಗೆದುಕೊಂಡು ವಿಷಯಗಳನ್ನೆಲ್ಲ ಪತ್ತೆಮಾಡತೊಡಗಿದ.

ಹೀಗೆ ನಡೆಯುತ್ತಿದ್ದಾಗ ಆಕೆಯ ಭಾವೀ ಪತಿಯಾಗಲಿದ್ದ ಯುವರಾಜಕುಮಾರನು ಅದೇ ವಿಶ್ವವಿದ್ಯಾಲಯದಲ್ಲಿ ಎರಡು ವರ್ಷಗಳ ಅಧ್ಯಯನವನ್ನು ಆಗ ತಾನೇ ಮುಗಿಸಿದ್ದನು. ಅವನು ಜಪಾನಿಗೆ ಹಿಂತಿರುಗಿದ ಬಳಿಕ ಕನಿಷ್ಠ ಪಕ್ಷ ಇನ್ನಿಬ್ಬರು ಅರ್ಹರಾದ ಯುವತಿಯರನ್ನ ಹಿಂಬಾಲಿಸಿದ್ದನೆಂಬ ವದಂತಿ ಹಬ್ಬಿತು. ಆದರೆ ಅದು ನಿಜವಾಗಿ ಅಲ್ಲ. ಅವನು ವಾಸ್ತವವಾಗಿ ಸದಾ ಒವಾಡಾಳನ್ನೇ ಹಿಂಬಾಲಿಸುತ್ತಿದ್ದ.

ನರುಹಿಟೋ ಆಕೆಯ ಹೆಸರನ್ನು ಪ್ರಸ್ತಾಪಿಸಬಹುದಿತ್ತು, ಅವನು ಹಿಂಬಾಲಿಸಿದ ಬಗ್ಗೆ ತಕರಾರು ಉಂಟಾಗಬಹುದಿತ್ತು. ಪ್ರೇಮಿಗಳ ನಡುವೆ ದೂರವಾಣಿಯ ಮೂಲಕ ವಾರ್ತಾಲಾಪ ನಡೆಯತೊಡಗಿತು. ಚಕ್ರವರ್ತಿಯ ಕಾಡುಬಾತುಕೋಳಿಗಳ ಬೇಟೆಯ ಸ್ಥಳದಲ್ಲಿ ಅವರು ಆಗಾಗ ಗೊತ್ತುಮಾಡಿಕೊಂಡು ಸೇರುತಿದ್ದರು. ಅಂಥ ಎಲ್ಲ ಸಂದರ್ಭಗಳಲ್ಲಿಯೂ ಅವರ ಪ್ರೇಮಪ್ರಕರಣವನ್ನು ಗುಟ್ಟಾಗಿ ಇಡಲಾಗುತ್ತಿತ್ತು. ಆದರೆ ಒಂದು ಸಣ್ಣ ವಿನಿಮಯವೂ ಈ ಯುವ-ಜೋಡಿ ಅನೋನ್ಯ ಸಂಬಂಧವನ್ನು ಬೆಳೆಸಿಕೊಂಡಿತು ಮತ್ತು ಅದು ಆಗಾಗ ಅನುವರ್ತಿಸತೊಡಗಿತು. ಪತ್ರಿಕೆಯವರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಒಂದಿಷ್ಟು ಕೋಪೋದ್ರಿಕ್ತ ಚರ್ಚೆನಡೆಸಿದ ಬಳಿಕ ಮಸಾಕೊ-ಸ್ಯಾನ್ ಅವರು ನಾರುಹಿಟೋಗೆ "ಬಹುಶಃ ನಾನು ಯಾವುದಾದರೂ ಪಂಡಾ ಸೂಟಿನಲ್ಲಿ, ಯಾವುದೇ ಪಂಡಾ ಸೂಟನ್ನು ಧರಿಸಬಹುದಾಗಿತು" ಎಂದು ಹಾಸ್ಯಮಾಡಿದಳು.

ತಾರಾಗುಣಗಳು :

ಅಂತಿಮವಾಗಿ ಆಕೆ "ನಾನೇನಾದರೂ ನಿನಗೆ ಆಸರೆಯಾಗಲು ಸಾಧ್ಯಾವಾಗುವುದಾದರೆ, ನಾನು ವಿನೀತಳಾಗಿ ಅಂಗೀಕರಿಸಲು ಸಿದ್ಧಳಿದ್ದೇನೆ ನಾನು ಇದನ್ನು ಒಪ್ಪಿಕೊಳ್ಳುವುದರಿಂದ ನಿಮ್ಮ ಸಮ್ರಾಟರನ್ನು ಸಂತೋಷಪಡಿಸಲು ನಾನು ಕಷ್ಟಪಟ್ಟು ಶ್ರಮಿಸು

ತ್ತೇನೆ ಮತ್ತು ನನ್ನ ಜೀವನದತ್ತ ಹಿಂತಿರುಗಿ ನೋಡುತ್ತೇನೆ ಮತ್ತು "ಅದೊಂದು ಉತ್ತಮ ಜೀವನವಾಗಿತ್ತು" ಎಂದು ಭಾವಿಸುತ್ತೇನೆ" ಎಂದು ಮೃದುವಾಗಿ ಹೇಳಿದಳು. ಅವಳ ಆ ಹೇಳಿಕೆಯು ಪಾಶ್ಚಾತ್ಯರಿಗೆ ನಿರಭಿಮಾನದ, ಬಹಳ ದೈನ್ಯ ತೋರುವ ಹೇಳಿಕೆಯಾಗಿ ಕೇಳಿಸಬಹುದು, ಆದರೆ ಜಪಾನಿನಲ್ಲಿ ಅದರ ಪ್ರತಿಕ್ರಿಯೆಯು ಬಹಳ ಭಿನ್ನವಾಗಿತ್ತು. ಕೊನೆಯ ಖಂಡದಲ್ಲಿ ಒವಾಡಾ ಅವರು ತಮ್ಮ ಸ್ವಂತ ರೀತಿಯಲ್ಲಿಯೇ ಆಕೆ ಅದನ್ನು ಈಡೇರಿಕೊಂಡಳೆಂದು ಸಾರ್ವಜನಿಕರಲ್ಲಿ ಧೈರ್ಯವಾಗಿ ಹೇಳಿಕೊಂಡಳು. ಯುವತಿಯರಿಗೆ ಮತ್ತು ಅನೇಕ ಗಂಡಸರಿಗೆ ಅದು ಹೊಸ ಒಡಂಬಡಿಕೆಗೆ ಕರೆ ನೀಡಿದಂತಾಯಿತು. ಒವಾಡಾ ಜೀವನದಲ್ಲಿ ತನ್ನದೇ ಆದ ನ್ಯಾಯಸಮ್ಮತವಾದ ನಿರೀಕ್ಷೆಗಳಿವೆ ಎಂದು ಹೇಳಿ ಮಹಿಳೆಯರ ಹಕ್ಕುಗಳಿಗಾಗಿ ಒಂದು ಹೊಡತವನ್ನು ಹೊಡೆದಳು. ಬೆಳೆಯುತ್ತಿರುವ ಸಂಖ್ಯೆಯ ಹೆಂಗಸರಿಗೆ ವಿಶೇಷವಾಗಿ ಮತ್ತು ಒವಾಡಾಳಂತೆಯೇ ವಿದೇಶಗಳಲ್ಲಿ ನೆಲಸಿರುವ ಮತ್ತು ಹೆಚ್ಚಿನ ಜಪಾನೀಯರಿಗಿಂತಲೂ ಹೆಚ್ಚಿನ ನಗರಜೀವನದ ಅನುಭವವುಳ್ಳ ಒಬ್ಬ ವಿದ್ಯಾವಂತ ಮಹಿಳೆಗೆ ಮದುವೆಯೆಂದರೆ ಖಂಡಿತವಾಗಿ ಒಂದು ಆಕರ್ಷಕ ಪ್ರತೀಕ್ಷೆಯೇನಲ್ಲ.

ಒವಾಡಾ ಮತ್ತು ಆಕೆಯ ಪತಿ ನಿಜವಾಗಿಯೂ ಮದುವೆಯೆಂಬ ಪದ್ಧತಿಯನ್ನೇ ನಡುಗಿಸುವರೇನು? ಚಕ್ರವರ್ತಿಯ ಕುಟುಂಬದವರು ಆಕೆಯನ್ನು ಒಂದು ನಯನಾಜೂಕಿನ ವ್ಯಕ್ತಿಯನ್ನಾಗಿ ಪಳಗಿಸುವರು. ಆಕೆಯ ಪ್ರತಿಯೊಂದು ಚಲನವಲನವನ್ನು ದಾಖಲಿಸಿಕೊಳ್ಳಲಾಗುವುದು ಎಂದು ಕೆಲವು ಮಂದಿ ವೀಕ್ಷಕರು ಹೆದರಿದ್ದರು. ಅವರು ಆಕೆಯು ಪೋಷಾಕು ಧರಿಸುವ ಬಗೆಯಲ್ಲಿ ಆದ ಬದಲಾವಣೆಯತ್ತ ಬೊಟ್ಟುತೋರಿಸಿದರು. ಆಕೆ ಎಂದೂ ಗಾಳಿ ಬಂದ ಹಾಗೆ ತೂರಿಕೊಳ್ಳುವ ಪ್ರವೃತ್ತಿಯವಳಾಗಿರಲಿಲ್ಲ. ಆಕೆ ಆಕ್ಸ್‌ಫರ್ಡ್‌ನಲ್ಲಿ ಮೃದುಸ್ವಭಾವದ ಆದರ್ಶ ಮಹಿಳೆಯಾಗಿದ್ದಳು ಮತ್ತು ಸಚಿವಾಲಯದಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುವಂತೆ ಶ್ಯಾಮವರ್ಣದ ಪೋಷಾಕನ್ನು ಧರಿಸುತ್ತಿದ್ದಳು. ಆಕೆಯ ವಿವಾಹ ನಿಶ್ಚಿತಾರ್ಥ ನೆರವೇರಿದಂದಿನಿಂದ, ಆಕೆ ಫಕ್ಕನೆ ಉಜ್ವಲ ಬಣ್ಣದ ಮತ್ತು ಸಾಂಪ್ರದಾಯಿಕವಾದ ಹಾಗೂ ಬಹುಮಟ್ಟಿಗೆ ಮದುವೆಯಾದ ಹೆಂಗಸಿನಂತೆಯೇ ಸುಂದರವಾದ ಪೋಷಾಕನ್ನು ಧರಿಸತೊಡಗಿದಳು.

ಒವಾಡಾಳನ್ನು ಅರಿತುಕೊಳ್ಳಲು ಆಕೆಯ ಪೋಷಾಕೇ ಸರಿಯಾದ ಮಾರ್ಗವೇನಲ್ಲ. ಆದರೆ ಪ್ರತಿಯೊಬ್ಬರೂ ಸುಳಿವಿಗಾಗಿ ಕಾಯುತ್ತಿದ್ದರು. "ಅಲ್ಲಿ ಅನೇಕ ಮುಖ್ಯ ಮಾತುಗಳಿದ್ದವು—ಹಾರ್ವರ್ಡ್ ಟೋಕಿಯೋ ವಿಶ್ವವಿದ್ಯಾನಿಲಯದ ರಾಯಭಾರ ಕುಶಲಿ" ಎಂದು ನಾವೊಕೀ ಇನೋಸ್ ಎಂಬ ಪರಿಶೋಧಕ ಪತ್ರಿಕೋದ್ಯಮಿಗಳು ಹೇಳುತ್ತಾರೆ. "ಅವರ ಕುಟುಂಬದವರು ನೊಸಾಕೋ ಬಹು ಬೆಲೆಬಾಳುವಾಕೆ ಎಂದು ಭಾವಿಸಿದರು.

ಆಕೆ ತನ್ನ ಸ್ತ್ರೀಲಕ್ಷಣ ಮತ್ತು ಸಾಮರ್ಥ್ಯ ಇವುಗಳೆರಡರ ಸಹಾಯದಿಂದ ನಂಬಿಕೆಗೆ ಮೀರಿದ ಆಶ್ಚರ್ಯಕರ ಹೆಂಗಸಾಗಿ ರೂಪುಗೊಂಡಿದ್ದಾಳೆ. ಈಗಂತೂ ಆಕೆ ರಾಜ

ಕುಮಾರಿಗೆ ಯೋಗ್ಯವೆನ್ನಿಸುವಂತಹ ತೇಜಸ್ಸನ್ನೂ, ಪ್ರತಿಭೆಯನ್ನೂ ಹೊಂದಿದ್ದಾಳೆ" ಎಂದು ಆಕೆಯ ಸಹಪಾಠಿಯಾಗಿದ್ದ ಸಚಿಕೋ ಟಕಾವ್ಯೈನ್ ಹೇಳುತ್ತಾಳೆ.

ಜಪಾನು ಮತ್ತು ಅಮೆರಿಕೆಯನ್ನು ಕುರಿತು ಅನೇಕ ಗ್ರಂಥಗಳನ್ನೇ ರಚಿಸಿದಂತಹ ಯೋಶಿಮಿ ಇಶಿಕಾವಾ ಅವರು ಸಮ್ರಾಟರ ರಾಜಮನೆತನವನ್ನು ಸುತ್ತುವರಿದಿರುವ ಅತಿಯಾದ ಗೋಪ್ಯತೆಯಿಂದ ಒಂದು ಬದಲಾವಣೆ ಎಂಬುದು ಒಂದು ಆರೋಗ್ಯಕರ ವಿಷಯವೆಂದು ಭಾವಿಸಿದ್ದಾರೆ. "ಮಸಾಕೋ ಒವಾಡಾಳಲ್ಲಿ ತಾರೆಯಾಗಿರುವ ಕ್ಷಮತೆ, ಸಾಮರ್ಥ್ಯವಿದೆ–ಜಪಾನೀಯರಿಗೆ ಕಷ್ಟಪಟ್ಟು ಅಧ್ಯಯನ ಮಾಡುವ ಜನರೆಂದರೆ ಬಹಳ ಅಭಿಮಾನ–ಆಕೆಯ ಶೈಕ್ಷಣಿಕ ಮಹಾಸಾಧನೆಯು ಆಕೆಗೆ ದಿವ್ಯಶಕ್ತಿಯನ್ನೊದಗಿಸುತ್ತದೆ" ಎನ್ನುತ್ತ ಅವರು ಈವರೆಗೆ ಗುಪ್ತವಾಗಿರುವ ಜಗತ್ತನ್ನು ತೆರೆಯುವ ಅವಕಾಶ ಅವಳಿಗೆ ಲಭಿಸಿದೆ" ಎನ್ನುತ್ತಾರೆ. ರಾಜಕುಮಾರನಂತೂ ಒವಾಡಾಳನ್ನು ಎಷ್ಟರಮಟ್ಟಿಗೆ ಪ್ರೀತಿಸುತ್ತಾನೆ ಎಂದರೆ, ಆಕೆ ಬದಲಾವಣೆಯನ್ನು ಬಯಸಿದರೆ ಆತನು ಸಹಾಯ ಮಾಡಬಹುದು. ಮಸಾಕೋ ಒವಾಡಾಳೇನಾದರೂ ಕುಟುಂಬ ಮತ್ತು ಜನತೆಯ ನಡುವೆ ಒಂದು ಸೇತುವೆಯನ್ನು ಕಟ್ಟಿದ ಪಕ್ಷದಲ್ಲಿ ನಾವು ಜಪಾನೀಯರ ಇತಿಹಾಸದಲ್ಲಿ ಹೊಸ ಯುಗವೊಂದನ್ನು ಸೃಷ್ಟಿಸಬಹುದು" ಎಂದು ಅವರು ಹೇಳುತ್ತಾರೆ.



ಮನೆಯ ಜನರು ಎಚ್ಚರವಾಗಿರುವವರೆಗೆ ಕಳ್ಳರು ಮನೆಯನ್ನು ಹೇಗೆ ಪ್ರವೇಶಿಸಬಹುದು ? ಸಂಪತ್ತನ್ನು ಹೇಗೆ ಅಪಹರಿಸಬಹುದು ? ಹಾಗೆಯೇ ನೀವು ಸದಾ ಎಚ್ಚರವಾಗಿದ್ದರೆ ದುರ್ಗುಣ ಹಾಗೂ ದುರಾಶೆಗಳಿಂದ ದುಷ್ಟಗಳು ನಿಮ್ಮ ಹೃದಯವನ್ನು ಹೊಕ್ಕು ನಿಮ್ಮ ಶೀಲ, ಸಂಪತ್ತನ್ನು ಅಪಹರಿಸಲಾರವು.

—ರಾಮಕೃಷ್ಣ ಪರಮಹಂಸ

ಪ್ಲೇಗ್ ರೋಗವೆಂಬ ಪಿಡುಗು

ಡಾ|| ಸ. ಜ. ನಾಗಲೋಟಿಮಠ

ಪ್ಲೇಗ್ ! ಇಡೀ ದೇಶವನ್ನು ನಡುಗಿಸಿ ಅಂತಾರಾಷ್ಟ್ರೀಯ ವ್ಯಾಪಾರ ಸಂಚಾರ ವ್ಯವಹಾರಗಳ ಮೇಲೆ ಕರಾಳ ಛಾಯೆ ಬೀರಿ, ಈ ದೇಶವೇ ಪ್ಲೇಗಿನ ತೊಟ್ಟಿಲೋ ಶವಾಗಾರವೋ ಎಂಬ ಅಪಪ್ರಚಾರಕ್ಕೆ ಕಾರಣವಾದ ಪಿಡುಗು. ಇಂಥ ಯಾವುದೇ ವ್ಯಾಧಿಯನ್ನು—ದೈಹಿಕ ಮಾನಸಿಕ ಅಥವಾ ಧಾರ್ಮಿಕವೇ ಆಗಬಹುದು (ಮೂಲಭೂತತ್ವ, ಅಂಥತೆ ಮುಂತಾದವು)—ನಿವಾರಿಸಲಿರುವ ವೈಜ್ಞಾನಿಕ ಉಪಾಯಗಳು ಮೂರು : ಗತ ಅನುಭವದಿಂದ ವರ್ತಮಾನದಲ್ಲಿ ಸುರಕ್ಷಣೆ ಪಡೆಯುವುದು, ವ್ಯಾಧಿ ಎದುರಾದಾಗ (ಈಗಿನಂತೆ) ವೈಜ್ಞಾನಿಕವಾಗಿ ಪರಿಹರಿಸುವುದು, ಮರುಕಳಿಸದಂತೆ ಈಗ ಎಚ್ಚರ ವಹಿಸುವುದು.

ಪ್ಲೇಗ್ (Plague) ಎಂಬುದು ಒಂದು ರೋಗ. ಇದನ್ನು ಒಂದು 'ಮಹಾಮಾರಿ' ಎಂದೇ ಕರೆಯುತ್ತಿದ್ದರು. ನೂರಾರು ವರ್ಷಗಳ ಹಿಂದೆ ಈ ರೋಗವು ಒಮ್ಮೆ ಕಾಣಿಸಿದರೆ ಮನೆಯಿಂದ ಮನೆಗೆ, ಊರಿಂದ ಊರಿಗೆ, ರಾಜ್ಯದಿಂದ ರಾಜ್ಯಕ್ಕೆ, ದೇಶದಿಂದ ದೇಶಕ್ಕೆ ಹಬ್ಬುತ್ತ ಹಲವಾರು ಖಂಡಗಳನ್ನೇ ಆವರಿಸುತ್ತಿತ್ತು. ಲಕ್ಷಗಟ್ಟಲೆ ಜನರು ಮರಣ ಹೊಂದುತ್ತಿದ್ದರು. ಊರಿಗೆ ಊರೇ ನಿರ್ನಾಮವಾಗುತ್ತಿದ್ದವು. ಯುರೋಪ್ ಖಂಡದಲ್ಲಿ ಪ್ಲೇಗಿನ ಹಾವಳಿ ವಿಪರೀತವಾಗಿ, ತ್ವಚೆಯು ಕಪ್ಪುವರ್ಣಕ್ಕೆ ತಿರುಗಿ ಜನರು ಸಾಯತೊಡಗಿದರು. ಕಾರಣ ಅವರು ಪ್ಲೇಗ್ ರೋಗವನ್ನು 'ಕರಾಳ ಮೃತ್ಯು (Black Death) ಎಂದೇ ಕರೆಯತೊಡಗಿದರು. ಈ ಶತಮಾನದ ಪ್ರಾರಂಭದಲ್ಲಿ ಪ್ಲೇಗ್ ಭಾರತದಲ್ಲಿ ಕಾಲಿಟ್ಟು ದೊಡ್ಡ ಹಾಹಾಕಾರ ಎಬ್ಬಿಸಿತು. ಅಂದಿನ ಬ್ರಿಟೀಷ್ ಸರಕಾರವು ಈ ರೋಗನಿಯಂತ್ರಣವನ್ನು ಸಾಧಿಸಲು ರೋಗಿ ಇದ್ದ ಮನೆಯನ್ನು, ಅವನ ಕುಟುಂಬದ ಸದಸ್ಯರ ಸಹಿತ ಸುಟ್ಟುಬಿಡುತ್ತಿದ್ದರು. ಅಂದು ಈ ರೋಗಕ್ಕೆ ಯಾವ ಸೂಕ್ತ ಮದ್ದುಗಳೂ ಇರಲಿಲ್ಲ. ಇಂದು ಪರಿಸ್ಥಿತಿ ಬದಲಾಗಿದೆ. ನಾವು ಪ್ಲೇಗಿಗೆ ಅಷ್ಟು ಭಯಪಡಬೇಕಾಗಿಲ್ಲ. ಉತ್ತಮ ಮದ್ದುಗಳು ದೊರೆತಿವೆ.

'ಪ್ಲೇಗ್' ಅಂದರೇನು ?

ಈ ಮರಣಮಾರಿಯನ್ನು ಬೇರೆ ಹೆಸರಿನಿಂದ ಕರೆಯದೇ ಪ್ಲೇಗ್ ಎಂದೇ ಯಾಕೆ ಕರೆದರು ?

ಈ ಪದವನ್ನು ಮೊದಲು ರೋಮನ್ನರು ಬಳಸಿದರು. ರೋಮಿನ ಪುರಾಣದ ಕಥೆಗಳಲ್ಲಿ ಅವರ ಒಬ್ಬ ದೇವರು ಜನರು ಮಾಡುತ್ತಿರುವ ತಪ್ಪುಗಳನ್ನು ಕಂಡು ಕುಪಿತಗೊಂಡನಂತೆ. ತನ್ನ ಸಿಟ್ಟಿನಲ್ಲಿ ಜನರನ್ನು ಶಿಕ್ಷಿಸಲು ಜೋರಿನಿಂದ ಪ್ರಹಾರ ಮಾಡಿದನಂತೆ. ಆ ಭಾಷೆಯಲ್ಲಿ 'ಪ್ಲಾಗಾ' (Plaga) ಎಂದರೆ ಭೀಕರ ಪ್ರಹಾರ ಎಂದು ಅರ್ಥ. ಕಾರಣ ರೋಗವನ್ನು 'ಪ್ಲೇಗ್' ಎಂದು ಕರೆಯತೊಡಗಿದರು. ಈ ಕಥೆಯನ್ನು ಕ್ರಿಶ್ಚಿಯನ್ನರು ಹಾಗೂ ಮಹಮ್ಮದೀಯರೂ ಸಹ ಒಪ್ಪಿಕೊಂಡು ತಮ್ಮ ದೇವರ ಮೇಲೆ ರೋಗ ಹುಟ್ಟಿಸಿದ ಅಪರಾಧವನ್ನು ಹಾಕಿದರು. ಭಾರತದಲ್ಲಿಯಂತೂ ಪ್ರತಿಯೊಂದು ರೋಗಕ್ಕೆ ಒಂದೊಂದು ದೇವರು ಇರುವವು.

ಪ್ಲೇಗ್ ಪಿಡುಗಿನ ಇತಿಹಾಸ

ಪ್ಲೇಗ್ ಪಿಡುಗು ಪ್ರಾಚೀನ ಕಾಲದಿಂದಲೇ ಜನರನ್ನು ಪೀಡಿಸುತ್ತ ಬಂದಿದೆ. ಇಂದು ದೊರೆತ ದಾಖಲೆಗಳ ಆಧಾರದ ಮೇಲೆ ಪ್ಲೇಗ್ ರೋಗದ ಪಿಡುಗು ಪ್ರಥಮ ಬಾರಿಗೆ ಕ್ರಿ ಶ. ೫೪೨ರಲ್ಲಿ ಈಜಿಪ್ಟ್ ದೇಶದಲ್ಲಿ ತಲೆಯೆತ್ತಿತ್ತು. ಅಲ್ಲಿಂದ ಅದು ಟರ್ಕಿ ದೇಶಕ್ಕೆ ಹಬ್ಬಿತು. ಟರ್ಕಿ ದೇಶದಿಂದ ಯುರೋಪ್ ದೇಶಗಳಲ್ಲಿ ಸೇರಿ ಹಾವಳಿ ಮಾಡಿತು.

ಎರಡನೆಯ ಮಹಾಪಿಡುಗು ೧೪ ನೆಯ ಶತಮಾನದಲ್ಲಿ ಕಾಣಿಸಿಕೊಂಡಿತು. ಏಶಿಯಾ ಹಾಗೂ ಆಫ್ರಿಕೆಗಳನ್ನು ಆವರಿಸಿತ್ತು. ಅಲ್ಲಿಂದ ಯುರೋಪಿಗೆ ಚಾಚಿಕೊಂಡಿತು. ಅದರ ಹಾವಳಿಯಿಂದ ಸುಮಾರು ಪ್ರತಿಶತ ೨೫ ರಷ್ಟು ಜನ ಸತ್ತು ಹೋದರು. ಸಾಯುವ ಮೊದಲು ರೋಗಿಯ ಚರ್ಮದಲ್ಲಿ ಕಪ್ಪು ಕಲೆಗಳು ಮೂಡುತ್ತಿದ್ದವು. ಅಂಗಾಂಗಗಳು ಕಪ್ಪುವರ್ಣಕ್ಕೆ ತಿರುಗಿ ಕೊಳೆತು ಹೋಗುತ್ತಿದ್ದವು. ಕಾರಣ ಜನರು ಈ ರೋಗವನ್ನು 'ಕರಾಳ ಮೃತ್ಯು' ಎಂದು ಕರೆದರು.

ಮೂರನೆಯ ಪಿಡುಗು ೧೫ ನೆಯ ಶತಮಾನದಲ್ಲಿ ತಲೆಯೆತ್ತಿ, ತನ್ನ ಉಪಟಳವನ್ನು ೧೮ ನೆಯ ಶತಮಾನವದರೆಗೂ ಬೆಳೆಸಿಕೊಂಡು ಬಂದಿತು.

ನಾಲ್ಕನೆಯ ಮಹಾಪಿಡುಗು ಚೀನಾ ದೇಶದ ದಕ್ಷಿಣ ಭಾಗದಲ್ಲಿ ಹುಟ್ಟಿಕೊಂಡಿತು. ಇದು ನಡೆದದ್ದು ಸುಮಾರು ೧೮೬೦ ರಲ್ಲಿ. ಮುಂದೆ ಅದು ೧೮೯೪ ರಲ್ಲಿ ಹಾಂಗ್‌ಕಾಂಗ್ ದೇಶಕ್ಕೆ ಕಾಲಿಟ್ಟಿತು. ಹಾಂಗ್‌ಕಾಂಗಿನ ಹಡಗುಗಳೊಡನೆ ಮುಂಬೈಗೆ ತಲುಪಿ ಇಡೀ ಭಾರತವನ್ನೇ ಅಲ್ಲಾಡಿಸಿತು.

ಇದಾದ ಮೇಲೆ ಮೊದಲಿನಂಥ ಮಹಾಪಿಡುಗು ಕಾಣಿಸಿಲ್ಲ. ಆದರೆ ಪ್ಲೇಗ್ ರೋಗ ಹಲವಾರು ದೇಶಗಳಲ್ಲಿ ಆಗೀಗ ಕಾಣುತ್ತಲೇ ಇದೆ. ದಾಖಲೆಗಳಂತೆ ೧೯೭೦ ರಿಂದ ೧೯೯೦ರ ಅವಧಿಯಲ್ಲಿ ಪ್ಲೇಗ್ ರೋಗವು ಅಮೇರಿಕ, ಯುಕೆಡೆಲ್, ಪೆರು, ಬೊಲಿವಿಯಾ, ಬ್ರೆಝಿಲ್, ಗಿನಿಯಾ, ಲಿಬಿಯಾ, ಸೂಡಾನ್ ಕೆನ್ಯಾ, ಅಂಗೋಲಾ, ನಮೀಬಿಯಾ, ತಾಂಝಾನಿಯಾ, ಮೊಝಾಂಬಿಕ್, ದಕ್ಷಿಣ ಆಫ್ರಿಕ, ಮಡಗಾಸ್ಕರ್, ಬರ್ಮಾ, ವಿಯೆಟ್ನಾಮ್, ಕಾಂಪೂಚಿಯಾ ಮತ್ತು ಇಂಡೋನೇಶಿಯಾ ದೇಶಗಳಲ್ಲಿ ಕಾಣಿಸಿಕೊಂಡಿತ್ತು. ಸುದೈವದಿಂದ ಅದು ಭಾರತದಲ್ಲಿ ಹಲವು ದಶಕಗಳವರೆಗೆ ಕಾಣಿಸಿದ್ದಿಲ್ಲ. ಈ ವರ್ಷ ಅಂದರೆ ೧೯೯೪ ರ ಸೆಪ್ಟೆಂಬರ್ ಹಾಗೂ ಅಕ್ಟೋಬರ್ ತಿಂಗಳಲ್ಲಿ ಮಹಾ

ರಾಷ್ಟ್ರ ಮತ್ತು ಗುಜರಾತ್ ಪ್ರಾಂತ್ಯಗಳಲ್ಲಿ ಕಂಡು ಬೇರೆ ರಾಜ್ಯಗಳಿಗೂ ಪ್ರಸಾರಗೊಳ್ಳಲು ಹವಣಿಸಿತು. ಸುದೈವದಿಂದ ಜನರ, ಸರಕಾರದ ಪ್ರಯತ್ನಗಳಿಂದ ಅತಿ ಬೇಗನೇ ಹಿಂದೆ ಸರಿಯಿತು.

ಒಂದು ಸಂಗತಿಯನ್ನು ನೆನಪಿನಲ್ಲಿ ಇಡಬೇಕು. ಅದೆಂದರೆ ಪ್ಲೇಗ್ ರೋಗ ಇಂದಿಗೂ ಅನೇಕ ದೇಶಗಳಲ್ಲಿ ಜೀವಂತ ಇದೆ. ಆದರೆ ಅವಿತುಕೊಂಡಿದೆ. ಆಸ್ಪದ ಸಿಕ್ಕರೆ ಹೊರ ಬಂದು ಮೃತ್ಯುನೃತ್ಯ ಪ್ರಾರಂಭಿಸಬಹುದು.

ಪ್ಲೇಗ್ ರೋಗ ಎಲ್ಲಿ ಅಡಗಿಕುಳಿತಿದೆ?

ಪ್ಲೇಗ್ ಮೂಲತಃ ಪ್ರಾಣಿ ವರ್ಗದ ಮೂಷಕಗಳ ರೋಗ. ಮೂಷಕಗಳು ಅಡವಿಯಲ್ಲಿ ವಾಸಿಸುವದು ಹೆಚ್ಚು. ಅಡವಿಯ ಮೂಷಕಗಳಲ್ಲಿ ಪ್ಲೇಗ್ ರೋಗಾಣು ತನ್ನ ಜೀವನ ಚಕ್ರವನ್ನು ನಡೆಸುತ್ತಲಿದೆ. ಮೂಷಕಗಳು ನೆಲದೊಳಗೆ ಬಿಲಗಳಲ್ಲಿ ಬದುಕುತ್ತವೆ. ಕಾರಣ ಪ್ಲೇಗ್ ರೋಗವು ಈ ಮೂಷಕಗಳೊಡನೆ ಅವುಗಳ ಬಿಲಗಳಲ್ಲಿ ಕುಳಿತು ಉಸಿರಾಡಿಸುತ್ತಲಿದೆ.

ಪ್ಲೇಗ್ ರೋಗ ತಗುಲಿದ ಮೂಷಕವು ರೋಗದಿಂದ ಜರ್ಜರಿತವಾಗಿ ಚಲಿಸಲು ಸಾಧ್ಯವಾಗದೆ ಒಂದು ಕಡೆಗೆ ಬಿದ್ದುಕೊಂಡು ಬಿಡುವುದು. ಈ ಪ್ರಾಣಿಯ ರಕ್ತವು ರೋಗಾಣುಮಯವಾಗಿರುತ್ತದೆ. ಅದರ ಪ್ರತಿಯೊಂದು ಅಂಗವೂ ರೋಗಾಣುಗಳಿಂದ ಮುಲುಗುಟ್ಟುತ್ತಿರುತ್ತದೆ. ಇಂಥ ರೋಗಪೀಡಿತ ಪ್ರಾಣಿಯ ಮೈಮೇಲೆ ಜೀವಿಸಿರುವ ಚಿಕ್ಕಾಡು ಅಥವಾ ಚಿಗಟೆಗಳು ರಕ್ತದೊಡನೆ ರೋಗಾಣುಗಳನ್ನು ಸಹ ತಮ್ಮ ಅನ್ನ ಮಾರ್ಗದಲ್ಲಿ ತುಂಬಿಕೊಂಡಿರುತ್ತವೆ. ರೋಗಿಷ್ಠ ಪ್ರಾಣಿಯು ಮರಣವನ್ನು ಅಪ್ಪುತ್ತಿರುವಂತೆ ಚಿಗಟೆಗಳು ಜಿಗಿದು ತಮ್ಮ ಆಹಾರಕ್ಕೆಂದು ಬೇರೆ ಮೂಷಕಗಳನ್ನು ಹಿಡಿಯುವುವು. ಹೊಸ ಪ್ರಾಣಿಯ ರಕ್ತ ಕುಡಿಯಲು ಚಿಗಟ ತನ್ನ ಬಾಯೊಳಗಿನ ಸೂಜಿಯನ್ನು ತ್ವಚೆಯಲ್ಲಿ ಚುಚ್ಚಿ, ತ್ವಚೆಯ ರಕ್ತವಾಹಿನಿಗಳಲ್ಲಿ ಸೇರಿಸುವದು. ಬಿಸಿರಕ್ತವನ್ನು ಹೀರಲು ಪ್ರಾರಂಭಿಸುವದು. ಆದರೆ ಗಂಟಲಲ್ಲಿ ಭಾರಿ ಪ್ರಮಾಣದಲ್ಲಿ ಶೇಖರಗೊಂಡಿದ್ದ ಪ್ಲೇಗ್ ರೋಗಾಣುಗಳು ರಕ್ತ ಗಂಟಲಲ್ಲಿ ಸೇರವಂತೆ ತಡೆಯುತ್ತವೆ. ಆಗ ಚಿಗಟಗಳು ತಮ್ಮ ಗಂಟಲಲ್ಲಿಯ ತಡೆಯನ್ನು ನಿವಾರಿಸಲು ಕೇಕರಿಸಿ ಉಗುಳುವಂತೆ ವಾಂತಿ ಮಾಡಿಕೊಳ್ಳುತ್ತವೆ. ವಾಂತಿಯಲ್ಲಿದ್ದ ಸಾವಿರಾರು ರೋಗಾಣುಗಳು ನೇರವಾಗಿ ಹೊಸ ಪ್ರಾಣಿಯ ಚರ್ಮದ ತಳದಲ್ಲಿ ಇಲ್ಲವೆ ನೇರವಾಗಿ ರಕ್ತ ಪ್ರವಾಹದಲ್ಲಿ ಸೇರುತ್ತವೆ ಹಾಗೂ ಹೊಸ ಪ್ರಾಣಿಯಲ್ಲಿ ರೋಗ ಹುಟ್ಟಿಸುತ್ತವೆ.

ಮೃತ ಮೂಷಕಗಳನ್ನು ಬೇರೆ ಮೂಷಕಗಳು ತಿಂದರೂ ರೋಗ ಪ್ರಸಾರ ಆಗಬಹುದು.

ಮೃತ ಮೂಷಕದ ದೇಹ ಕೊಳೆತು ಮಣ್ಣಿನಲ್ಲಿ ಸೇರುವಾಗ ಅಂಗಾಂಶಗಳಲ್ಲಿದ್ದ ರೋಗಾಣು ಮಣ್ಣಿನೊಡನೆ ಸೇರಿಕೊಂಡು ವರ್ಷಗಟ್ಟಲೇ ಜೀವಂತ ಉಳಿಯುತ್ತದೆ, ಹೀಗೂ ರೋಗ ಪ್ರಸಾರವಾಗುವದು. ಅಡವಿಯ ಮೂಷಕಗಳೊಡನೆ ಸಂಪರ್ಕ ಇಟ್ಟುಕೊಂಡ ಮಾನವರ ವಸತಿಗಳಲ್ಲಿ ಓಡಾಡುವ ಇಲಿಗಳು ರೋಗವನ್ನು ಪಡೆ

ಯುವುವು. ಅಡವಿಯಲ್ಲಿದ್ದ ರೋಗವನ್ನು ಊರಿಗೆ ಆಮಂತ್ರಿಸುವುವು.

ಇಲಿಗಳು ವಾಸಿಸುವ ಪ್ರದೇಶದಲ್ಲಿ ಪ್ಲೇಗ್ ರೋಗವು ಅವುಗಳೊಡನೆ ನೆಲದಲ್ಲಿಯ ಬಿಲಗಳಲ್ಲಿ ಅಡಗಿ ಕುಳಿತಿದೆ. ಅನುಕೂಲ ವಾತಾವರಣ ಸಿಕ್ಕಾಗ ಹೊರ ಬಂದು ತನ್ನ ಹಾವಳಿಯನ್ನು ಪ್ರಾರಂಭಿಸುವುದು.

ಪ್ಲೇಗ್ ರೋಗಾಣು :

ಅನೇಕ ವರ್ಷಗಳವರೆಗೆ ಪ್ಲೇಗ್ ರೋಗಕ್ಕೆ ದೇವರ ಕೋಪವೇ ಕಾರಣವೆಂದು ಜಗತ್ತು ತಿಳಿದಿತ್ತು. ಸೋಂಕು ರೋಗಗಳಿಗೆ ಬ್ಯಾಕ್ಟೀರಿಯಾ ಅಥವಾ ಸೂಕ್ಷ್ಮಾಣುಗಳು ಕಾರಣವೆಂದು ಖಚಿತವಾದದ್ದು ೧೯ನೆಯ ಶತಮಾನದ ಕೊನೆಯ ಭಾಗದಲ್ಲಿ. ಪ್ಲೇಗ್ ರೋಗದ ರೋಗಾಣುವನ್ನು ಅಲೆಕ್ಝಾಂಡರ ಯೆರ್‌ಸಿನ್ ಅವರು ೧೮೯೪ರಲ್ಲಿ ಗೊತ್ತು ಹಚ್ಚಿದರು. ಅದೇ ವರ್ಷ, ಅದೇ ಕಾಲಕ್ಕೆ ಇನ್ನೊರ್ವ ವಿಜ್ಞಾನಿ ಕಿಟಸಾಟೊ ಅವರೂ ರೋಗಾಣುವನ್ನು ಪತ್ತೆಮಾಡಿದರು. ಮುಂದೆ ೧೮೯೭ರಲ್ಲಿ ಪ್ಲೇಗ್ ರೋಗವು ಚಿಕ್ಕಾಡುಗಳಿಂದ ಪ್ರಸಾರವಾಗುತ್ತದೆ ಎಂಬುದನ್ನು ಓಗಾಟಾ ಎಂಬವರು ಪತ್ತೆ ಮಾಡಿದರು. ಪ್ಲೇಗ್ ರೋಗಾಣುವಿನ ಹೆಸರು 'ಯೆರ್ಸಿನಾ ಪೆಸ್ಟಿಸ್' ಎಂದು. ಇದರ ಗಾತ್ರ ಬಹಳ ಚಿಕ್ಕದು. ಸೂಕ್ಷ್ಮದರ್ಶಕದಿಂದಲೇ ನೋಡಲು ಸಾಧ್ಯ. ರೋಗಾಣುಗಳು ಅಂಡಾಕಾರ ಹೊಂದಿವೆ. ವರ್ಣವಿತ್ತರೆ ಧ್ರುವಗಳು ಜಾಸ್ತಿ ವರ್ಣ ಹಿಡಿದುಕೊಳ್ಳುತ್ತವೆ. ಮಧ್ಯಭಾಗವು ಕಡಿಮೆ ವರ್ಣ ಹಿಡಿದುಕೊಳ್ಳುತ್ತದೆ. ಕಾರಣ ರೋಗಾಣುವು ನೋಡಲು ಸೇಫ್ಟಿಪಿನ್‌ದಂತೆ ಕಾಣುತ್ತದೆ. ಇದು ಸ್ವತಂತ್ರ ಚಲಿಸಲಾರದು. ದೇಹದ ಸುತ್ತಲೂ ಲೋಳೆಪರೆ ಇರುವುದು. ಹಲವಾರು ವಿಷಗಳನ್ನು ಸ್ರವಿಸುವದು. ಕೃತ್ರಿಮ ಆಹಾರ ಮಾಧ್ಯಮಗಳ ಮೇಲೆ ಬೆಳೆಯುವುದು.

ಪ್ಲೇಗ್ ರೋಗ ಹರಡುವ ಬಗೆ :

ಈಗಾಗಲೇ ತಿಳಿದಂತೆ ಮೂಲವಾಗಿ ಇದೊಂದು ಪ್ರಾಣಿಜನ್ಯ ರೋಗ. ಅಡವಿಯ ಇಲಿಗಳಲ್ಲಿ ಇದರ ಚಕ್ರ ಸದ್ದುಗದ್ದಲವಿಲ್ಲದೇ ನಡೆದಿರುತ್ತದೆ. ಅಡವಿಯ ಇಲಿಗಳಿಂದ ಊರಿನ ಇಲಿಗಳು ರೋಗ ಪಡೆಯುತ್ತವೆ. ಊರಿನ ಇಲಿಗಳಿಂದ ಮಾನವರು ರೋಗ ಪೀಡಿತರಾಗುವರು. ಸುಮಾರಾಗಿ ರೋಗ ಪ್ರಸಾರವಾಗಲು ಚಿಗಟಿ ಅಥವಾ ಚಿಕ್ಕಾಡು ಪ್ರಮುಖ ಪಾತ್ರ ವಹಿಸುತ್ತದೆ, ಚಿಗಟಿ ಕಚ್ಚುವಾಗ ತನ್ನ ಗಂಟಲಲ್ಲಿ ಶೇಖರಗೊಂಡ ರೋಗಾಣುಗಳನ್ನು ಹೊಸ ಪ್ರಾಣಿಗಳಲ್ಲಿ ಬಿಟ್ಟು ರೋಗ ಪ್ರಸಾರ ಮಾಡುವದು.

ಕ್ವಚಿತ್ತಾಗಿ ಚಿಗಟಿಯ ಮಲ ಅಥವಾ ಅದರ ಅನ್ನಮಾರ್ಗದಲ್ಲಿಯ ರೋಗಾಣುಗಳು ಚರ್ಮದ ಸಂಪರ್ಕದಲ್ಲಿ ಬಂದು ರೋಗ ಪ್ರಸಾರವಾಗಬಹುದು.

ರೋಗಾಣುಯುಕ್ತ ಧೂಳು, ಇಲ್ಲವೆ ರೋಗಿಯ ಪುಪ್ಪುಸದಿಂದ ಹೊರಬರಬಹುದಾದ ತುಂತುರಗಳ ಶ್ವಾಸದಲ್ಲಿ ಸೇರಿದರೆ ರೋಗಾಣುಗಳು ಪುಪ್ಪುಸ ಸೇರಿ ಪುಪ್ಪುಸ ಪ್ಲೇಗ್ ಬರುವದು.

ಪ್ಲೇಗ್ ರೋಗದಿಂದ ಸತ್ತ ಪ್ರಾಣಿಗಳನ್ನು ಛೇದಿಸುವಾಗ, ಪ್ಲೇಗ್ ರೋಗಾಣು

ಗಳನ್ನು ಬೆಳೆಸುವಾಗ ರೋಗ ಪ್ರಸಾರ ಆಗುವುದು.

ಪ್ಲೇಗ್ ರೋಗದಿಂದ ದೇಹದಲ್ಲಾಗುವ ಬದಲಾವಣೆಗಳು :

ಚಿಗಟೆಯಿಂದ ರೋಗ ಪ್ರಸಾರ : ಚಿಗಟೆ ಚರ್ಮದ ಮೇಲೆ ಕುಳಿತು ರಕ್ತ ಹೀರುವಾಗ ಗಂಟಲಲ್ಲಿಯ ರೋಗಾಣುಗಳನ್ನು ತನ್ನ ಸೂಜಿಯ ಮೂಲಕ ಚರ್ಮದ ತಳದಲ್ಲಿ ಸೇರಿಸುತ್ತದೆ. ರೋಗಾಣುಗಳು ದೇಹದಲ್ಲಿ ಬೆಳೆಯತೊಡಗುತ್ತವೆ. ಇಷ್ಟರಲ್ಲಿ ದೇಹದ ರಕ್ಷಣಾ ದಳದ ಪ್ರಥಮ ಸಿಪಾಯಿಗಳಂತೆ ಇರುವ ಶ್ವೇತಗೋಲಕಗಳು ಸ್ಥಳಕ್ಕೆ ಬಂದು ರೋಗಾಣುಗಳನ್ನು ನಾಶಪಡಿಸಲೆಂದು ನುಂಗುತ್ತವೆ. ರೋಗಾಣುಗಳು ಶ್ವೇತಗೋಲಕಗಳ ಹೊಟ್ಟೆಯಲ್ಲಿಯೇ ಬೆಳೆಯುತ್ತ ಗೋಲಕಗಳನ್ನು ಕೊಂದುಹಾಕುತ್ತವೆ. ಹೊರಬಿದ್ದ ರೋಗಾಣುಗಳು ಹೊಸ ಗೋಲಕಗಳನ್ನು ಹಿಡಿದು ಇಲ್ಲವೆ ತೇಲುತ್ತ ದುಗ್ಧರಸವಾಹಿನಿಗಳ ಮಾರ್ಗವಾಗಿ ಸ್ಥಾನಿಕ ದುಗ್ಧರಸ ಗ್ರಂಥಿಗಳನ್ನು ತಲುಪುವುವು. ಅಲ್ಲಿಯೂ ಇದೇ ಕಾರ್ಯ ನಡೆಯುತ್ತದೆ. ಇಷ್ಟರಲ್ಲಿ ರೋಗಾಣುಗಳ ಸಂಖ್ಯೆ ವೃದ್ಧಿಗೊಂಡಿರುತ್ತದೆ. ಅವುಗಳ ವಿಷಸ್ರವಿಕೆಗಳೂ ಹೆಚ್ಚಾಗುತ್ತವೆ. ದುಗ್ಧರಸ ಗ್ರಂಥಿಗಳು ಊದಿಕೊಳ್ಳುತ್ತವೆ. ಊದಿಕೊಂಡ ಗ್ರಂಥಿಗಳು ಪ್ಲೇಗ್ ರೋಗದ ಗಂಟುಗಳೆಂದು ಹೆಸರಾಗಿವೆ. ಗ್ರಂಥಿಗಳಲ್ಲಿ ರೋಗಾಣುಗಳಿಗೂ ರಕ್ಷಕ ಜೀವಕಣಗಳಿಗೂ ಉಗ್ರ ಹೋರಾಟ ನಡೆದಿರುತ್ತದೆ. ಹೋರಾಟದಲ್ಲಿ ಅಸಂಖ್ಯ ಜೀವಕಣಗಳು ಸಾಯುತ್ತವೆ. ಮೃತ-ಜೀವಕಣಗಳ ಹಾಗೂ ಅಸಂಖ್ಯ ರೋಗಾಣುಗಳನ್ನು ಹೊಂದಿದ ದ್ರವವೇ ಕೀವು. ದುಗ್ಧರಸ ಗ್ರಂಥಿಗಳು ಬರಬರುತ್ತ ಕೀವಿನ ಚೀಲಗಳಾಗುತ್ತವೆ. ಇವುಗಳನ್ನೇ 'ಬ್ಯೂಬೋ' (Bubo) ಎಂದು ಕರೆಯುತ್ತಾರೆ.

ದುಗ್ಧರಸ ಗ್ರಂಥಿಗಳನ್ನು ದಾಟಿ ರೋಗಾಣುಗಳು ರಕ್ತದ ಮೂಲಕ ಯಾವ ಅಂಗಾಂಶವನ್ನೂ ತಲುಪಬಹುದು. ಆಯಾ ಅಂಗಾಂಶದಲ್ಲಿ ಕೀವು ಗಂಟುಗಳು ಹುಟ್ಟುತ್ತವೆ. ಸಾಮಾನ್ಯವಾಗಿ ಬ್ಯುಬೋನಿಕ್ ಪ್ಲೇಗ್‌ದಲ್ಲಿ ರೋಗ ಸ್ಥಾನಿಕ ದುಗ್ಧರಸ ಗ್ರಂಥಿಗಳಿಗೆ ಸೀಮಿತವಾಗಿರುತ್ತದೆ. ಇದೇ ಬ್ಯುಬೋನಿಕ್ ಪ್ಲೇಗ್.

ಒಂದು ಪಕ್ಷ ರೋಗಾಣುಗಳು ದುಗ್ಧರಸ ಗ್ರಂಥಿಗಳನ್ನು ದಾಟಿದರೆ ಕೀವುಗಂಟುಗಳು ಮೆದುಳಿನಲ್ಲಿ, ಪುಪ್ಪುಸದಲ್ಲಿ, ಯಕೃತ್, ಪ್ಲೀಹ ಮೂತ್ರಪಿಂಡಾದಿಗಳಲ್ಲಿ ಕಾಣುತ್ತವೆ. ರೋಗಿ ಮರಣ ಹೊಂದುತ್ತಾನೆ.

ಕೆಲವೊಂದು ಸಲ ರೋಗಾಣುಗಳು ದೇಹದ ರಕ್ತವಾಹಿನಿಗಳ ಭಿತ್ತಿಗಳನ್ನು ನಾಶಪಡಿಸುವುವು. ಇದರಿಂದ ರಕ್ತವು ಚರ್ಮದಲ್ಲಿ, ಅನ್ನಮಾರ್ಗದಲ್ಲಿ, ಮೂತ್ರ ಮಾರ್ಗದಲ್ಲಿ, ಪುಪ್ಪುಸದಲ್ಲಿ, ಮಿದುಳಿನಲ್ಲಿ, ಕಣ್ಣಿನಲ್ಲಿ ಸೋರುವುದು. ಸೋರಿದ ರಕ್ತ ಕಪ್ಪುವರ್ಣಕ್ಕೆ ತಿರುಗುವುದು. ಕೈಕಾಲುಗಳು ಕಪ್ಪಾಗಿ ಕೊಳೆಯುವುವು. ಈ ಕಾರಣದಿಂದಲೇ ಇಂಥ ಪ್ಲೇಗನ್ನು ಯುರೋಪಿಯನ್ನರು 'ಕರಾಳ ಮೃತ್ಯು' ಎಂದು ವರ್ಣಿಸಿದರು.

ಒಂದು ವೇಳೆ ರೋಗಾಣುಗಳು ದೇಹವನ್ನು ಶ್ವಾಸದ ಮೂಲಕ ಸೇರಿದ್ದರೆ ಮೇಲೆ ಹೇಳಿದ ಬದಲಾವಣೆಗಳು ಪುಪ್ಪುಸದಲ್ಲಿ

ಇನ್ನೂ ಉಗ್ರವಾಗಿ ಪುಪ್ಪುಸದುರಿಯೂತಣೆ ಆಗುವುದು. ಅಲ್ಲಿಯೂ ಕೀವು ಗಂಟುಗಳು ತೋರುವುವು. ರೋಗಾಣುಗಳು ಬಹು ತ್ವರಿತವಾಗಿ ದೇಹದಲ್ಲೆಲ್ಲ ಪ್ರಸಾರ ಹೊಂದುವುವು. (ನ್ಯುಮೋನಿಕ್ ಪ್ಲೇಗ್)

ಪ್ರಾರಂಭದಲ್ಲಿಯೇ ರೋಗಾಣುಗಳು ರಕ್ತದಲ್ಲಿ ಹಾವಳಿ ಎಬ್ಬಿಸಿದರೆ ರೋಗವು ಅತಿ ಉಗ್ರವಾಗಿ ಬೆಳೆದು ಮರಣವು ಬಹು ಬೇಗ ಬರುವುದು.(ಸೆಪ್ಟಿಸೇಮಿಕ್ ಪ್ಲೇಗ್).

ಕೀವು ಗಂಟುಗಳು ಒಂದರಲ್ಲಿ ಮತ್ತೊಂದು ಸೇರಿ ದೊಡ್ಡವಾಗುತ್ತವೆ. ಚರ್ಮದಲ್ಲಿ ರಂಧ್ರ ಕೊರೆದು ಸೋರುತ್ತವೆ. ಕೊನೆಗೆ ದೇಹವೇ ಕೀವಿನ ಚೀಲವಾಗುತ್ತದೆ.

ರೋಗ ಲಕ್ಷಣಗಳು :

ದೇಹದಲ್ಲಿ ಹುಟ್ಟುತ್ತಿರುವ ಕೀವು ಹಾಗು ರೋಗಾಣುವಿನ ವಿಷ ಸ್ರವಿಕೆಗಳು ರೋಗ ಲಕ್ಷಣಗಳಿಗೆ ಕಾರಣ.

ರೋಗಿಗೆ ಒಮ್ಮಿಂದೊಮ್ಮೆಲೇ ಜ್ವರ ಕಾಣಿಸುವುದು. ಜ್ವರವು ಬಹಳ ಹೆಚ್ಚಾಗಿರುತ್ತದೆ. ರೋಗಿಗೆ ಚಳಿ ನಡುಕ ಬರಬಹುದು. ವಿಪರೀತ ಸಿಡಿಯುವ ತಲೆನೋವು ಕಾಣುವದು. ಗಂಟುಗಳು ಕಂಡಾಗ ಅವುಗಳಲ್ಲಿ ತಾಳಲಾರದ ನೋವು ಮೂಡುವುದು. ಗಂಟುಗಳು ಒಂದಕ್ಕೊಂದು ಅಂಟಿಕೊಳ್ಳುವುವು. ಗಂಟುಗಳ ಮೇಲಿನ ತ್ವಚೆಯೂ ಕೆಂಪಗಾಗಿ ಊದು ಕಾಣುವುದು. ದೇಹದಲ್ಲಿ ಅಶಕ್ತತೆ ತೀವ್ರವಾಗುವದು. ಕಣ್ಣುಗಳು ಕೆಂಪಗಾಗಿ ವಿಷಣ್ಣತೆಯಿಂದ ಕಳೆಗುಂದುವುವು. ಮೆದುಳಿನಲ್ಲಿಯು ಬದಲಾವಣೆಗಳಿಂದ ರೋಗಿಗೆ ಮಂಪರು ಬರಬಹುದು. ಮತಿ ಭ್ರಮಣೆ ಆಗಬಹುದು. ತೊಂದರೆಯಿಂದ ರೋಗಿ ಕಿರುಚಾಡಬಹುದು. ಭ್ರಮೆಯಿಂದ ಅಸಂಗತ ಮಾತನಾಡಬಹುದು. ಅಶಕ್ತತೆಯಿಂದ ರೋಗಿ ಹಾಸಿಗೆ ಹಿಡಿಯುವನು. ರಕ್ತವಾಹಿನಿಗಳಲ್ಲಿಯ ಬದಲಾವಣೆಗಳಿಂದ ಚರ್ಮದಲ್ಲಿ, ಲೋಳ್ಪರೆಗಳಲ್ಲಿ ರಕ್ತಸ್ರಾವ ಕಾಣುವುದು. ರಕ್ತಸ್ರಾವ ಕರುಳಿನಲ್ಲಿ, ಮೂತ್ರ ಮಾರ್ಗದಲ್ಲಿ, ಶ್ವಾಸಮಂಡಲದಲ್ಲಿ ಕಾಣುವುದು.

ಪುಪ್ಪುಸದಲ್ಲಿಯ ಬದಲಾವಣೆಗಳಿಂದ ಕೆಮ್ಮು, ಎದೆನೋವು, ರಕ್ತಮಿಶ್ರಿತ ಕಫ ಉಗುಳು ಕಾಣಬಹುದು.

ಹಲವಾರುಸಲ ರಕ್ತಸ್ರಾವದಿಂದ ರೋಗಿಯು ರಕ್ತವಾಂತಿಯಿಂದ ಬಳಲಬಹುದು. ಭೇದಿಯ ತೊಂದರೆ ಕಾಣಬಹುದು.

ಪ್ಲೇಗ್ ರೋಗದಲ್ಲಿ ಗಂಟುಗಳು ತೊಡೆಯ ಸಂದು, ಕಂಕುಳ, ಕುತ್ತಿಗೆಯ ಬದಿಯಲ್ಲಿ ಮೂಡಬಹುದು. ಗಂಟುಗಳು ಕೇವಲ ಒಂದು ಸೆಂಟಿಮೀಟರಿನಿಂದ ಹತ್ತು ಸೆಂಟಿಮೀಟರಿನಷ್ಟು ದೊಡ್ಡವಾಗಬಹುದು.

ಸರಿಯಾದ ಔಷಧ ಉಪಚಾರವಾಗದೇ ಹೋದರೆ ರೋಗಿ ಮರಣವನ್ನು ಅಪ್ಪುವದು ಖಂಡಿತ.

ರೋಗ ನಿದಾನ :

ರೋಗವು ಸ್ಥಾನಿಕವಾಗಿರುವ ಪ್ರದೇಶಗಳಲ್ಲಿ ಕಾರ್ಯ ಮಾಡುತ್ತಿರುವ ವೈದ್ಯರು ರೋಗದ ಬಗ್ಗೆ ಮೇಲಿಂದ ಮೇಲೆ ಎಚ್ಚರಿಕೆಗಳನ್ನು ಕೊಡುತ್ತಿರಬೇಕು. ಸ್ವಲ್ಪ ಸಂಶಯ ಬಂದರೂ ಅವರು ಪ್ಲೇಗ್ ರೋಗದ ಬಗ್ಗೆ ತಪಾಸಣೆ ನಡೆಸಬೇಕು.

ಪ್ರಯೋಗಾಲಯ ಪರೀಕ್ಷೆಗಳಲ್ಲಿ ಎರಡು ವಿಧಾನಗಳಿವೆ. ಒಂದು ರೋಗಾಣುವನ್ನು

ಪತ್ತೆ ಹಚ್ಚುವದು. ಎರಡನೆಯದು ರಕ್ತದಲ್ಲಿದ್ದ ಪ್ಲೇಗ್ ಪ್ರತಿರೋಧಕಾಯ ಅಂದರೆ ಆಂಟಿಬಾಡಿಗಳನ್ನು ಗುರುತಿಸುವುದು.

ರೋಗಾಣುವನ್ನು ಪತ್ತೆ ಹಚ್ಚಲು ರೋಗಿಯ ರಕ್ತ, ಪ್ಲೇಗ್ ಗಂಟುಗಳಲ್ಲಿಯ ಕೀವು, ಕಫಗಳನ್ನು ಬಳಸಬೇಕಾಗುವುದು. ಕೃತ್ರಿಮ ಆಹಾರ ಮಾಧ್ಯಮಗಳನ್ನು ಬಳಸಿ ರೋಗಾಣು ಬೆಳೆಸಿ ರೋಗ ನಿದಾನಿಸುವರು. ಕೆಲವೊಮ್ಮೆ ಪ್ರಯೋಗಕ್ಕೆ ಪ್ರಾಣಿಗಳನ್ನು ಉಪಯೋಗಿಸಿ ನಿದಾನಿಸುವರು. ರಕ್ತದಲ್ಲಿಯ ಪ್ರತಿರೋಧಕಾಯಗಳನ್ನು ಪತ್ತೆ ಹಚ್ಚಲು ರೋಗಿಯ ರಕ್ತವನ್ನು ಉಪಯೋಗಿಸುವರು.

ಮರಣ ಹೊಂದಿದ ಇಲಿಗಳ ಬಗ್ಗೆ ಎಚ್ಚರ :

೧. ಪ್ಲೇಗ್ ರೋಗದಿಂದ ಇಲಿಗಳು ಸಾಯುತ್ತಿದ್ದರೆ ಒಂದೊಂದೇ ಸಾಯದೇ ಹಲವಾರು ಸಾಯುತ್ತವೆ.

೨. ಇಲಿಗಳು ಮರಣ ಹೊಂದುವುದಕ್ಕಿಂತ ಮೊದಲೇ ಕಣ್ಣಿಗೆ ಬಿದ್ದರೆ ಅವುಗಳ ಕೂದಲು ನಿಮಿರಿ ನಿಂತಿರುತ್ತವೆ. ಇಲಿಗಳು ನಡಗುತ್ತಿರುತ್ತವೆ. ಅವುಗಳು ನೋವಿನಿಂದ ಬಳಲಿ ಚಲಿಸಲು ತೊಂದರೆ ಆಗಿ ಕುಂಟುತ್ತವೆ.

೩. ಇಲಿ ಸತ್ತಿದ್ದರೆ ಕೂದಲು ಕಡಿಮೆ ಆಗಿರುತ್ತವೆ. ಕುತ್ತಿಗೆ ಹಾಗೂ ತೊಡೆಯ ಸಂದುಗಳಲ್ಲಿ ಗಂಟು ಆಗಿರುತ್ತವೆ. ಇಲಿ ಸೊರಗಿರುತ್ತದೆ.

೪. ಸತ್ತ ಇಲಿಯನ್ನು ಹಿಡಿಯುವಾಗ ಅದರ ಮೇಲೆ ಕಲ್ಲೆಣ್ಣೆ, ಫಿನಾಯಿಲ್‌ಗಳನ್ನು ಸುರಿದು ಚಿಮ್ಮಟಿಗೆಯಿಂದ ಹಿಡಿಯಬೇಕು. ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಸಂಬಂಧಿಸಿದ ಅಧಿಕಾರಿಗಳ ಕಡೆಗೆ ಬೇಗನೆ ರವಾನಿಸಬೇಕು.

ಪ್ರತಿಬಂಧಕೋಪಾಯಗಳು :

೧. ಸಂಶಯಿತ ರೋಗಿಗಳ ಬಗ್ಗೆ ತಕ್ಷಣ ಅಧಿಕಾರಿಗಳಿಗೆ ತಿಳಿಸಬೇಕು.

೨. ರೋಗಿಗಳನ್ನು ಪ್ರತ್ಯೇಕ ಕೊಠಡಿಯಲ್ಲಿ ಇಡಬೇಕು.

೩. ನ್ಯೂಮೋನಿಯಾ ಪ್ಲೇಗದ ರೋಗಿಗಳನ್ನು ಇನ್ನೂ ಪ್ರತ್ಯೇಕ ಕೊಠಡಿಗಳಲ್ಲಿಡಬೇಕು. ಅವರಿಗೆ ತಕ್ಷಣ ಔಷಧ ಉಪಚಾರ ಮಾಡಿಸಬೇಕು.

೪. ಪಿಡುಗು ಪೀಡಿತ ಪ್ರದೇಶದಲ್ಲಿಯ ಜನರು ತಮ್ಮನ್ನು ಚಿಗಟಿಗಳಿಂದ, ಇಲಿಗಳಿಂದ ರಕ್ಷಿಸಿಕೊಳ್ಳಬೇಕು.

೫. ಚಿಗಟಿಗಳನ್ನು ನಾಶಪಡಿಸಲು ಎಲ್ಲ ಕೀಟನಾಶಕಗಳನ್ನು ಉಪಯೋಗಿಸಬೇಕು.

೬. ರೋಗ ನಿರೋಧಕ ಲಸಿಕೆಯಿಂದ ಉಪಚಾರ ಪಡೆಯಬೇಕು.

೭. ರೋಗಿಗಳ ಸಂಪರ್ಕದಲ್ಲಿರುವವರು ರೋಗ ಪ್ರತಿಬಂಧಕ ಔಷಧಿಗಳನ್ನು ಬಳಸಬೇಕು. ಅವರು ವೈದ್ಯರ ಸಲಹೆ ಪಡೆದು ಮದ್ದು ಸೇವಿಸಬೇಕು.

ಇರುಳ ಬಾನು ಕಪ್ಪು ಏಕೆ?

ಜಿ. ಟಿ. ನಾರಾಯಣರಾವ್

ರಾತ್ರಿ ಆಕಾಶ ಬೆಳ್ಳಗಿಲ್ಲ. ಕಪ್ಪಗಿದೆ. ಇದೇಕೆ ಹೀಗೆ?

ಎಂಥ ಮೂರ್ಖ ಪ್ರಶ್ನೆ! ಸೂರ್ಯನ ಗೈರುಹಾಜರಿಯಲ್ಲಿ ಆಕಾಶ ಇನ್ನು ಹೇಗೆ ತಾನೇ ಕಾಣಬೇಕು ಎಂದು ನೀವು ಕೆಲೆಯುತ್ತಿರುವುದು ನನಗೆ ಕೇಳಿಸುತ್ತದೆ. ನಮ್ಮ ಸಾಮಾನ್ಯ ಜ್ಞಾನ (= ಪೂರ್ವಾಗ್ರಹಗಳ ಮತ್ತು ಕುರುಡುನಂಬಿಕೆಗಳ ಮೊತ್ತ?) ನಮ್ಮನ್ನು ಸ್ವರಕ್ಷಣೆಯ ಸುಲಭ ಮಾರ್ಗದತ್ತ ಒಯ್ಯುವುದೇ ವಾಡಿಕೆ. ಅಂದರೆ ಒಂದು ಪ್ರಶ್ನೆಗೆ ಥಟ್ಟನೆ ಒಂದು ಉತ್ತರ!

ಹೀಗಲ್ಲದೇ ಒಬ್ಬ ಖಗೋಳವಿಜ್ಞಾನಿಯಲ್ಲಿ ಈ ಪ್ರಶ್ನೆ ಎದ್ದುದಾದರೆ ಆತ ಇದಕ್ಕೆ ಸಂಬಂಧಿಸಿದ ಸಮಸ್ತ ವಿವರಗಳನ್ನೂ ವೈಜ್ಞಾನಿಕವಾಗಿ ಪರಾಂಬರಿಸಿ ಯುಕ್ತ ಪರಿಹಾರ ಅರಸಲು ಮುಂದಾಗುತ್ತಾನೆ.

ಇಂಥ ಒಂದು ಹಾದಿಯಲ್ಲಿ ಮೊದಲು ನಡೆದಾತ ಜರ್ಮನಿಯ ಹೈನ್ರಿಚ್ ವಿಲ್‌ಹೆಲ್ಮ್ ಮಥೌಸ್ ಆಲ್ಬರ್ಸ್ (೧೭೫೮–೧೮೪೦). ವೃತ್ತಿಯಿಂದ ಈತ ವೈದ್ಯ. ಪ್ರವೃತ್ತಿಯಿಂದ ಖಗೋಳ ವಿಜ್ಞಾನಿ. ಮನೆ ಮಾಳಿಗೆಯೇ ವೇಧಶಾಲೆ. ಧೂಮಕೇತು ಅನ್ವೇಷಣೆ ಮತ್ತು ಅಧ್ಯಯನ ಪ್ರಥಮಾಸಕ್ತಿ.

ಪ್ರತಿರಾತ್ರಿಯೂ ಆಲ್ಬರ್ಸ್ ಆಕಾಶವನ್ನು ಜರಡಿ ಆಡುತ್ತಿದ್ದ—ಧೂಮಕೇತುಗಳನ್ನು ಹಿಡಿಯಲು. ಗಗನದ ಅಪಾರ ವಿಸ್ತಾರದಲ್ಲಿ ಅವು ತೀರ ವಿರಳ ಮತ್ತು ಆಕಸ್ಮಿಕ ಘಟನೆಗಳು, ಪೂರ್ವಭಾವಿ ಸೂಚನೆ ನೀಡದೇ ಎಲ್ಲೆಂದರಲ್ಲಿ ಎಂದೆಂದರಂದು ಮೈದೋರುವ ವಿಸ್ಮಯಗಳು.

ಈ ನಿರಂತರ ಅನ್ವೇಷಣೆಯ ವೇಳೆ ಅವನಲ್ಲಿ ಅನುರಣಿಸಿದ ಪ್ರಶ್ನೆ ಇದೇ: ಇರುಳ ಬಾನು ಕಪ್ಪು ಏಕೆ? ಹಗಲು ಅದು ತೊಟ್ಟಿದ್ದ ಬಿಳಿ ಗವಸು ಕರಗಿಹೋಗುವುದು ಏಕೆ?

ಇದಕ್ಕೆ ಉತ್ತರ ಪಡೆಯಲು ಆಲ್ಬರ್ಸ್ ಹಿಡಿದ ಹಾದಿ ಏನೆಂದು ತಿಳಿಯುವ ಮೊದಲು ಅಂದು (೧೮–೧೯ ಶತಮಾನ) ವಿಶ್ವ ಕುರಿತಂತೆ ಖಗೋಳ ವಿಜ್ಞಾನ ಮಂಡಿಸಿದ್ದ ಸಿದ್ಧಾಂತ ಏನೆಂದು ಅರಿಯುವುದು ಅವಶ್ಯ. ಏಕೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ಸಮಕಾಲೀನ ಜ್ಞಾನವಿಜ್ಞಾನಗಳ ಶಿಶು, ಪ್ರವಾದಿ ಪುರುಷೋತ್ತಮರಿಗೂ ಸಂತ ಶಿರೋಮಣಿಗಳಿಗೂ ಇಲ್ಲಿ ವಿನಾಯತಿ ಇಲ್ಲ ಎಂಬುವನ್ನು ಮರೆಯಬಾರದು.

ಚಂದ್ರನಿಲ್ಲದ ಮತ್ತು ಮೋಡ ಮುಸುಕಿರದ ರಾತ್ರಿ ಆಕಾಶವನ್ನು ದಿಟ್ಟಿಸಿದರೆ

ಅಲ್ಲಿಯು ಹಲವಾರು ಬಿಡಿ ನಕ್ಷತ್ರಗಳಿಗೆ ಹಿನ್ನೆಲೆಯಾಗಿ ಬೆಳಕಿನ ತೆಳುಲೇಪ ಉತ್ತರ-ದಕ್ಷಿಣ ದಿಶೆಯಲ್ಲಿ ಪಸರಿಸಿರುವುದು ಕಾಣುತ್ತದೆ. ಗೆಲಿಲಿಯೋ (೧೫೬೪-೧೬೪೨) ೧೬೧೦ ರಲ್ಲಿ ಮೊತ್ತಮೊದಲಿಗೆ ಇದರತ್ತ ದೂರದರ್ಶಕ ದೃಷ್ಟಿ ಹಾಯಿಸಿದಾಗ "ಇದು ಅದ್ಭುತ! ಇದು ರಮ್ಯ!" ಎಂದು ಕುಣಿದಾಡಿದ. ಅಸಂಖ್ಯ ನಕ್ಷತ್ರಗಳ ಅಪಾರ ಸಮುದಾಯವಿದು. ಈ ನಕ್ಷತ್ರಗಳು ನಮ್ಮಿಂದ ಊಹಾತೀತ ದೂರಗಳಲ್ಲಿರುವುದರಿಂದ ಬಿಡಿಬಿಡಿಯಾಗಿ ಪ್ರಕಟವಾಗದೇ ಸಾಮೂಹಿಕ ಕ್ಷೀಣಕಾಂತಿಹೊಮ್ಮಿಸುತ್ತಿರುವಂತೆ ನಮಗೆ ಭಾಸವಾಗುತ್ತದೆ, ಅಷ್ಟೆ.

ಇದು ಆಕಾಶಗಂಗೆ. ಇದೇ ವಿಶ್ವ. ಇದು ಅನಾದಿ ಮತ್ತು ಅನಂತ. ಇದರ ವ್ಯಾಪ್ತಿಯೂ ಅನಂತವೇ. ನಮ್ಮ ಖಾಸಾ ತಾರೆಯಾದ ಸೂರ್ಯ ಇದರ ಕೇಂದ್ರದಲ್ಲಿ ನೆಲಸಿದೆ. ಅಂದ ಮೇಲೆ ನಮ್ಮ ಸ್ಥಾನವೂ ಆಕಾಶಗಂಗೆಯ ಕೇಂದ್ರದಲ್ಲಿದೆ ಎಂದಾಯಿತು. ಅಂದು ಆಕಾಶ, ವಿಶ್ವ, ಆಕಾಶಗಂಗೆ ಎಲ್ಲವೂ ಪರ್ಯಾಯ ಪದಗಳು. (ಇಂದು ತಿಳಿದಿದೆ: ಆಕಾಶಗಂಗೆ ಸುಮಾರು ೪೦೦,೦೦೦,೦೦೦,೦೦೦ ನಕ್ಷತ್ರಗಳ ಜೇನುಗೂಡು; ಇಂಥ ಅಸಂಖ್ಯ ಆಕಾಶಗಂಗೆಗಳ ಸಮುದಾಯವೇ ವಿಶ್ವ.)

ಈ 'ಸೀಮಿತ ವಿಶ್ವ' ಎಂಬ ನಂಬಿಕೆಯ ಕೂಸಾದ ಆಲ್ಬರ್ಸ್, ನಕ್ಷತ್ರಲೋಕ ಕುರಿತಂತೆ ಅಂದು ತಿಳಿದಿದ್ದ ಮಾಹಿತಿಗಳನ್ನು ಒಂದು ಸಂಗತ ಸಿದ್ಧಾಂತವಾಗಿ ಹೆಣೆಯಲು ಈ ಕೆಳಗಿನ ಮೂಲ ಭಾವನೆಗಳು ನಿಜವೆಂದು ಅಂಗೀಕರಿಸಿದ (ಆಲ್ಬರ್ಸ್ ಸಿದ್ಧಾಂತದ ಪೂರ್ವಪಕ್ಷವಿದು):

೧ ವಿಶ್ವದ (= ಆಕಾಶಗಂಗೆಯ) ವ್ಯಾಪ್ತಿ ಅನಂತ. ಅದಕ್ಕೆ ಮೇರೆಯೇ ಇಲ್ಲ. ಭೂಮಿಯಲ್ಲಿ ಸಲ್ಲುವ ಯೂಕ್ಲಿಡ್ ಜ್ಯಾಮಿತಿ ವಿಶ್ವದಲ್ಲಿಯೂ ಸಲ್ಲುತ್ತದೆ.

೨ ಸರಾಸರಿಯಾಗಿ ಹೇಳುವುದಾದರೆ ವಿಶ್ವದಲ್ಲಿ ನಕ್ಷತ್ರಗಳ ವಿತರಣೆ ಏಕರೀತಿಯಲ್ಲಿದೆ.

೩ ಪ್ರತಿಯೊಂದು ನಕ್ಷತ್ರದಿಂದಲೂ, ಸರಾಸರಿಯಲ್ಲಿ, ಒಂದೇ ಪ್ರಮಾಣದ ಬೆಳಕು ಹೊಮ್ಮುತ್ತದೆ.

೪ ವಿಶ್ವದ ವಯಸ್ಸು ಅನಂತ. ಇದು ಅನಾದಿ ಕೂಡ.

೫ ನಕ್ಷತ್ರಗಳಿಗೂ ನಮಗೂ ನಡುವೆ ಬೆಳಕನ್ನು ಹೀರುವ ಅಥವಾ ತಡೆಗಟ್ಟುವ ಯಾವುದೇ ಅಡಚಣೆ ಅಥವಾ ಪ್ರತಿಬಂಧಕ ಇಲ್ಲ. ಆದ್ದರಿಂದ ಒಂದು ನಕ್ಷತ್ರ ಎಷ್ಟೇ ದೂರದಲ್ಲಿರಲಿ ಅದರಿಂದ ಹೊರಟ ಬೆಳಕು ನೇರವಾಗಿ ನಮ್ಮನ್ನು ತಲಪುತ್ತದೆ.

ಈ ಮೂಲ ಭಾವನೆಗಳು ಅಸಾಧಾರಣವಾದವಲ್ಲ. ಅಪ್ರಾಯೋಗಿಕವಾದವೂ ಅಲ್ಲ. ಅಂದು ಲಭ್ಯವಿದ್ದ ಸಾಕ್ಷ್ಯಾಧಾರಗಳಿಗೆ ಮತ್ತು ಚಲಾವಣೆಯಲ್ಲಿದ್ದ ಸಿದ್ಧಾಂತಗಳಿಗೆ ಇವು ನಿರ್ದಿಷ್ಟ ತಾತ್ತ್ವಿಕ ನೆಲಗಟ್ಟು ಒದಗಿಸಿದುವು. ಇದರ ಮೇಲೆ ಆಲ್ಬರ್ಸ್ ಕಟ್ಟಿದ ತಾರ್ಕಿಕ ಸೌಧದ ಲಕ್ಷಣಗಳನ್ನು ನೋಡೋಣ.

ವಾದದ ಸಲುವಾಗಿ ಆತ ವಿಶ್ವವೆಂದರೆ ನಮ್ಮ ಸುತ್ತ ಅಖಂಡವಾಗಿ ಹೆಣೆದುಕೊಂಡಿರುವ ಗೋಳ ಚಿಪ್ಪುಗಳ ಒಕ್ಕೂಟವೆಂದು ಪರಿಗಣಿಸಿದ. ಬಲಿತ ಕ್ಯಾಬೇಜ್ ಗೆಡ್ಡೆಯ ಚಿತ್ರ ಕಲ್ಪಿಸಿಕೊಳ್ಳೋಣ. ಇದರ ತಿರುಳು

ನಮ್ಮ ನೆಲೆ. ಇದನ್ನು ಸುತ್ತುವರಿದಿರುವ ಒಂದೊಂದು ಎಸಳು ಒಂದೊಂದು ಚಿಪ್ಪು. ಇವೆಲ್ಲವುಗಳ ಒಕ್ಕೂಟವೇ ಕ್ಯಾಬೇಜ್— ಹೇಗೋ ಹಾಗೆ ವಿಶ್ವ.

ನಕ್ಷತ್ರಗಳು ಈ ಚಿಪ್ಪುಗಳಲ್ಲಿ ನೆಲಸಿವೆ. ಯಾವುದೇ ಚಿಪ್ಪಿನ ಗಾತ್ರ ಕೇಂದ್ರದಿಂದ ಅದರ ದೂರದ (ಅಂದರೆ ಆ ಚಿಪ್ಪಿನ ತ್ರಿಜ್ಯದ) ವರ್ಗಕ್ಕೆ ಅನುಲೋಮಾನುಪಾತದಲ್ಲಿದೆ ಎಂದು ಯೂಕ್ಲಿಡ್ ಜ್ಯಾಮಿತಿಯಿಂದ ತಿಳಿಯುತ್ತದೆ. ಉದಾಹರಣೆಗೆ, ಇಂಥ ಐದು ಚಿಪ್ಪುಗಳು ನಮ್ಮಿಂದ ೧, ೨, ೩, ೪, ೫ ದೂರಗಳಲ್ಲಿದ್ದರೆ ಇವುಗಳ ಗಾತ್ರಗಳು ಅನುಕ್ರಮವಾಗಿ ೧, ೪, ೯, ೧೬, ೨೫ ಅನುಪಾತದಲ್ಲಿರುತ್ತವೆ.

ಆಕಾಶದ ಗಾತ್ರ ಅನಂತ, ನಕ್ಷತ್ರಗಳ ಸಂಖ್ಯೆ ಅನಂತ ಮತ್ತು ಇವುಗಳ ವಿತರಣೆ ಏಕರೀತಿಯಲ್ಲಿದೆ ಎಂದು ಅಂಗೀಕರಿಸಿರುವುದರಿಂದ ಈ ಸಂಖ್ಯೆ ಕೂಡ ಇದೇ ತ್ರಿಜ್ಯ ವರ್ಗಾನುಪಾತದಲ್ಲಿ ವರ್ಧಿಸಬೇಕು. ಉದಾಹರಣೆಗೆ, ತ್ರಿಜ್ಯ ೧ರ ಚಿಪ್ಪಿನಲ್ಲಿ ೧ ನಕ್ಷತ್ರ ಇದೆಯೆಂದು ಭಾವಿಸಿದರೆ ಆಗ ತ್ರಿಜ್ಯ ೨ರ ಚಿಪ್ಪಿನಲ್ಲಿ ೪, ತ್ರಿಜ್ಯ ೩ರ ಚಿಪ್ಪಿನಲ್ಲಿ ೯, ತ್ರಿಜ್ಯ ೪ರ ಚಿಪ್ಪಿನಲ್ಲಿ ೧೬, ತ್ರಿಜ್ಯ ೫ರ ಚಿಪ್ಪಿನಲ್ಲಿ ೨೫ ಇತ್ಯಾದಿಯಾಗಿ ನಕ್ಷತ್ರಗಳು ವಿತರಣೆಗೊಂಡಿರುತ್ತವೆ. ಹೀಗೆ ನಮ್ಮಿಂದ ದೂರ ದೂರ ಹೋದಂತೆ ನಕ್ಷತ್ರ ಸಂಖ್ಯೆ ನಿರ್ದಿಷ್ಟ ಗಣಿತ ಸೂತ್ರಾನುಸಾರ ವರ್ಧಿಸುತ್ತದೆ.

ಈ ನಕ್ಷತ್ರಗಳಿಂದ ನಮಗೆ ಲಭಿಸುವ ಬೆಳಕಿನ ಮೊತ್ತ ಎಷ್ಟಿರಬಹುದು? ಆಕರ ನಮ್ಮಿಂದ ದೂರ ದೂರವಾದಂತೆ ಈ ಮೊತ್ತ ಕಡಿಮೆ ಕಡಿಮೆ ಆಗುವುದೆಂದು ಅನುಭವದಿಂದ ಅರಿತಿದ್ದೇವೆ. ವಾಸ್ತವವಾಗಿ, ಆಕರದಿಂದ ವೀಕ್ಷಕನನ್ನು ತಲಪುವ ಬೆಳಕಿನ ಪ್ರಮಾಣ ಆಕರ- ವೀಕ್ಷಕ ಅಂತರದ ವಿಲೋಮವರ್ಗಾನುಪಾತದಲ್ಲಿದೆ ಎಂದು ನ್ಯೂಟನ್‌ಪ್ರಣೀತ ಭೌತವಿಜ್ಞಾನ ತಿಳಿಸುತ್ತದೆ.

ಅಂದರೆ ನಮ್ಮಿಂದ ನಕ್ಷತ್ರ ದೂರ ೧, ೨, ೩, ೪, ೫ ಇತ್ಯಾದಿಯಾಗಿ ಏರಿದಂತೆ ಆಯಾ ಚಿಪ್ಪಿನಲ್ಲಿಯ ಪ್ರತಿಯೊಂದು ನಕ್ಷತ್ರದಿಂದಲೂ ನಮಗೆ ಬರುವ ಬೆಳಕಿನ ಮೊತ್ತ ೧, ೧/೪, ೧/೯, ೧/೧೬, ೧/೨೫ ಇತ್ಯಾದಿ ಅನುಪಾತದಲ್ಲಿ ಇಳಿಯುವುದೆಂದಾಯಿತು.

ಹೀಗೆ ತರ್ಕಿಸಿದ ಅಲ್ಬರ್ಸನ ಎದುರು ಅನಾವರಣಗೊಂಡ ಗಣಿತ ಚಿತ್ರ ಅಥವಾ ಪ್ರತಿರೂಪ ಅಸಾಧಾರಣವಾಗಿತ್ತು :

ನಮ್ಮಿಂದ ದೂರ ದೂರ ಸರಿದಂತೆ ನಕ್ಷತ್ರ ಸಂಖ್ಯೆ ಏರುವ ದರವೂ, ಅದೇ ವೇಳೆ, ಅವುಗಳಿಂದ ನಮಗೆ ಲಭಿಸುವ ಬೆಳಕಿನ ಮೊತ್ತ ಇಳಿಯುವ ದರವೂ ಪರಸ್ಪರ ಪ್ರತಿಲೋಮಾನುಪಾತದಲ್ಲಿವೆ; ಪ್ರತಿಯೊಂದು ನಕ್ಷತ್ರವೂ, ಸರಾಸರಿಯಲ್ಲಿ, ಒಂದೇ ಪ್ರಮಾಣದ ಬೆಳಕನ್ನು ಹೊರಹೊಮ್ಮಿಸುವುದೆಂದು ಅಂಗೀಕರಿಸಿದ್ದೇವೆ; ಅಂದ ಮೇಲೆ ಒಂದೊಂದು ಚಿಪ್ಪಿನಿಂದಲೂ, ಅದು ತ್ರಿಜ್ಯ ೧ರ ಸಮೀಪ ಚಿಪ್ಪಾಗಿರಲಿ ತ್ರಿಜ್ಯ ೧೦೦ ಲಕ್ಷದ ಸುದೂರ ಚಿಪ್ಪೇ ಆಗಿರಲಿ, ನಮಗೆ ಲಭಿಸುವ ಬೆಳಕಿನ ಮೊತ್ತ ಒಂದೇ ಆಗಿರುತ್ತದೆ. ದೂರತ್ವದ ಕಾರಣವಾಗಿ ಇಳಿಯುವ ಬೆಳಕನ್ನು ಸಂಖ್ಯಾವೃದ್ಧಿಯ ಕಾರಣವಾಗಿ ಹೆಚ್ಚುವ ನಕ್ಷತ್ರಗಳು ರದ್ದುಗೊಳಿಸುವಂಥ ಪರಿಸ್ಥಿತಿ.

ಚಿಪ್ಪುಗಳ ಮತ್ತು ನಕ್ಷತ್ರಗಳ ಸಂಖ್ಯೆ ಅನಂತವೆಂದೂ ಚಿಪ್ಪಿನ ಮತ್ತು ನಮ್ಮ ನಡುವೆ ಬೆಳಕಿನ ಹರಿವನ್ನು ತಡೆಯಬಲ್ಲ ಅಡಚಣೆ ಇಲ್ಲವೆಂದೂ ಅಂಗೀಕರಿಸಿದ್ದೇವೆ. ಹಾಗಾದರೆ, ಸೂರ್ಯ ನಮ್ಮ ಆಕಾಶದಲ್ಲಿ ಇರಲಿ (ಆಗ ಹಗಲು) ಇಲ್ಲದಿರಲಿ (ಆಗ ಇರುಳು), ಅನಂತ ಸಂಖ್ಯೆಯ ಈ ಚಿಪ್ಪುಗಳಿಂದ ನಮ್ಮಲ್ಲಿಗೆಷ್ಟು ಬೆಳಕು ಬರುತ್ತದೆ?

ಈ ಸಂಬಂಧವಾದ ಸೂಕ್ಷ್ಮ ಗಣನೆಗಳನ್ನು ಆಲ್ಬರ್ಸ್ ಮಾಡಿ ಅದು ಸೂರ್ಯನ ಮೇಲ್ಮೈ ಪ್ರಕಾಶದಷ್ಟಿರಬೇಕೆಂದು ಕಂಡುಕೊಂಡ. ಹೀಗೆ ಆತನೆದುರು ಹೊಸತೊಂದು, ತಾರ್ಕಿಕವಾಗಿ ವಿಸ್ಮಯಕರವಾದ, ಸನ್ನಿವೇಶ ಸೆಟೆದು ನಿಂತಿತು :

ಸೂರ್ಯ ನಮ್ಮ ಬಾನಿನಲ್ಲಿರಲಿ ಇಲ್ಲದಿರಲಿ ವಿಶ್ವದಿಂದ ನಮಗೆ ಸೂರ್ಯನ ಮೇಲ್ಮೈ ಪ್ರಕಾಶದಷ್ಟು ಬೆಳಕು ಸಂತತವಾಗಿ ಬರುತ್ತಿದೆ. ಹಗಲಿನಲ್ಲಿ ಇದು ನಮಗೆ ಪ್ರತ್ಯೇಕವಾಗಿ ಗೊತ್ತಾಗುವುದಿಲ್ಲ. ಆದರೆ ಇರುಳಿನಲ್ಲಿ ಎದ್ದು ಕಾಣಬೇಕು—ಅಂದರೆ ಇರುಳ ಬಾನು ಹಗಲ ಬಾನಿನಂತೆಯೇ ಬೆಳ್ಳಗೆ ಥಳಥಳಿಸುತ್ತಿರತಕ್ಕದ್ದು. ಅರ್ಥಾತ್ ರಾತ್ರಿಯ ನಭೋಮಂಡಲ ಕಪ್ಪಗೆ ತಣ್ಣಗೆ ಇರತಕ್ಕದ್ದಲ್ಲ.

ಸಿದ್ಧಾಂತ ಸರಿ. ವಾಸ್ತವತೆ? ಖುದ್ದು ಆಲ್ಬರ್ಸನನ್ನೂ ಒಳಗೊಂಡಂತೆ ಯಾರಿಗೂ ಎಂದೂ ಎಲ್ಲಿಯೂ ನಿರಾಕಾಶ ಶುಭ್ರವಸನಾಲಂಕೃತವಾಗಿ ಪ್ರಕಟವಾದದ್ದಿಲ್ಲ. ಹೀಗೆ ಇಲ್ಲಿ ಸಿದ್ಧಾಂತಕ್ಕೂ ವಾಸ್ತವತೆಗೂ ತಾಳೆ ಬೀಳದೇ ಸಂದಿಗ್ಧತೆ ಹಣುಕಿತು. ಎಂದೇ ಇದೊಂದು ವಿರೋಧಾಭಾಸ. ಇದನ್ನು ಮಂಡಿಸಿದಾತನ ಹೆಸರಿನಿಂದ ಇದು ಆಲ್ಬರ್ಸ್ ವಿರೋಧಾಭಾಸವೆಂದು ಕುಪ್ರಸಿದ್ಧವಾಯಿತು.

ಸಿದ್ಧಾಂತ ಸದಾ ವಾಸ್ತವತೆಯ ಯಥಾ ಪ್ರತಿಬಿಂಬವಾಗಿರತಕ್ಕದ್ದು. ಆಗದಿದ್ದಾಗ ಸಿದ್ಧಾಂತವನ್ನು ಆಮೂಲಾಗ್ರ ಪುನಃ ಪರಿಶೀಲನೆಗೂ ವಾಸ್ತವತೆಯನ್ನು ಅತಿ ನಿಸ್ಪೃಷ್ಟ ವೀಕ್ಷಣೆಗೂ ಒಳಪಡಿಸಬೇಕಾಗುತ್ತದೆ. ಹೀಗೆ ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಮತ್ತು ೨೦ನೆಯ ಶತಮಾನದ ಮೊದಲ ಎರಡು ದಶಕಗಳಲ್ಲಿ ಆಲ್ಬರ್ಸ್ ವಿರೋಧಾಭಾಸ ಖಗೋಳ ವಿಜ್ಞಾನಿಗಳನ್ನು ಬ್ರಹ್ಮಕಪಾಲವಾಗಿ ಕಚ್ಚಿಕೊಂಡಿತ್ತು. ಇದಕ್ಕೆ ಮೋಕ್ಷ ಕಾಣಿಸಲು ಕಾಲದಿಂದ ಕಾಲಕ್ಕೆ ಮಂಡಿಸಿದ ಸೂಚನೆಗಳ ಅಥವಾ ತೇಪೆಗಳ ಪೈಕಿ ಎರಡು ಗಮನಾರ್ಹವಾಗಿವೆ.

ಒಂದನೆಯದರ ಪ್ರಕಾರ ಚಿಪ್ಪುಗಳಿಗೂ (ಆಕರಗಳು) ನಮಗೂ (ಆಕಾಶವನ್ನು ನೋಡುವ ವೀಕ್ಷಕರು) ನಡುವೆ ರಜೋಮೇಘಗಳು ಮತ್ತು ಮೃತನಕ್ಷತ್ರಾವಶೇಷಗಳು ಸಮೃದ್ಧವಾಗಿ ಹರಡಿಕೊಂಡಿವೆ. ಚಿಪ್ಪುಗಳಿಂದ ನಮ್ಮತ್ತ ಬರುವ ಬೆಳಕನ್ನು ಇವು ಮಾರ್ಗಮಧ್ಯವೇ ಹೀರಿಕೊಳ್ಳುತ್ತವೆ. ಎಂದೇ ರಾತ್ರಿಯ ಆಕಾಶ ನಿಜವಾಗಿ ಬೆಳ್ಳಗೆ ಕಾಣಬೇಕಾಗಿದ್ದರೂ ಕಪ್ಪಾಗಿ ಪ್ರಕಟವಾಗುತ್ತದೆ.

ಇದು ಸಮರ್ಪಕ ವಿವರಣೆ ಅಲ್ಲವೆಂಬ ಪ್ರತಿವಾದವನ್ನು ಮಂಡಿಸಲಾಯಿತು. ಏಕೆಂದರೆ ಆಲ್ಬರ್ಸ್ ಅಂಗೀಕರಿಸಿದ್ದ ಮೂಲ ಭಾವನೆಗಳ ಪ್ರಕಾರ ವಿಶ್ವ ಅನಾದಿ, ಅದರ ಪ್ರಾಯ ಅನಂತ. ಅಂದ ಮೇಲೆ ಮಾರ್ಗಮಧ್ಯದ ಅಡಚಣೆಗಳು ಈ ಅನಂತ ಕಾಲದಲ್ಲಿ

ಸಾಕಷ್ಟು ಶಕ್ತಿಸೇಚಿತವಾಗಿ ಸ್ವತಃ ತಾವೂ ಶಕ್ತಿ ಬೀರುವ ಆಕರಗಳಾಗಲೇಬೇಕು—ಲೋಹವನ್ನು ಅತಿದೀರ್ಘಕಾಲ ಶಾಖಕ್ಕೆ ಒಡ್ಡಿದರೆ ಆಗುವಂತೆ. ಆದ್ದರಿಂದ ಈ ಅಪಾರದರ್ಶಕ ಅಡೆತಡೆಗಳ ಅಸ್ತಿತ್ವದಿಂದ ಪರಿಸ್ಥಿತಿ ಏನೂ ಬದಲಾಗಬೇಕಾಗಿಲ್ಲ.

ಎರಡನೆಯ ಸೂಚನೆ ಪ್ರಕಾರ ವಿಶ್ವಕ್ಕೆ ಆದಿ ಇದೆ, ಅದರ ಗಾತ್ರಕ್ಕೆ ಮಿತಿ ಇದೆ, ವಯಸ್ಸು ಅನಂತವಲ್ಲ. ಆದ್ದರಿಂದ ಚಿಪ್ಪುಗಳ, ಅಂತೆಯೇ ನಕ್ಷತ್ರಗಳ, ಸಂಖ್ಯೆಯೂ ಸಾಂತವೇ. ಇಂಥ ಸಾಂತ ವಿಶ್ವದಲ್ಲಿ ಚಿಪ್ಪುಗಳು ಸಂಯುಕ್ತವಾಗಿ ಬಿತ್ತರಿಸುವ ಪ್ರಕಾಶ ತೀರ ದುರ್ಬಲ. ಇದು ರಾತ್ರಿಯ ಆಕಾಶವನ್ನು ಖಂಡಿತವಾಗಿಯೂ ಬೆಳಗಿಸಲಾರದು. ಹೀಗೆ ಆಲ್ಬರ್ಸ್ ವಿರೋಧಾಭಾಸ ಸಾಂತ ವಿಶ್ವದ ಪ್ರತಿಪಾದನೆಗೆ ಒಂದು ಮುಖ್ಯ ಪುರಾವೆ ಆಯಿತು.

ಮುಂದೆ ಈ ಶತಮಾನದ (೨೦) ಮೊದಲ ಎರಡು ದಶಕಗಳಲ್ಲಿ ಖಗೋಳ ವಿಜ್ಞಾನಿಗಳು ಆವಿಷ್ಕರಿಸಿದ ಗಹನ ಮಾಹಿತಿಗಳು ಸಾಂತ ವಿಶ್ವದ, ಅನಾದಿ ವಿಶ್ವದ ಅಥವಾ ಅನಂತ ನಕ್ಷತ್ರಗಳ ಸಮಸ್ತ ಪರಿಕಲ್ಪನೆಗಳನ್ನೂ ಬುಡಮೇಲುಮಾಡಿ ತೊಡೆದುಹಾಕಿದುವು. ವಿಶ್ವದ ಅಸಂಖ್ಯ, ವಿಚಿತ್ರ ಹಾಗೂ ಊಹಾತೀತ ಗಹನ ವಿದ್ಯಮಾನಗಳನ್ನು ವ್ಯಾಖ್ಯಾನಿಸುವಲ್ಲಿ ಯೂಕ್ಲಿಡ್ ಜ್ಯಾಮಿತಿಯಾಗಲೀ ನ್ಯೂಟನ್ ಪ್ರಣೀತ ಭೌತ ವಿಜ್ಞಾನವಾಗಲೀ ಉಪಯುಕ್ತ ಸಾಧನಗಳಲ್ಲವೆಂದು ಖಚಿತವಾಯಿತು.

ಹಾಗಾದರೆ ಆಲ್ಬರ್ಸನ ಬ್ರಹ್ಮಕಪಾಲಕ್ಕೆ ಮೋಕ್ಷ? ಅದು ಬೇರೊಂದು ರೀತಿಯಲ್ಲಿ ಪ್ರಾಪ್ತವಾಯಿತು ಅದೇನೆಂದು ತಿಳಿಯಲು ವಿಶ್ವದ ಬಗೆಗಿನ ಆಧುನಿಕ ಸಿದ್ಧಾಂತವನ್ನು ತುಸು ಗಮನಿಸಬೇಕು.

ಆಕಾಶಗಂಗೆಯೇ ವಿಶ್ವವಲ್ಲ, ಇಂಥ ಅಸಂಖ್ಯ ಆಕಾಶಗಂಗೆಗಳ (ಇವುಗಳಿಗೆ ಬ್ರಹ್ಮಾಂಡಗಳೆಂದು ಹೆಸರು) ಸಮುದಾಯವೇ ವಿಶ್ವ. ಇದೊಂದು ದೇಶ-ಕಾಲ ಸಾತತ್ಯ; ನಿರಂತರವಾಗಿ ಹಿಗ್ಗುತ್ತಿರುವ, ಆದ್ದರಿಂದ ಪ್ರತಿಯೊಂದು ಬ್ರಹ್ಮಾಂಡವೂ ಇತರ ಎಲ್ಲ ಬ್ರಹ್ಮಾಂಡಗಳಿಂದ ದೂರದೂರ ಧಾವಿಸುತ್ತಿರುವ, ಮಹಾಸೃಷ್ಟಿ; ಅಂದ ಮೇಲೆ ಗತಯುಗದಲ್ಲೆಂದೋ ಇದು ಅಖಂಡ ವಸ್ತುವಾಗಿ ಒಂದುಗೂಡಿದ್ದಿರಬೇಕಷ್ಟೆ.

ಹೌದು, ಸುಮಾರು ೧೫,೦೦೦,೦೦೦,೦೦೦ ವರ್ಷಗಳ ಹಿಂದೆ ಇಂದಿನ ವಿಶ್ವ ಅಖಂಡ ಮುದ್ದೆಯಾಗಿ ಗಿಡಿದುಕೊಂಡಿತ್ತು. ಅದು ಎಲೆಕ್ಟ್ರಾನ್, ಪ್ರೋಟಾನ್, ನ್ಯೂಟ್ರಾನ್ ಮುಂತಾದ ಮೂಲಕಣಗಳ ಹಾಗೂ ವಿಕಿರಣ ಶಕ್ತಿಯ ಸಮುಚ್ಚಯ. ಆಗ ಅದರ ಗರ್ಭದಲ್ಲಿ ಸಂಭವಿಸಿದ ಮಹಾಸ್ಫೋಟದ (ಇದರ ಹೆಸರು ಮಹಾಬಾಜಣೆ) ಫಲವಾಗಿ ಅದು ಒಡೆದು ಅದರ ಖಂಡಗಳು ದಿಕ್ಕಾಪಾಲಾಗಿ ಎರಚಲ್ಪಟ್ಟವು. ದೇಶ–ಕಾಲದ ಆದಿ ಈ ಮಹಾಬಾಜಣೆ.

ಹೀಗೆ ದೂರ ದೂರ ಸರಿಯುತ್ತಿರುವ ವಿಶ್ವಘಟಕಗಳಲ್ಲಿ ಕ್ರಮೇಣ ನೀಹಾರಿಕೆಗಳೂ ನಕ್ಷತ್ರಗಳೂ ಬ್ರಹ್ಮಾಂಡಗಳೂ ಮೈದಳೆದುವು. ಅಂದರೆ ವಿಶ್ವ ಹಿಗ್ಗುತ್ತ ವಿಕಸಿಸುತ್ತ ನವರೂಪಗಳನ್ನು ಪ್ರದರ್ಶಿಸುತ್ತ ಮುನ್ನಡೆಯುತ್ತಿದೆ.

ಇವರಲ್ಲಿಯು ನಕ್ಷತ್ರಗಳ ಸಂಖ್ಯೆ ಅನಂತವಲ್ಲ, ಸಾಂತ. ಈ ನಕ್ಷತ್ರಗಳು ಊಹಾತೀತ ದೂರಗಳಲ್ಲಿ ಚದರಿಹೋಗಿ ಪರಸ್ಪರ ದೂರ ದೂರ ಧಾವಿಸುತ್ತಿವೆ. ಇವುಗಳ ವಿಕಾಸ ಹಂತ

ಗಳು ವಿವಿಧ. ಏಕರೀತಿಯಾಗಿ ಎಲ್ಲಿಯೂ ಇವು ವಿತರಣೆಗೊಂಡಿಲ್ಲ. ಆದ್ದರಿಂದ ಈ ಸಾಂತ ಸಂಖ್ಯೆಯ ಸಮಸ್ತ ನಕ್ಷತ್ರಗಳಿಂದ ಮಹಾವಿಸ್ತಾರದ ಆಕಾಶಕ್ಕೆ, ನಾವು ಕಾಣು ವಂತೆ, ಚೆಲ್ಲಲ್ಪಡುವ ಬೆಳಕು ತೀರ ಅಲ್ಪ, ದುರ್ಬಲ ಮತ್ತು ಅಗಮನಾರ್ಹ, ಇರುಳ ಬಾನಿನ ಮೇಲೆ ಏನೂ ಪರಿಣಾಮ ಬೀರ ದಷ್ಟು ಕ್ಷೀಣ.

ಎಂದೇ ಅಲ್ಬರ್ಸ್ ವಿರೋಧಾಭಾಸಕ್ಕೆ ಅಸ್ತಿತ್ವವೇ ಇಲ್ಲ!

ಹಾಗಾದರೆ "ಇರುಳ ಬಾನು ಕಪ್ಪು ಏಕೆ?"

"ಪ್ರಕಾಶರಾಹಿತ್ಯ ಆಕಾಶದ ಸಹಜಗುಣ. ಸೂರ್ಯ ನಮ್ಮ ಆಕಾಶಕ್ಕೆ ಬೆಳಕು ಮೊಗೆದಾಗ ಮಾತ್ರ ಅದು ಬೆಳ್ಳಗಾಗು ತ್ತದೆ. ಆದ್ದರಿಂದ ಹಗಲಿನಲ್ಲಿ ಆಗಸ ಬೆಳ್ಳಗಿರುತ್ತದೆ, ಇರುಳಿನಲ್ಲಿ ಕಪ್ಪಗಿರು ತ್ತದೆ."

ಸರಿಯೇ ಸೂರ್ಯಗೆ ಕೋಟಿ ಮಿಂಚು ಬಾಳುಗಳ್!



ವಿಚಾರದಿಂದ ವಿಷಯದ ಅರಿವಾಗುತ್ತದೆ. ಪ್ರೀತಿಯಿಂದ ಅದರ ಅನುಷ್ಠಾನವಾಗು ತ್ತದೆ. ಸುವಿಚಾರ, ಸತ್‌ವಿಷಯ ಮತ್ತು ಸುಪ್ರೀತಿಯಿಂದ ಸುಗುಣಗಳು ಜನನ ವಾಗುತ್ತವೆ. ದುರ್ವಿಚಾರ, ದುರ್ವಿಷಯ, ದುರ್ಭಾವನೆಗಳಿಂದ ದುರ್ಗುಣಗಳು ಹುಟ್ಟಿಕೊಳ್ಳುತ್ತವೆ.

—ವಿನೋಬಾ

ಇತರರು ಮಾಡಿದುದನ್ನಾಗಲಿ, ಮಾಡದುದನ್ನಾಗಲಿ ಗಮನಿಸಿದರೆ ಏನು ಬರು ತ್ತದೆ? ನಾವು ಗಮನಿಸಬೇಕಾದ್ದು ಅದನ್ನಲ್ಲ, ನಾವು ಮಾಡಿದ್ದು ಮತ್ತು ಮಾಡದೇ ಇದ್ದದ್ದನ್ನು ಗಮನಿಸಬೇಕು.

ಧರ್ಮ ಪದ

ಲೈಂಗಿಕ ಜೀವ ರಸಾಯನಗಳು: ಸ್ತ್ರೀಯರಿಗೊಂದು ಮಾರ್ಗದರ್ಶಿ

ಸರಸ್ವತಿ ಬಡೆಕ್ಕಿಲ

ಎಲ್ಲ ಮಹಿಳೆಯರ ಬಾಳಿನುದ್ದಕ್ಕೂ ದಾರಿದೀಪವಾಗಬಲ್ಲ ಉಪಯುಕ್ತ ಕೈಪಿಡಿ ಇಲ್ಲಿದೆ.

[ಶರೀರದ ವಿಶಿಷ್ಟ ಗ್ರಂಥಿಗಳಿಂದ ಸ್ರವಿಸಿ ರಕ್ತದೊಡನೆ ಬೆರೆಯುವ ಜೀವ ರಸಾಯನಗಳೇ ಹಾರ್ಮೋನುಗಳು. ಈ ರಸಾಯನಗಳಿಗೆ ತಮ್ಮದೇ ಆದ ಗುಣಗಳಿವೆ. ಸ್ತ್ರೀಯರಿಗೆ ಸ್ತ್ರೀತ್ವವನ್ನೂ, ಪುರುಷರಿಗೆ ಪುಂಸತ್ವವನ್ನೂ ಬೆಳೆಯಿಸಿ, ಉಳಿಸಿ ಬೆಳೆಸಿ ಕೊಡಬಲ್ಲ ಪುಷ್ಟಿಕಾರಕ ಸತ್ವಗಳೇ ಹಾರ್ಮೋನುಗಳು—ಅನು.]

ಹಾರ್ಮೋನುಗಳು ಅಂಡಾಶಯಗಳನ್ನೂ ಸ್ತನಗಳನ್ನೂ ಬೆಳೆಸುತ್ತವೆ, ಹೃದಯ ಮತ್ತು ರಕ್ತಕೋಶಿಕೆಗಳನ್ನು ಶಕ್ತಿಯುತವಾಗಿಸುತ್ತವೆ. ಮೂಳೆಗಳ ಸದೃಢತೆ, ಸಂವರ್ಧನೆ ಹಾರ್ಮೋನುಗಳಿಂದಲೇ ನಡೆಯುತ್ತದೆ. ಆದರೆ ಇದೇ ಜೀವದ್ರವ್ಯಕ್ಕೆ ಸ್ತನ ಮತ್ತು ಜನನಾಂಗದ ಕ್ಯಾನ್ಸರನ್ನು ವಿಸ್ತರಿಸಿ ವ್ಯಾಪಿಸುವಂತೆ ಮಾಡುವ ಸಾಮರ್ಥ್ಯವೂ ಇದೆ. ವಾಸ್ತವವಾಗಿ ಇವು ಸ್ತ್ರೀಯರ ಎಲ್ಲ ಅಂಗೋಪಾಂಗಗಳ ಮೇಲೆಯೂ ಪ್ರಭಾವ ಬೀರುತ್ತವೆ. ಹೆಚ್ಚಿನ ಮಹಿಳೆಯರಿಗೆ ಹಾರ್ಮೋನ್‌ಗಳ ಕಾರ್ಯಕಲಾಪಗಳ ಬಗ್ಗೆ ಏನೂ ಗೊತ್ತಿರುವುದಿಲ್ಲ.

ಮುಟ್ಟಾಗುವ ವಯಸ್ಸು ದಾಟಿ, ಮುಟ್ಟು ನಿಂತುಹೋದಾಗ ಮಾತ್ರ ಈ ಜ್ಞಾನದ ಅತಿ ಅವಶ್ಯಕತೆ ಕಂಡುಬರಬಹುದು. ತಮ್ಮ ಶರೀರದಲ್ಲಿ ಕಡಿಮೆಯಾದ ಅಥವಾ ಮುಗಿದು ಹೋದ ಜೀವದ್ರವ್ಯಗಳ ಕೊರತೆಯನ್ನು ಕೃತಕ ರೀತಿಯಲ್ಲಿ ತುಂಬಿಕೊಳ್ಳಬೇಕೇ? ಬೇಡವೇ? ಇದನ್ನು ಅವರೇ ನಿರ್ಧರಿಸಿಕೊಳ್ಳಬೇಕಾಗುವುದು. ಈ ಜೀವರಸಗಳು ತಮ್ಮ ಶರೀರದ ಮೇಲೆ, ಅಷ್ಟೇಕೆ ಜೀವನದ ಮೇಲೆಯೂ, ನಿರ್ಣಾಯಕ ಕಾರ್ಯವೆಸಗುತ್ತವೆ ಎಂಬುದನ್ನು ಎಳೆಯ ವಯಸ್ಸಿನಲ್ಲೇ ಸ್ತ್ರೀಯರು ಅರಿತಿರಬೇಕು. ಅವು ಶರೀರದ ಮತ್ತು ಮನಸ್ಸಿನ ಒಳಹೊರಗನ್ನು ಎಷ್ಟರ

೧೯೯೪ನೇ ಏಪ್ರಿಲ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಗ್ಲೀಮರ್ ಅವರ "ಸೆಕ್ಸ್ ಹಾರ್ಮೋನ್ಸ್—ಎ ಫ್ರೀ ವುಮೆನ್ಸ್ ಗೈಡ್" ಎಂಬ ಲೇಖನದ ಅನುವಾದ.

ಮಟ್ಟಿಗೆ ನಿಯಂತ್ರಿಸುತ್ತವೆ ಎಂಬುದನ್ನು ಪ್ರತಿಯೊಬ್ಬ ಮಹಿಳೆಯೂ ತಿಳಿದಿರಲೇಬೇಕು ಅಂಥ ಪರಿಜ್ಞಾನ ಇಲ್ಲಿದೆ ನೋಡಿ.

ಅವಳ ಇಪ್ಪತ್ತರ ಹರೆಯದಲ್ಲಿ....

ಹಂತಹಂತವಾಗಿ ಏರುತ್ತಿರುವ ತಾರುಣ್ಯದ ಈ ಕಾಲದಲ್ಲಿ ಜೀವರಸಾಯನಗಳ ಪರಿಪೂರ್ಣ ಪ್ರಭಾವ ಅನುಭವವೇದ್ಯ: ಮಾಸಿಕ ಋತುಚಕ್ರ, ಲೈಂಗಿಕ ಕ್ರಿಯೆ, ಕಾಮೋತ್ತೇಜನ, ಫಲೀಕರಣ (ಗರ್ಭವತಿ ಆಗುವುದು) ಮತ್ತು ಕಾಲಕಾಲಕ್ಕೆ ಅವಳ ಮನಸ್ಥಿತಿಗಳ ಈಸ್ಟ್ರೋಜೆನ್ ಮತ್ತು ಪ್ರೊಜೆಸ್ಟೋನ್—ಇವೇ ಆ ಪ್ರಮುಖ ಹಾರ್ಮೋನುಗಳು. ಇವು ಪಿಟ್ಯೂಟರಿ ಹಾರ್ಮೋನುಗಳ ಜತೆಗೂಡಿ ಶರೀರ ಮತ್ತು ಮಿದುಳಿನ ಮೇಲೆ ಪ್ರಭಾವ ಬೀರಿ ಪ್ರತಿ ತಿಂಗಳೂ ಶರೀರದೊಳಗೆ ನಡೆಯುವ ಬದಲಾವಣೆಗಳನ್ನು ಚಾಲಿಸುತ್ತವೆ, ನಿಯಂತ್ರಿಸುತ್ತವೆ. ಒಂದು ಗಡಿಯಾರದಂತೆ ದಿನ, ಘಂಟೆಗಳ ಲೆಕ್ಕಾಚಾರವಿಟ್ಟುಕೊಂಡಂತೆ ವರ್ತಿಸುತ್ತವೆ. ಇಪ್ಪತ್ತರ ಹರೆಯ ಪೂರ್ತಿ ಈ ಹಾರ್ಮೋನುಗಳು ಸಶಕ್ತವಾಗಿ ಉಚ್ಚ ಮಟದಲ್ಲಿ ಸ್ರವಿಸುತ್ತವೆ ಮತ್ತು ಕಾರ್ಯವೆಸಗುತ್ತವೆ. ಈ ಮಾಸಿಕ ಚಕ್ರದ ಮೊದಲ ಎರಡು ವಾರ ಅವಳ ಅಂಡಾಶಯಗಳು ದಿನೇ ದಿನೇ ಹೆಚ್ಚು ಹೆಚ್ಚಾಗಿ ಈಸ್ಟ್ರೋಜೆನ್ ರಸದ್ರವ್ಯ ಸ್ರವಿಸಿ ಗರ್ಭಾಶಯದೊಳಗೆ ಲೇಪನದಂತ ರಕ್ತಯುತ ಕವಚದ ಸೃಷ್ಟಿಯಾಗುವಂತೆ ಮಾಡುತ್ತವೆ. ಜತೆಯಲ್ಲೇ ಆಕೆಯಲ್ಲಿ ಲವಲವಿಕೆಯ ಮನಃಸ್ಥಿತಿ, ಗೆಲುವಿನ ಮುಖಚರ್ಯೆ ನಿರ್ಮಾಣಗೊಳ್ಳುತ್ತವೆ. ಮನಃಶಾಸ್ತ್ರ ಪ್ರಾಧ್ಯಾಪಕ 'ನಾರ್ಮಾ ಮೆಕಾಯ್' ಇದನ್ನು ಈ ರೀತಿ ವಿಶ್ಲೇಷಿಸುತ್ತಾರೆ—"ಸ್ತ್ರೀಯ ಶರೀರದಲ್ಲಿ ಈಸ್ಟ್ರೋಜೆನ್ ದ್ರವ ಉಚ್ಚಸ್ತರದಲ್ಲಿದ್ದಾಗ ಅನುಗುಣವಾಗಿ ಆರೋಗ್ಯ ಸಂತಸಗಳು ಉಚ್ಚತೆಗೆ ಏರುತ್ತವೆ; ಆಕೆ ಹೆಚ್ಚು ಆಶಾವಾದಿಯಾಗಿ ತೋರಿಬರುತ್ತಾಳೆ, ಇದು ಸಂಶೋಧನೆಗಳಿಂದ ದೃಢಪಟ್ಟಿದೆ."

ಮಾಸಿಕ ಚಕ್ರದ ೧೪ ದಿನಗಳಾದೊಡನೆ —ಅಂಡಾಶಯಗಳಲ್ಲಿ ಒಂದರಿಂದ ಒಂದು ಅಂಡವು ಕೋಶಿಕೆಯೊಳಗಿಂದ ಹೊರಚಿಮ್ಮುತ್ತದೆ. ಒಡನೆ—ಈಸ್ಟ್ರೋಜೆನ್ ಜಿನುಗುವ ಅದು ರಕ್ತದೊಂದಿಗೆ ಬೆರೆಯುವ, ಕಾರ್ಯ ನಿಂತುಹೋಗುತ್ತದೆ.

[ಸ್ತ್ರೀಯ ಗರ್ಭಾಶಯದ ಇಕ್ಕಡೆಗಳಲ್ಲೂ ಅಂಡಗಳು ಅರ್ಥಾತ್ ಡಿಂಭಾಣುಗಳು ಉತ್ಪತ್ತಿಯಾಗುವ ಕೋಶಗಳನ್ನು ಹೊಂದಿರುವ ಅಂಡಾಶಯಗಳಿವೆ. ಇವು ಫೆಲೋಪಿಯನ್ ಟ್ಯೂಬ್‌ಗಳೆಂದು ಹೆಸರಿಸಲಾಗುವ ನಾಳಗಳಿಂದ ಗರ್ಭಾಶಯಕ್ಕೆ ಜೋಡಿಸಲ್ಪಟ್ಟಿವೆ.]

ಈಸ್ಟ್ರೋಜೆನ್ ಅಂತಃಸ್ರಾವ ನಿಂತೊಡನೆ ತತ್‌ಕ್ಷಣವೇ ಪ್ರೊಜೆಸ್ಟೋನ್ ರಸಾಯನ ಜಿನುಗಲು ಪ್ರಾರಂಭಿಸುತ್ತದೆ. ಈ ಜೀವ ದ್ರವ ಗರ್ಭಾಶಯವನ್ನು ಫಲೀಕರಣಕ್ಕೆ ಯೋಗ್ಯವಾದ ರಸಭರಿತ ಪ್ರದೇಶವಾಗಿ ಸಜ್ಜುಗೊಳಿಸುತ್ತದೆ. ಈ ಕಾರ್ಯದ ಜತೆಯಲ್ಲೇ ಕಳೆಗುಂದಿದ ಮುಖಭಾವ, ಶರೀರದಲ್ಲಿ ಜಡತೆಗಳನ್ನು ಪ್ರೇರೇಪಿಸುತ್ತದೆ. ಕೆಲವರಲ್ಲಿ ಮುಂಗೋಪ ಸಿಡುಕುತನಗಳು ಹೆಚ್ಚಾಗುವುದಿದೆ. ಪರದೆಯ ಹಿಂದಿನ ಈ ಕಾರ್ಯ ಕಲಾಪಗಳು ಮುಂದಿನ ೧೪ ದಿನಗಳವರೆಗೆ ನಡೆಯುತ್ತಿದ್ದು ಆಕೆ ಗರ್ಭವತಿಯಾಗದಿದ್ದಲ್ಲಿ ಪ್ರೊಜೆಸ್ಟಿರಾನ್ ತನ್ನ

ಕಾರ್ಯಕ್ಕೆ ಮಂಗಳ ಹಾಡುತ್ತದೆ. ಎಂದರೆ ಪುನಃ ಮುಟ್ಟು ಪ್ರಾರಂಭಗೊಳ್ಳುತ್ತದೆ. ಅದೇ ಮುಂದಿನ ಚಕ್ರಕ್ಕೆ ನಾಂದಿಯಾಗುತ್ತದೆ, ಎಲ್ಲವೂ ಮೊದಲಿನಂತೆ ನಾಟಕೀಯವಾಗಿ ನಡೆಯತೊಡಗುತ್ತದೆ.

ಸ್ತ್ರೀಯರ ಲೈಂಗಿಕ ಚಟುವಟಿಕೆಗಳಲ್ಲಿ ಮುಖ್ಯ ಪ್ರೇರಕಗಳೆಂದರೆ ಟೆಸ್ಟಾಸ್ಟೆರೋನ್ ಎಂಬ ಹಾರ್ಮೋನು ಮತ್ತು ಅಂಡಾಶಯ ಮತ್ತು ಎಡ್ರಿನಲ್ ಗ್ರಂಥಿಗಳಿಂದ ಜಿನುಗುವ ಪುಂಸತ್ವವುಳ್ಳ ಎಂಡ್ರೋಜೆನ್‌ಗಳು (ಎಂಡ್ರೋಜೆನ್ ದ್ರವಗಳು ಅತಿ ಸಣ್ಣ ಪ್ರಮಾಣದಲ್ಲಿ ಪುರುಷರ ವೃಷಣದಲ್ಲಿ ಉತ್ಪತ್ತಿಯಾಗುವುದರ ಸಣ್ಣ ಅಂಶದಷ್ಟು).

ಟೆಸ್ಟಾಸ್ಟೆರಾನ್ ಹಾರ್ಮೋನ್ ಅಂತಃಸ್ರಾವ ಉಚ್ಚತಮ ಹಂತವನ್ನು ತಲುಪುವುದು ಹೆಚ್ಚಾಗಿ ಡಿಂಭಾಣು ಗರ್ಭಾಶಯವನ್ನು ಪ್ರವೇಶಿಸುತ್ತಿರುವಾಗ ಎಂದರೆ ಪರಿಶ್ರಮದ ಮಧ್ಯಕಾಲದಲ್ಲಿ ಡಿಂಭಾಣುವುಭ್ರೂಣವಾಗುವ ಸಮಯದಲ್ಲಿ ಹೆಚ್ಚಿನ ಸ್ತ್ರೀಯರಲ್ಲಿ ಫಲೀಕರಣಕ್ಕೆ ಯೋಗ್ಯವಾದ ಮಧ್ಯಕಾಲದಲ್ಲಿ ಲೈಂಗಿಕ ಅಭಿಲಾಷೆ ಪ್ರಬಲವಾಗಿರುವುದೆಂದು ಈ ಬಗ್ಗೆ ನಡೆಸಿದ ಅಧ್ಯಯನಗಳಿಂದ ತಿಳಿದುಬಂದಿದೆ. ಈಸ್ಟ್ರೋಜನ್ ಉದ್ರೇಕಿಸುವ ಅಥವಾ ಪ್ರಾರಂಭಿಸುವ ಕೆಲಸ ಮಾಡುವುದಿಲ್ಲ. ಆದರೆ ಯೋನಿಯನ್ನು ಸಂಭೋಗಕ್ಕೆ ಸನ್ನದವಾಗಿಸಲು ಸಜಲವಾಗಿ ಸ್ಥಿತಿಸ್ಥಾಪಕ ಗುಣವುಳ್ಳದ್ದಾಗಿ ಮಾಡುತ್ತದೆ. ಇದಕ್ಕೂ ಹೆಚ್ಚು ಮುಖ್ಯವಾಗಿ ಯೋನಿ ಭಿತ್ತಿಗಳಲ್ಲಿ ರಕ್ತದ ಪರಿಚಲನೆಯನ್ನು ಚುರುಕುಗೊಳಿಸುವುದಕ್ಕಾಗಿ ದೇಹಪೂರ್ತಿ ರಕ್ತ ಸಂಚಾರ ಸಮರ್ಪಕವಾಗಿರುವಂತೆ ಮಾಡುತ್ತದೆ.

ಹಲವು ಸ್ತ್ರೀಯರು ಗರ್ಭನಿರೋಧಕ್ಕಾಗಿ ಮಾತ್ರೆಗಳನ್ನು ಬಳಸುತ್ತಾರೆ. ಕೃತಕ ಈಸ್ಟ್ರೋಜೆನ್ ಪ್ರೊಜೆಸ್ಟ್ರೋನ್‌ಗಳ ಯುಕ್ತ ಸಂಯೋಗಗೊಳಿಸಿದ ಈ ಮಾತ್ರೆಗಳು ಗರ್ಭೋತ್ಪತ್ತಿ ಆಗದಂತೆ ತಡೆಯುತ್ತವೆ. ಮಾತ್ರವಲ್ಲ ಪ್ರತಿ ತಿಂಗಳೂ ಸ್ರವಿಸುವ ಹೊರ್ಮೋನುಗಳ ಕಾಲ ಮತ್ತು ಪ್ರಮಾಣವನ್ನು ಕೂಡಾ ನಿಯಂತ್ರಿಸುತ್ತವೆ. ಮುಟ್ಟಿನ ಕಾಲದಲ್ಲಿ ನಡೆಯುವ ಗರ್ಭಾಶಯದ ಆಕುಂಚನವನ್ನು ಕಡಿಮೆಗೊಳಿಸುವುದರಿಂದ ರಕ್ತಹೀನತೆಯ ಅಪಾಯವನ್ನೂ ತಪ್ಪಿಸುತ್ತದೆ. ಸ್ತನಗಳಲ್ಲಿ ಉಂಟಾಗಬಹುದಾದ ಗಡ್ಡೆಗಳನ್ನು ನಿವಾರಿಸುತ್ತದೆ. ಮೂತ್ರಪಿಂಡ ಕುಳಿಗಳ ಉರಿಯೂತವನ್ನು ಎಂದರೆ ಸೋಂಕನ್ನು ತಡೆಗಟ್ಟುತ್ತದೆ. ೪ ವರ್ಷ ಎಡೆಬಿಡದೆ ಅಥವಾ ಅದಕ್ಕಿಂತಲೂ ಹೆಚ್ಚು ವರ್ಷ ಈ ನಿರೋಧಕ ಗುಳಿಗೆಗಳ ಸೇವನೆ ಮಾಡಿರುವ ಮಹಿಳೆಯರಿಗೆ ಗರ್ಭಾಶಯ ಮತ್ತು ಅಂಡಾಶಯಗಳ ಕ್ಯಾನ್ಸರಿನ ಸಂಭಾವ್ಯತೆಯು ಅರ್ಧಾಂಶದಷ್ಟು ಕಡಿಮೆಯಾಗುತ್ತದೆ.

ಸ್ತನಗಳ ಕ್ಯಾನ್ಸರಿಗೆ ಮತ್ತು ಗರ್ಭನಿರೋಧಕಗಳಿಗೆ ಏನೋ ಒಂದು ನಿಗೂಢ ಸಂಬಂಧವಿದೆಯೆಂದು ಹೇಳಬಹುದು. ಆದರೆ ಅದು ಏನು? ಎಂದು ಇದುವರೆವಿಗೂ ವಿಜ್ಞಾನಿಗಳಿಗೆ ಸ್ಪಷ್ಟವಾಗಿ ತಿಳಿದಿಲ್ಲ.

ಔಷಧ ಮಾರುಕಟ್ಟೆಗೆ ಇತ್ತೀಚೆಗೆ ಹೆಚ್ಚಿನ ಪ್ರಮಾಣದಲ್ಲಿ ಹಾರ್ಮೋನುಗಳನ್ನು ಮಿಶ್ರಗೊಳಿಸಿದ ಹೊಸ ಮಾತ್ರೆಗಳು ಬರತೊಡಗಿವೆ. ಗರ್ಭನಿರೋಧಕಗಳಾದ ಹಾರ್ಮೋನ್ ಮಾತ್ರೆಗಳನ್ನು ಸ್ತ್ರೀಯರ ಮೇಲೆ ಪ್ರಯೋಗಿಸಿ ಹೆಚ್ಚಿನ ಮಾಹಿತಿ

ಗಳನ್ನು ಸಂಗ್ರಹಿಸಿದ ತಜ್ಞರು ಈ ಹೊಸ ಸೂತ್ರದ ಮಾತ್ರೆಗಳು ಹಳೆಯ ಕಡಿಮೆ ಪ್ರಮಾಣದವುಗಳಿಗಿಂತ ಹೆಚ್ಚು ಸುರಕ್ಷಿತ ವೆಂದು ನಂಬುತ್ತಾರೆ.

ಸ್ತನಗಳ ಗಂಟು ಇಲ್ಲವೇ, ಕ್ಯಾನ್ಸರ್ ಇತ್ಯಾದಿ ಯಾವ ತೊಂದರೆಯೂ ಇದುವರೆಗೆ ಬಾರದ ಮಹಿಳೆಯರು ಈ ಮೌಖಿಕ ಗರ್ಭ ನಿರೋಧಕಗಳನ್ನು ಹೆಚ್ಚಿನ ಅಪಾಯದ ಭಯವಿಲ್ಲದೇ ಉಪಯೋಗಿಸಬಹುದೆಂದು ಅಮೆರಿಕಾದ ಆಹಾರ ಮತ್ತು ಔಷಧ ವಿಭಾಗದ ಆಡಳಿತಾಧಿಕಾರಿಗಳು ಹಲವಾರು ತಜ್ಞ ವೈದ್ಯರೂ ಸೇರಿ ಚರ್ಚಿಸಿ ತೀರ್ಮಾ ನಿಸಿದ್ದಾರೆ.

ತಮ್ಮ ರಕ್ತ ಸಂಬಂಧಿಗಳಲ್ಲಿ ಯಾರಿ ಗಾದರೂ ಕ್ಯಾನ್ಸರ್ ಬಂದಿರುವ ಪೂರ್ವ ಚರಿತ್ರೆಯ ಹಿನ್ನೆಲೆ ಇದ್ದರೆ ಅಂತಹವರು ತಜ್ಞ ವೈದ್ಯರ ಜತೆ ಚರ್ಚಿಸಿ ನಿರೋಧಕ ಗಳನ್ನು ಸೇವಿಸುವ ಬಗ್ಗೆ ನಿರ್ಣಯ ಕೈಗೊಳ್ಳಬೇಕು. ಇದೊಂದು ಪ್ರಮುಖ ವಾಗಿ ಗಣನೆಗೆ ತೆಗೆದುಕೊಳ್ಳಬೇಕಾದ ವಿಚಾರ. ಅಂತಹ ಸಂಭವಗಳಿಗೆ ಒಳ ಪಟ್ಟವರು ಬೇರೆ ರೀತಿಯ ಗರ್ಭನಿರೋಧಕ ಗಳನ್ನು ಆರಿಸಿಕೊಳ್ಳುವುದು ಯುಕ್ತ.

ಕೆಲ ನವೀನ ಮಾದರಿಯ ಗರ್ಭ ನಿರೋ ಧಕಗಳು ಕೃತಕ ಹಾರ್ಮೋನುಗಳಿಗೆ ಸಂಬಂಧಿಸಿದ್ದೇ ಆಗಿವೆ. ಅವುಗಳಲ್ಲಿ 'ನಾರ್ ಪ್ಲಾಂಟ್' ಒಂದು. ಚಿಕ್ಕ ಬೆಂಕಿಕಡ್ಡಿ ಅಳತೆಯ ಕ್ಯಾಪ್ಸೂಲ್‌ಗಳು ಇತ್ತೀಚಿನ ಹೊಸ ಶೋಧ. ಇದರಲ್ಲಿ ಪ್ರೊಜೆಸ್ಟೀನ್ ಎಂಬ ಕೃತಕ ಹಾರ್ಮೋನು ತುಂಬ ಲಾಗಿದ್ದು ಸ್ತ್ರೀಯರ ಮೇಲ್ತೋಳಿನಲ್ಲಿ ನೆಡ ಲಾಗುವುದು. ಇಂತಹ ಒಂದು ಕ್ಯಾಪ್ಸೂಲ್ ಗರ್ಭಾಶಯದ ಮುಖದಿಂದ ಸ್ರವಿಸುವ ದ್ರವವನ್ನು ೫ ವರ್ಷಪರ್ಯಂತ ದಪ್ಪವಾಗು ವಂತೆ ಮಾಡುವುದು. ಈ ದಪ್ಪವಾದ ದ್ರವವೇ ವೀರ್ಯಾಣುವನ್ನು ಗರ್ಭಾಶಯ ದೊಳಕ್ಕೆ ಪ್ರವೇಶಿಸದಂತೆ ತಡೆಗೋಡೆ ಯಾಗಿ ಕಾರ್ಯವೆಸಗುತ್ತದೆ.

ಸ್ತ್ರೀಯರ ಪಿ. ಎಂ. ಎಸ್ ಎಂದರೆ ಪ್ರಿಮೆನ್ಸ್ಟ್ರುಅಲ್ ಸಿಂಡ್ರೋಮ್—ಅರ್ಥಾತ್ ಮುಟ್ಟಾಗುವುದಕ್ಕೆ ಹಿಂದಿನ ಒಂದು ವಾರ ಇಲ್ಲವೇ ೧೦ ದಿನ ಹಿಂದೆ ಹಲವು ಸ್ತ್ರೀಯರು ಅನುಭವಿಸುವ ಮನೋ ದೈಹಿಕ ಅಸ್ವಾಸ್ಥ್ಯ ಲಕ್ಷಣಗಳು—ಹೊಟ್ಟೆ ಉಬ್ಬರಿಸುವುದು, ಸ್ತನಗಳು ಮೃದುವಾಗು ವುದು, ತಿಂಡಿತಿನ್ನುವ, ಆಹಾರ ಸೇವನೆಯ ಅತೀ ಚಾಪಲ್ಯ, ತಲೆ ಸಿಡಿತ ಅಥವಾ ಶೀಘ್ರ ಕೋಪ ಇವೇ ಆ ಪರಿವರ್ತನೆಗಳು.

ಕೆಲವರು ನೀಡುವ ಅನುಭವ ಕಥನ ಮತ್ತು ಸಾಕ್ಷ್ಯಾಧಾರಗಳಿಂದ ಇವನ್ನು ಕಡಿಮೆ ಮಾಡಲು ಸಾಧ್ಯವಿದೆ ಎಂದು ತಿಳಿದುಬಂದಿದೆ. ಕಾಫೀ, ಸಕ್ಕರೆ, ಉಪ್ಪು ಇವುಗಳ ಸೇವನೆಯ ಪ್ರಮಾಣವನ್ನು ಕಡಿಮೆ ಮಾಡುವುದು, ದಿನಕ್ಕೆ ಮೂರು ಬಾರಿ ಹೊಟ್ಟೆ ತುಂಬ ಉಣ್ಣುವ ಪರಿಪಾಠ ವನ್ನು ಬದಲಿಸಿ ಐದಾರು ಸಲ ಸಣ್ಣ ಪ್ರಮಾಣದಲ್ಲಿ ಆಹಾರ ಸೇವಿಸುವುದು, ಮಧ್ಯದ ಚಟವಿದ್ದವರು ಅದನ್ನು ಸಂಪೂರ್ಣ ತ್ಯಜಿಸುವುದು, ಆಹಾರದಲ್ಲಿ ಗೋಧಿ ಮತ್ತು ದ್ವಿದಳ ಧಾನ್ಯಗಳನ್ನು ಸಿಪ್ಪೆ ಸುಲಿಯದೇ ಪೂರ್ಣರೂಪದಲ್ಲಿ ಅಡಿಗೆಗೆ ಬಳಸುವುದು. ತರಕಾರಿ ಹಣ್ಣುಗಳ ಯಥೇಚ್ಛ ಸೇವನೆ ಮತ್ತು ಸರಿಯಾದ ವ್ಯಾಯಾಮ ಇತ್ಯಾದಿ ಕ್ರಮಗಳನ್ನು ಅನುಸರಿಸಲು ತಜ್ಞ ವೈದ್ಯರು ಸಲಹೆ ಮಾಡುತ್ತಾರೆ.

ಶರೀರದ ಎಲುಬುಗಳು ಗಟ್ಟಿಯಾಗುವಂತೆ ಮತ್ತು ಅವುಗಳ ಕಣಗಳು ಒತ್ತೊತ್ತಾಗಿ ಗಡುಸಾಗುವಂತೆ ಈಸ್ಟ್ರೋಜೆನ್ ಮಾಡವುದು. ಹುಡುಗಿಯರು ೨೦ ನೇ ವರ್ಷಕ್ಕೆ ಕಾಲಿಡುತ್ತಿದ್ದಂತೆ ಅದುವರೆಗೆ ಎಳಸಾಗಿ ಮೃದುವಾಗಿದ್ದ ಎಲುಬುಗಳು ಗಟ್ಟಿಯಾಗುತ್ತಾ ಸುದೃಡವಾಗುತ್ತಾ ಬರುತ್ತವೆ. ಈಸ್ಟ್ರೋಜೆನ್ ಈ ಕಾರ್ಯಕ್ಕೆ ಮುಖ್ಯ ಪ್ರೇರಕ. ಹಾಲು ಮತ್ತು ಹಾಲಿನಿಂದ ತಯಾರಾದ ತಿಂಡಿಗಳು, ಕ್ಯಾಲ್ಸಿಯಂ ಹೇರಳವಾಗಿರುವ ಸೂಪ್ ಇತ್ಯಾದಿ ರಸಗಳು ಮತ್ತು ಪೂರಕವಾಗಿ ಕ್ಯಾಲ್ಸಿಯಂ ಕಾರ್ಬೋನೇಟ್ ಮಾತ್ರೆಗಳು ಇವುಗಳಿಂದ ಶರೀರ ಕ್ಯಾಲ್ಸಿಯಂನ್ನು ಹೆಚ್ಚು ಹೆಚ್ಚಾಗಿ ಹೀರಿಕೊಳ್ಳಲು ಮತ್ತು ಅದು ಎಲುಬುಗಳಲ್ಲಿ ಶೇಖರವಾಗಲು ಈಸ್ಟ್ರೋಜೆನ್ ಸಹಾಯ ಮಾಡುತ್ತದೆ. ಇದಕ್ಕೆ ಈಸ್ಟ್ರೋಜೆನ್‌ನ ಪ್ರಮಾಣ ಶರೀರದಲ್ಲಿ ಸಾಕಷ್ಟು ಇರುವುದು ಅಗತ್ಯ. ಸಿಗರೇಟು, ಹೊಗೆಸೊಪ್ಪಿನ ಸೇದುವಿಕೆಯಿಂದ ಈಸ್ಟ್ರೋಜೆನ್ ಪ್ರಮಾಣ ಇಳಿಯುತ್ತದೆ. ಆದ್ದರಿಂದ ಸ್ತ್ರೀಯರು ಧೂಮಪಾನವನ್ನು ವರ್ಜಿಸುವುದು ಅತ್ಯಾವಶ್ಯಕ.

ಮೂವತ್ತರ ದಶಕದಲ್ಲಿ

ಈ ದಶಕದ ಮಧ್ಯಭಾಗ ಮತ್ತು ಅದರಾಚೆಗೆ ಸ್ತ್ರೀಯರ ಜೀವರಸಾಯನಗಳ ಮಟ್ಟ ನಿಧನವಾಗಿ ಕೆಳಕ್ಕೆ ಇಳಿಯಲು ಪ್ರಾರಂಭಗೊಳ್ಳುತ್ತದೆ. (ಅಲ್ಲಿಂದ ಮುಂದೆ ದಿನೇ ದಿನೇ ೧೫ ವರ್ಷ ಇಳಿಯುತ್ತಾ ಮುಟ್ಟು ನಿಂತುಹೋಗುವ ಸಂಧಿಕಾಲದೆಡೆಗೆ ಸಾಗುತ್ತದೆ) ಆರೋಗ್ಯದಿಂದಿರಬೇಕಾದರೆ ಈಗ ಅವಳಿಗೆ ಈ ಮೊದಲಗಿಂತ ಹೆಚ್ಚು ಅವಶ್ಯಕವಾಗಿ ವ್ಯಾಯಾಮ ಸಂಕಲಿತ ಆಹಾರ ಪೋಷಕಾಂಶಗಳು ಮತ್ತು ಪೂರಕ ಅಂಗಾಂಶಗಳು ಬೇಕಾಗುತ್ತವೆ.

ಲೈಂಗಿಕ ಚರ್ಯೆಯಲ್ಲಿ ಕಾರ್ಯವೆಸಗುವ ಟೆಸ್ಟೋಸ್ಟೆರೋನ್ ಮತು ಈಸ್ಟ್ರೋಜೆನ್ ಹಾರ್ಮೋನ್‌ಗಳಲ್ಲದೇ ಇನ್ನೂ ಒಂದು ರಸಾಯನ ದ್ರವ್ಯವಿದೆ. ಅದೇ ಓರ್ಸೆಟೋಸಿನ್. ಹೆರಿಗೆಯು ಮತ್ತು ಮಗುವಿಗೆ ಮೊಲೆಯೂಡುವ ಕಾಲದಲ್ಲಾಗುವ ಮಾಂಸಖಂಡಗಳ ಆಕುಂಚನ ವಿಕಸನಗಳು ಈ ಒರ್ಸೆಟೋಸಿನ್ ಹಾರ್ಮೋನಿನ ಕಾರ್ಯವ್ಯಾಪ್ತಿಯಲ್ಲಿ ಇದೆ. ಸ್ತ್ರೀ ಮತ್ತು ಪುರುಷ ಇಬ್ಬರೂ ಲೈಂಗಿಕವಾಗಿ ಉತ್ತೇಜಿತರಾದಾಗ ಒರ್ಸೆಟೋಸಿನ್‌ನ ಮಟ್ಟ ಏರತೊಡಗಿ ಸ್ಖಲನ ಮತ್ತು ದ್ರಾವಣದ ಸಮಯ ಪರಮಾವಧಿಯ ಮಟ್ಟವನ್ನು ಮುಟ್ಟುವುದೆಂದು ಕೆಲವು ಸಂಶೋಧಕರು ಅಭಿಪ್ರಾಯ ಪಡುತ್ತಾರೆ. ಸ್ತ್ರೀಯರಲ್ಲಿ ಕೆಲವರಿಗೆ ಮೊಲೆಯೂಡುವಾಗ ಲೈಂಗಿಕ ಉದ್ರೇಕ ಉಂಟಾಗುವುದು ಮತ್ತು ಇನ್ನೂ ಕೆಲವು ಸಂದರ್ಭಗಳಲ್ಲಿ ರತಿಕ್ರೀಡೆಯ ಸಮಯ ಸ್ತನಗಳಿಂದ ಹಾಲು ಚಿಮ್ಮುವುದು ನಿಜ ಸಂಗತಿಯೆಂದು ತಿಳಿದುಬಂದಿದೆ. ಮೊದಲು ಇದೊಂದು ಒಗಟಾಗಿ ಕಾಣುತ್ತಿತ್ತು. ಆದರೆ ಅನೇಕ ಆಳವಾದ ಅಧ್ಯಯನಗಳಿಂದ ತಿಳಿದುಬಂದಂತೆ —ರತಿ ಮತ್ತು ಹೆರಿಗೆ ಇವರೆಡರಲ್ಲೂ ಪ್ರಮುಖ ಪಾತ್ರ ವಹಿಸುವ ಹಾರ್ಮೋನು ಒಂದೇ ಆಗಿರುವುದೇ ಈ ದ್ವಿಮುಖ ಅಂತರ್ ಕ್ರಿಯೆಗೆ ಕಾರಣವೆನ್ನಬಹುದು.

ಮೂವತ್ತರ ಹರೆಯದಿಂದ ನಲವತ್ತರ ಅಂಚಿಗೆ ಬರುತ್ತಿದ್ದಂತೆ ಸ್ತ್ರೀಯರು ಗರ್ಭ

ನಿರೋಧಕ ಗುಳಿಗೆಗಳ ಸೇವನೆಯನ್ನು ನಿಲ್ಲಿಸಿಬಿಡುವುದಿದೆ. ಹೃದಯಾಘಾತ ಇಲ್ಲವೇ ಪಕ್ಷಾಘಾತದ ಭಯದಿಂದ ಅವರು ಈ ರೀತಿ ಮಾಡುತ್ತಾರೆ. ಈ ವಿಷಯದಲ್ಲಿ ನುರಿತ ಅನುಭವಶಾಲಿ ವೈದ್ಯರಾದ ಡಾ॥ ಡೇವಿಡ್ ಗ್ರೀವ್ಸ್‌ರವರು ಈ ರೀತಿ ಅಭಿಪ್ರಾಯ ಪಡುತ್ತಾರೆ. ಇಂದಿನ ಹೊಸ ಸೂತ್ರದ ಮಿಶ್ರಣವುಳ್ಳ ಗುಳಿಗೆಗಳು ತಯಾರಾಗಿ ಪ್ರಚಾರಕ್ಕೆ ಬಂದ ಮೇಲೆ ಅಂಥ ಭಯವು ನಿರಾಧಾರವೆಂದು ಗೊತ್ತಾಗಿದೆ. ಸರ್ವತ್ರ ಈ ಹೊಸ ಮಾತ್ರೆಗಳ ಸೇವನೆ ನಿರಾಂತಕವಾಗಿ ನಡೆದಿದೆ.

"ರಕ್ತ ಹೆಪ್ಪುಗಟ್ಟುವ ಸಮಸ್ಯೆ ಇದೆಯೇ? ಧೂಮಪಾನ ಮಾಡುತ್ತಿರುವರೇ? ರಕ್ತದ ಒತ್ತಡ, ಯಕೃತ್ತಿನ ಕಾಯಿಲೆ, ಕೊಲೆಸ್ಟಿರಾಲ್ ಹೆಚ್ಚಾಗಿರುವುದು ಕೌಟುಂಬಿಕ ಹಿನ್ನೆಲೆಯಲ್ಲಿ ಹೃದಯಾಘಾತ ಇಲ್ಲವೇ ಪಕ್ಷವಾತದ ಘಟನೆಗಳು ನಡೆದಿದ್ದರೆ ಇತ್ಯಾದಿ ಎಲ್ಲಾ ವಿಚಾರಗಳ ತಪಾಸಣೆ ನಡೆಸಿ ಎಲ್ಲವೂ ನಕಾರಾತ್ಮಕವಾಗಿದ್ದಲ್ಲಿ ಈ ಗುಳಿಗೆಗಳು ಅಪಾಯರಹಿತವಾಗಿವೆ, ಸಮಂಜಸವಾಗಿವೆ" ಎಂದು ತಜ್ಞರು ನಂಬುತ್ತಾರೆ.

ಇನ್ನು ಈ ವಯಸ್ಸಿನ ಗೃಹಿಣಿಯರು— ಎಂದರೆ ತಮ್ಮ ವಂಶವನ್ನು ಯುಕ್ತವಾಗಿ ಅರಳಿಸಿ ಪೂರ್ಣಗೊಳಿಸಿದವರು—ಅತ್ಯಾಧುನಿಕವಾದ ನೂರ್‌ಪ್ಲಾಂಟ್ ಮತ್ತು ಡಿಪೋಪ್ರೊವೆರಾಕ್ಕೆ ಯೋಗ್ಯ ಅಭ್ಯರ್ಥಿಗಳು.

ಒಂದು ವರ್ಷ ಮತ್ತು ಅದಕ್ಕೂ ಮೇಲ್ಪಟ್ಟು —ಗರ್ಭವತಿಯಾಗಲು ಪ್ರಯತ್ನಿಸಿ ವಿಫಲರಾದ ಮಹಿಳೆಯರಿಗೆ ಕೃತಕವಾಗಿ ತಯಾರಿಸಿದ ಪಿಟ್ಯುಟರಿ ಹಾರ್ಮೋನನ್ನು ಕೊಡುತ್ತಾರೆ. ಇದು ಅಂಡಾಶಯದಲ್ಲಿ ಡಿಂಬಗಳ ಉತ್ಪತ್ತಿ ಮತ್ತು ಬೆಳವಣಿಗೆಯನ್ನು ಪ್ರಚೋದಿಸುತ್ತದೆ ಮತ್ತು ಗರ್ಭವತಿಯಾಗಲು ಉತ್ತೇಜನ ನೀಡುತ್ತದೆ. ಆದರೆ ಕೃತಕವಾಗಿ ಈ ರೀತಿ ಪ್ರಚೋದಿಸುವಾಗ ಒಂದೇ ಬಾರಿಗೆ ಹಲವು ಡಿಂಬಗಳು ಅಂಡಾಶಯದಿಂದ ಹೊರಬಿದ್ದು ಒಂದೇ ಬಾರಿ ಹಲವು ಭ್ರೂಣಗಳು ಜೀವ ತಳೆದು ತ್ರಿವಳಿಗಿಂತಲೂ ಹೆಚ್ಚು ಶಿಶುಗಳ ಜನನವಾಗುವುದು ಕಂಡುಬಂದಿದೆ. (ಕೃತಕ ಪಿಟ್ಯುಟರಿಯಿಂದ ಇನ್ನೂ ಹೆಚ್ಚಿನ ಅಪಾಯವಿದೆ ಎಂಬ ಸಂದೇಹ ಉಂಟಾಗತೊಡಗಿದೆ.)

ಸ್ತ್ರೀಯರಲ್ಲಿ ಹೆಚ್ಚುತ್ತಿರುವ ಅಂಡಾಶಯ ಕ್ಯಾನ್ಸರನ್ನು ಗಮನಿಸಿದಾಗ ಗರ್ಭಾಶಯ ಮತ್ತು ಅಂಡಾಶಯಗಳ ಫಲವತ್ತತೆಗಾಗಿ ಕೊಡಲಾಗುವ ಹಾರ್ಮೋನುಗಳಿಗೂ ಕ್ಯಾನ್ಸರ್‌ನ ಅಪಾಯಗಳಿಗೂ ಯಾವುದೋ ಒಂದು ಸಂಬಂಧವಿದೆಯೆಂದೂ ಸಂಶೋಧಕರು ಶೋಧಿಸಿರುವರು. ಆದರೆ ಈ ಕಾರ್ಯ–ಕಾರಣ–ಪರಿಣಾಮಗಳ–ನಿಕಟ ಸಂಬಂಧದ ಬಗ್ಗೆ ನಿಖರವಾಗಿ ಹೇಳಲು ಇನ್ನೂ ಹೆಚ್ಚಿನ ಶೋಧನೆ ನಡೆಯಬೇಕಾಗಿದೆ.

ಪ್ರಾರಂಭದಲ್ಲೇ ರಜಸ್ವಲೆಪೂರ್ವ ಲಕ್ಷಣಗಳಿದ್ದವರಿಗೆ ಮೂವತ್ತರ ದಶಕದ ಮಧ್ಯ ಭಾಗದಿಂದ ಕೊನೆಯವರೆಗಿನ ಕಾಲದಲ್ಲಿ ಅಸ್ವಾಸ್ಥ್ಯದ ಸಮಸ್ಯೆಗಳು ಇನ್ನೂ ಹೆಚ್ಚು ಆಗುವುದು ಕಂಡುಬಂದಿದೆ. ಬಹುಶಃ ಪ್ರತಿ ತಿಂಗಳೂ ನಡೆಯುವ ಹಾರ್ಮೋನುಗಳ ಕ್ರಮಬದ್ಧ ಏರಿಳಿತಗಳಲ್ಲಿ ಬದಲಾವಣೆ ಅಥವಾ ಏರುಪೇರು ಆಗತೊಡುವುದೇ ಇದಕ್ಕೆ ಕಾರಣವಿರಬಹುದು. ರಜಸ್ವಲೆ ಪೂರ್ವ

ಲಕ್ಷಣ ಅತಿಯಾಗಿ ಹೆಚ್ಚಿದಲ್ಲಿ ವೈದ್ಯರು ಆಕೆಯ ಈ ಮನೋದೈಹಿಕ ಕಾಯಿಲೆಯ ಮೂಲ ಕಾರಣವೇನೆಂದು ಕಂಡುಹಿಡಿಯ ಬೇಕಾಗುವುದು. ಮಾನಸಿಕ ದೌರ್ಬಲ್ಯ ಅಥವಾ ಅಳತೆ ತಪ್ಪಿದ ಪಿಟ್ಯುಟರಿ ಮತ್ತು ಥೈರಾಯಿಡ್ ಹಾರ್ಮೋನುಗಳು—ಇವು ಗಳ ಬಗ್ಗೆ ಹೆಚ್ಚಿನ ತಪಾಸಣೆ ನಡೆಸಬೇಕು. ಸಾಮಾನ್ಯವಾಗಿ ಮುಟ್ಟು ಪ್ರಾರಂಭ ವಾಗಲು ಇನ್ನೂ ೮–೧೦ ದಿನಗಳು ಇರು ವಾಗಲೇ ಪ್ರಾರಂಭಗೊಳ್ಳುವ ಈ ವ್ಯಾಧಿ (ರಜಸ್ವಲೆಪೂರ್ವ ಲಕ್ಷಣ) ವಯಸ್ಸಾದಂತೆ ಉಲ್ಬಣಗೊಳ್ಳುವುದು ಮುಖ್ಯವಾಗಿ ತಲೆ ನೋವು, ಅರ್ಥಾತ್ ತಲೆಸಿಡಿಯುವುದು. ತಲೆನೋವಿನ ಕಾರಣ ಬೇರೆಯೇ ಇದ್ದರೂ ಕೂಡಾ ಈಸ್ಟ್ರೋಜೆನ್ ಮಟ್ಟದಲ್ಲುಂಟಾದ ಅವ್ಯವಸ್ಥೆಯು ತಲೆನೋವಿಗೆ ಪ್ರಚೋದನೆ ನೀಡುತ್ತದೆಂದು ಗೊತ್ತಾಗಿದೆ. ಮೈಗ್ರೇನ್ (ತೀವ್ರವಾದ, ಸಹಿಸಲು ಅಸಾಧ್ಯವಾದ, ಸತತವಾಗಿ ಎರಡು ಮೂರು ದಿನ ಯಾವ ನೋವು ನಿವಾರಕ ಔಷಧಿಗಳಿಗೂ ಬಗ್ಗದೇ ಕಾಡುತ್ತಿರುವುದು.) ಕಾಯಿಲೆ ಇರುವ ಹೆಚ್ಚಿನ ಸ್ತ್ರೀಯರಿಗೆ ಅವರ ಮುಟ್ಟಿನ ಹಿಂದಿನ ದಿನಗಳಲ್ಲಿ ಬರುವುದೆಂದು–ಫಿಲಿಡಲ್ಫಿ ಯಾದ ತಲೆನೋವಿನ ಬಗ್ಗೆ ವ್ಯಾಪಕ ಸಂಶೋಧನಾ ಕೇಂದ್ರದ ಡಾಕ್ಟರ್ ಸ್ಟೀವನ್‌ಸ್ಟಿಲ್‌ಬರ್‌ಸ್ಟೀನ್ ಎಂಬುವರು ಸಕಾರಣವಾಗಿ ಇದನ್ನು ಸಾಧಿಸುತ್ತಾರೆ. ಅವರು ನಡೆಸಿದ ಪ್ರಯೋಗಗಳಿಂದ ಮುಟ್ಟಿಗೆ ಸಂಬಂಧಿಸಿದ ತಲೆನೋವು ಗರ್ಭನಿರೋಧಕ ಗುಳಿಗೆ ಅಥವಾ ಅಲ್ಪಪ್ರಮಾಣದ ಈಸ್ಟ್ರೋಜೆನ್ ಗುಳಿಗೆಗಳಿಂದ ಗುಣವಾಗು ವಂತೆ ಮೈಗ್ರೇನ್ ಕೂಡಾ ಕಡಿಮೆಯಾಗು ವುದು ಕಂಡುಬಂದಿದೆ ಎನ್ನುತ್ತಾರೆ.

ಈಗ ಸ್ತ್ರೀಯರ ಮೂಳೆಗಳು ಈ ಮೂವತ್ತರ ದಶಕದಲ್ಲಿ ಹೇಗಿರುತ್ತದೆ ನೋಡೋಣ–ಮೂವತ್ತು ದಾಟಿ ಮುಂದೆ ಹೋಗುತ್ತ ಇದ್ದಂತೆ ಮೂಳೆಗಳ ಗಡಸು ತನ ಅವುಗಳ ಕಣಗಳ ಒತ್ತಡ ಅತಿ ಉಚ್ಚ ಶ್ರೇಣಿಗೇರುತ್ತವೆ. ಇದುವರೆಗೂ ಆಕೆ ಎಲುಬುಗಳ ಬಗ್ಗೆ ಅಲಕ್ಷ್ಯ ಮಾಡಿದ್ದರೂ ಕೂಡಾ ಕಾಲ ಮಿಂಚಿಹೋಯಿತೆಂದು ತಿಳಿಯಬೇಕಾಗಿಲ್ಲ. ಮುಂದಿನ ವರ್ಷಗಳಲ್ಲಿ ಆಸಕ್ತಿವಹಿಸಿ ಸಮತೂಕದ ಆಹಾರ ಜತೆಗೆ ಕ್ಯಾಲ್ಸಿಯಂ ಯುಕ್ತಪೂರಕ ಆಹಾರ ಗಳನ್ನು ಸೇವಿಸುತ್ತಾಬಂದರೆ ಆಕೆಯ ಆರೋಗ್ಯಪೂರ್ಣ ಅಸ್ಥಿಪಂಜರವನ್ನು ಹೊಂದಬಹುದು. ಜತೆಯಲ್ಲೇ ವ್ಯಾಯಾ ಮವು ಅತ್ಯಗತ್ಯ ಎಂಬುದನ್ನು ಮರೆಯ ಬಾರದು. ಈ ಎಲ್ಲಾ ಪ್ರಯತ್ನಗಳಿಂದ ಮುಂದೆ ವಯಸ್ಸಾದಾಗ ಒದಗಬಹುದಾದ "ಆಸ್ಟಿಯೋಪೋರೆಸಿಸ್" ಎಂಬ ಮೂಳೆಗಳು ದುರ್ಬಲತೆ ಮತ್ತು ಟೊಳ್ಳುತನದಿಂದ ಅಲ್ಪಸ್ವಲ್ಪ ಆಘಾತಕ್ಕೆ ಮುರಿದುಹೋಗು ವಂತಹ ಪರಿಸ್ಥಿತಿಯು—ಬಾರದಂತೆ ತಡೆ ಗಟ್ಟಲು ಸಾಧ್ಯವಿದೆ.

ನಲವತ್ತರ ಆಚೆಗೆ ೫೦ರ ಅಂಚಿನವರೆಗೆ

ಈಗ ಪೆರಿಮೆನೋಪಾಸ್ ಎಂಬ ಮುಟ್ಟು ನಿಂತುಹೋಗುವಂತಹುದನ್ನು ತಲುಪುವ ಮಾರ್ಗ ನಿಧಾನವಾಗಿ ತೆರೆದುಕೊಳ್ಳುತ್ತದೆ. ಸುಮಾರು ೪೪ ವರ್ಷದಿಂದ ತೊಡಗಿ ೫೦ನೇ ವರ್ಷ ವಯಸ್ಸಿನವರೆಗೆ ಈ ಮಹತ್ವದ ಬದಲಾವಣೆ ನಿಧಾನವಾದ ಜಾರಿಕೆಯ ಗತಿ ಯಲ್ಲಿ ನಡೆಯುತ್ತದೆ. ಮುಟ್ಟನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡುವ ಈ ಕ್ರಿಯೆ

ಯಲ್ಲಿ ಎಲ್ಲಾ ಹಾರ್ಮೋನುಗಳ ಪ್ರಮಾಣ ತಗ್ಗುತ್ತಾ ತಗ್ಗುತಾ ಶರೀರದ ಎಲ್ಲಾ ಅಂತರ್‌ಕ್ರಿಯೆಗಳಲ್ಲಿ ಹೊಂದಾಣಿಕೆಯಾಗ ಬೇಕಾಗಿದೆ. ಈ ಕಾಲದಲ್ಲಿ ಸ್ತ್ರೀಯ ಅಂಡಾಶಯದಲ್ಲಿರುವ ಡಿಂಬ ಚೀಲ ಮತ್ತು ಅದರೊಳಗಿನ ಉತ್ತಮ ಡಿಂಬಗಳ ಭಂಡಾರ ವೆಲ್ಲಾ ಸತ್ವ ಕಳೆದುಕೊಂಡು ಒಣಗಲು ತೊಡಗುತ್ತವೆ. ಅವಕ್ಕೆ ಬೇಕಾದ ಜೀವಜಲ ಕಡಿಮೆಯಾಗುತ್ತಿರುವುದೇ ಇದಕ್ಕೆ ಕಾರಣ. ಅದೇ ರೀತಿ ಕೆಲವರಲ್ಲಿ— ಈಸ್ಟ್ರೋಜೆನ್ ಸ್ರವನ ಅನಿಯಮಿತವಾಗು ವುದರಿಂದ ಮೈಬಿಸಿ ಎರುವುದು ಭಾವೋ ದ್ವೇಗ ಕಂಡುಬರಬಹುದು. ಡಿಂಬಗಳ ಒಣಗುವಿಕೆಯಿಂದ ಪ್ರತಿ ತಿಂಗಳೂ ಹೊರ ಚಿಮ್ಮುವ ಕಾರ್ಯ ಆಗಾಗ ಸ್ಥಗಿತಗೊಳ್ಳ ಬಹುದು; ಮತ್ತೆ ತಡವಾಗಿ ಹೊರಬೀಳ ಬಹುದು. ಈಸ್ಟ್ರೋಜೆನ್ ಮತ್ತು ಪ್ರೊಜೆ ಸ್ಟ್ರೋನ್‌ಗಳ ಪ್ರಮಾಣವು ಕಡಿಮೆಯಾಗು ತ್ತಿರುವುದರಿಂದ ಮುಟ್ಟಿನ ಸ್ರಾವವು ಗಣನೀಯವಾಗಿ ಕಡಿಮೆಯಾಗುತ್ತಾ ಬಂದು ಮಧ್ಯೆ ಮಧ್ಯೆ ತಿಂಗಳ ಸ್ರಾವ ಇಲ್ಲದೆಯೂ ಹೋಗಬಹುದು. ಕೊನೆ ಗೊಮ್ಮೆ ಮುಟ್ಟು ಪೂರ್ಣವಾಗಿ ನಿಂತು ಹೋಗುವುದು.

ಏರುಪೇರಾದ ಈಸ್ಟ್ರೋಜೆನ್ ಅಂತಃ ಸ್ರಾವದ ಪರಿಣಾಮವಾಗಿ ಕಾಮಾಸಕ್ತಿ ಕಡಿಮೆಯಾಗಿಯೇ ತೀರುವುದೆಂದು ತಿಳಿಯ ಬೇಕಾಗಿಲ್ಲ. ಏಕೆಂದರೆ ಹೆಚ್ಚಿನ ಸ್ತ್ರೀಯರ ಅಂಡಾಶಯಗಳು ಸಾಕಷ್ಟು ಟೆಸ್ಟೋಸ್ಟೆ ರೋನ್ ಹಾರ್ಮೋನನ್ನು ತಯಾರಿಸುತ್ತಾ ಇರುತ್ತವೆ. ಆದರೆ ಈಸ್ಟ್ರೋಜೆನ್‌ನ ಅಭಾವ ದಿಂದ ಅಥವಾ ಪ್ರಮಾಣ ಕಡಿಮೆ ಇದ್ದುದ ರಿಂದ ಲೈಂಗಿಕ ಕ್ರಿಯೆಗೆ ಅಡಚಣೆಯಾಗು ವುದು ಸ್ವಾಭಾವಿಕ. ಕಾಲಸರಿದಂತೆ ವಿಪರೀತ ನೋವು, ಚರ್ಮ ಬಿರುಕು ಬಿಡುವುದು ಇತ್ಯಾದಿ ತೊಂದರೆಗಳುಂಟಾಗಬಹುದು.

ನಲವತ್ತರ ಮೇಲ್ಪಟ್ಟ ಈ ದಶಕದ ಮೊದಲ ಭಾಗದಲ್ಲಿ ಗರ್ಭಧಾರಣೆಯ ಭಯ ಇದ್ದೇ ಇರುತ್ತದೆ. ಶಸ್ತ್ರಕ್ರಿಯೆ ಮೂಲಕ ಅಂಡಾಶಯ ಇಲ್ಲವೇ ಗರ್ಭಾಶಯವ ಭಾಗ ಗಳನ್ನು ತೆಗೆದು ಹಾಕಿದವರ ಹೊರತಾಗಿ ಉಳಿದ ಎಲ್ಲರಿಗೆ ಈ ಸಮಸ್ಯೆ ಇದ್ದೇ ಇದೆ. ಅಂಡಾಶಯದ ಮೊಟ್ಟೆಗಳು ಎಂದರೆ ಡಿಂಬಾಣುಗಳು ಬೆಳೆದು ಹದಕ್ಕೆ ಬರುವ ಮತ್ತು ಹೊರ ಚಿಮ್ಮುವ ಸಮಯಕ್ಕೆ ಸರಿಯಾಗಿ ಹಾರ್ಮೋನುಗಳ ಏರಿಳಿತಗಳು ನಡೆಯುವುದಿಲ್ಲ. ವಸ್ತು ಸ್ಥಿತಿ ಹೀಗಿ ದ್ದರೂ ಹೆಚ್ಚಿನ ಸ್ತ್ರೀಯರ ತಿಂಗಳ ಮುಟ್ಟು ಸ್ರಾವ ಸಾಮಾನ್ಯ ರೀತಿಯಲ್ಲೇ ಇರುತ್ತವೆ. ಆದ್ದರಿಂದ ಅವರು ಗರ್ಭಿಣಿಯಾಗುವ ಇಚ್ಛೆ ಇಲ್ಲದಿದ್ದಲ್ಲಿ ನಿರೋಧಕಗಳ ಬಳಕೆಯನ್ನು ಕ್ರಮದಂತೆ ಎಚ್ಚರಿಕೆಯಿಂದ ಮಾಡುತ್ತಲೇ ಇರಬೇಕು. ಈ ಹಿಂದೆ ತಿಳಿಸಿದಂತೆ ಗುಳಿಗೆಗಳ ಸೇವನೆಯನ್ನು ಮುಂದಿನ ದಿನಗಳಲ್ಲೂ ಸೇವಿಸುತ್ತಲೇ ಇರಬಹುದು. ಈ ಮೊದಲೇ ತಿಳಿಸಿದ ಹಿನ್ನೆಲೆ ಇರುವವರ ಹೊರತಾಗಿ ಉಳಿದೆಲ್ಲರಿಗೆ ಗುಳಿಗೆಗಳಿಂದ ಅಪಾಯ ಕ್ಕಿಂತಲೂ ಲಾಭವೇ ಹೆಚ್ಚೆಂದು ತಿಳಿದು ಬಂದಿದೆ.

ಮುಟ್ಟು ನಿಲ್ಲುವಾಗಿನ ೬–೭ ವರ್ಷ ಮತ್ತು ನಿಂತ ಮೇಲೆ ಅನುಭವಿಸಬೇಕಾಗುವ ತೊಂದರೆಗಳ ನಿವಾರಣೆ ಸಹಾ ಇದೇ ಕೃತಕ ಹಾರ್ಮೋನು ಗುಳಿಗೆಗಳಿಂದ ನಡೆಯು ತ್ತದೆ. ಏಕೆಂದರೆ ಸ್ರವಿಸಲು ನಿರಾಕರಿಸುವ

ಈಸ್ಟ್ರೋಜೆನ್ ಪರಿಣಾಮವಾಗಿ ಒಂದು ತಿಂಗಳಲ್ಲಿ ಮುಟ್ಟಾಗದೇ ಹೋಗಬಹುದು. ಮುಂದಿನ ತಿಂಗಳಲ್ಲಿ ಸ್ರಾವ ಪ್ರಾರಂಭವಾಗ ಬಹುದು ಅಥವಾ ಅಧಿಕ ಸ್ರಾವವೇ ತಲೆ ದೋರಬಹುದು. ಅತ್ಯಧಿಕವಾದಲ್ಲಿ ಅವಳನ್ನು ಡಾಕ್ಟರಲ್ಲಿಗೂ ಕಳುಹಿಸ ಬೇಕಾಗುವುದು. ಅನಿಯಮ ಮತ್ತು ಅಧಿಕ ಸ್ರಾವದ ಅಪಾಯ ಇತ್ಯಾದಿಗಳಿಂದ ಪಾರಾಗಲು ಗರ್ಭನಿರೋಧಕಗಳು ಸಹಾಯ ಮಾಡುತ್ತವೆ ಮತ್ತು ತಿಂಗಳ ಪರಿಚಕ್ರ ನಿಯಮ ಪೂರ್ವಕ ಚಲಿಸುವಂತೆ ಮಾಡು ತ್ತವೆ.

ಈ ಕಾಲದಲ್ಲಿ ಕೆಲವು ಸ್ತ್ರೀಯರಿಗೆ ಹೊಸ ಸಮಸ್ಯೆಯೊಂದು ಎದುರಾಗುವುದಿದೆ. ಇದು ವರೆಗೂ ರಜಸ್ವಲೆ ಪೂರ್ವಲಕ್ಷಣ ತೊಂದರೆ ಇರದಿದ್ದವರಿಗೆ ಮುಟ್ಟಿನಿಂದ ನಿವೃತ್ತಿ ಯಾಗುವ ಮೊದಲ ಕೆಲ ವರ್ಷಗಳಲ್ಲಿ ಈ ಲಕ್ಷಣಗಳು ತಲೆದೋರುವುದಿದೆ. ಈ ಹಿಂದೆ ತಿಳಿಸಿದ ಚಿಕಿತ್ಸೆ, ವ್ಯಾಯಾಮ ಮತ್ತು ಸಂತುಲಿತ ಆಹಾರದಿಂದ ತೊಂದರೆಗಳನ್ನು ನಿವಾರಿಸಲು ಸಹಾಯವಾದೀತು. ಹಲವಾರು ವರ್ಷಗಳಿಂದ ರಜಸ್ವಲೆಪೂರ್ವ ಲಕ್ಷಣ ತಲೆ ನೋವಿನ ಕಪಿಮುಷ್ಠಿಯಲ್ಲಿದ್ದವರಿಗೆ, ಈ ಕಾಲದ ಈಸ್ಟ್ರೋಜೆನ್‌ನ ಇಳಿತದಿಂದ ನೋವು ಕಡಿಮೆಯಾಗುವ ಸಾಧ್ಯತೆಯೂ ಇದೆ. ಹಾಗೆಯೇ ಹೆಚ್ಚಾಗವ ಸಂಭವವೂ ಇಲ್ಲವೆನ್ನಲಾಗದು. ಸ್ತ್ರೀಶರೀರದ ರಾಸಾಯ ನಿಕ ಪ್ರಕೃತಿಗನುಗುಣವಾಗಿ ಇವೆಲ್ಲಾ ನಡೆಯುತ್ತವೆ.


ಇನ್ನು ಕ್ರಮೇಣ ಮೂಳೆಗಳ ಸ್ಥಿತಿ ಯಲ್ಲೂ ಬದಲಾವಣೆ ಆಗದೇ ಇರುವುದಿಲ್ಲ. ಅಂಡಾಶಯಗಳು ಕಡಿಮೆ ಈಸ್ಟ್ರೋಜೆನ್ ತಯಾರಿಸುವುದರಿಂದ ಮೂಳೆಗಳ ಸಂರಕ್ಷಣೆ ನಿಂತುಹೋಗಿ ಅವುಗಳು ಸವೆದುಹೋಗ ತೊಡಗುತ್ತವೆ. ಅಸ್ಥಿಪಂಜರವನ್ನು ಮೊದಲಿ ದ್ದಂತೆ ಸುದೃಢವಾಗಿರಿಸಲು ಈ ಮೊದಲಿ ಗಿಂತಲೂ ಹೆಚ್ಚಾದ ಕ್ಯಾಲ್ಸಿಯಂನ ಪೂರೈಕೆಯ ಅಗತ್ಯವಿದೆ. ದಿನವೊಂದಕ್ಕೆ ಸಾವಿರ ಮಿಲಿಗ್ರಾಂ ಕ್ಯಾಲ್ಸಿಯಂ ಮತ್ತು ೪೦೦ ಅಂತರರಾಷ್ಟ್ರೀಯ ಯೂನಿಟ್ ವಿಟಾಮಿನ್ 'ಡಿ' ಆಹಾರದಲ್ಲಿರುವಂತೆ ನೋಡಿಕೊಳ್ಳಬೇಕು.

ಮುಟ್ಟು ನಿಂತುಹೋಗುವ—ಎಂದರೆ ರಜೋಸ್ತಂಭನದ ಮುಂದಿನ ವರ್ಷಗಳಲ್ಲಿ ಇದ್ದಕ್ಕಿದ್ದಂತೆ ಮೈ ಬಿಸಿ ಏರುವುದು ಮತ್ತು ಚಿಂತೆ ಆವರಿಸುವುದು ಕಂಡು ಬಂದಿದೆ. ಕೆಲವರಲ್ಲಿ ನಿದ್ರಾನಾಶ, ಚರ್ಮ ದಲ್ಲಿ ನವೆ ಅಥವಾ ರಾತ್ರಿ ಬೆವರುವುದು ಇತ್ಯಾದಿಗಳೂ ಕಾಣಿಸಿಕೊಳ್ಳುವುದಿದೆ. ಇವಕ್ಕೆಲ್ಲಾ ಕಾರಣ ಯಾರು ತಿಳಿದಿಲ್ಲ. ಯಾವುದೋ ಒಂದು ರೀತಿಯ ಈಸ್ಟ್ರೋ ಜೆನ್ ಕೊರತೆಯಿಂದ ಬರುವ ಕಾಯಿಲೆ ಗಳೆಂದು ಇವನ್ನು ಹೆಸರಿಸಬೇಕಾಗುತ್ತೆ, ಇದರ ಹೊರತು ಅನ್ಯ ಮಾರ್ಗವಿಲ್ಲ. ಮೇಲೆ ಹೇಳಿದ ಲಕ್ಷಣಗಳಲ್ಲಿ ಬಿಸಿಯೇರುವ ಲಕ್ಷಣ ಸರ್ವೇಸಾಮಾನ್ಯ ಎಲ್ಲಾ ಸ್ತ್ರೀಯರಲ್ಲಿ ಕಂಡುಬಂದಿದೆ. ಇದನ್ನು ಕಡಿಮೆ ಮಾಡಲು ಕಾಫಿ ಮತ್ತು ಮಧ್ಯ ಸೇವನೆಯನ್ನು (ಸೇವಿಸುವವರಾಗಿದ್ದಲ್ಲಿ) ಮಿತಗೊಳಿಸು ವುದು ಸಹಕಾರಿಯಾಗುವುದು. ಆದರೆ ಎಲ್ಲ ಕ್ಕಿಂತ ಹೆಚ್ಚು ಗುಣಕಾರಿ ಈಸ್ಟ್ರೋಜೆನ್ ಪೂರಕ ಗುಳಿಗೆ ಸೇವಿಸುವುದು. ಇದರಿಂದ ಹೆಚ್ಚಿನವರ ಈ ಎಲ್ಲಾ ಸಮಸ್ಯೆ ಪೂರ್ಣ ವಾಗಿ ಪರಿಹಾರವಾಗುವುದು. ವಿಶೇಷವಾಗಿ

ಶರೀರದ ಬಿಸಿ ಏರುವಿಕೆಯು ಒಂದು ಅಥವಾ ಎರಡು ವರ್ಷದೊಳಗೆ ದೂರವಾಗುವುದು.

೫೦ರ ದಶಕದಲ್ಲಿ ಮತ್ತು ಅದರಿಂದಾಚೆಗೆ

ಸರ್ವೆಸಾಮಾನ್ಯ ೫೦ ವರ್ಷ ವಯಸ್ಸು ರಜೋಸ್ತಂಭನದ (ಮೆನೊಪಾಸ್) ಕಾಲ. ಇಂದಿನಿಂದ ಮತ್ತು ಮುಂದೆಯೂ ಅವಳ ಅಂಡಾಶಯಗಳು ಈಸ್ಟ್ರೋಜೆನ್ ಮತ್ತು ಪ್ರೊಜೆಸ್ಟ್ರೋನ್‌ಗಳನ್ನು ತಯಾರಿಸಲಾರವು. ಡಿಂಬಾಣುಗಳ ಉತ್ಪತ್ತಿಯೂ ನಿಂತು ಹೋಗುವುದು. .ಮಾಸಿಕ ಸ್ರಾವದ ಚಕ್ರ ಮುಕ್ತಾಯವಾಗುವುದು. ಹಲವಾರು ದೃಷ್ಟಿಕೋಣದಿಂದ ನೋಡಿದರೆ ಇದು ಜೀವನದ ಮಹತ್ವಪೂರ್ಣ ಘಟ್ಟ. ಮಾಸಿಕ ಚಕ್ರದ ಹಲವು ಜಂಜಾಟಗಳ ಹೊಡೆತದಿಂದ ವಿಮುಕ್ತಿ. ಹೆಚ್ಚಿನ ಎಲ್ಲಾ ಸ್ತ್ರೀಯರು ಪ್ರತಿ ತಿಂಗಳೂ ಹೊಂದುವ ಅಸುಖದಿಂದ ಬಿಡುಗಡೆ ಹೊಂದಿ ಸ್ವತಂತ್ರರಾದಂತೆ ಸಂತಸ ಹೊಂದುತ್ತಾರೆ. ಇನ್ನು ಮುಂದೆ ಅವರು ರಜಸ್ವಲೆ ಪೂರ್ಣ ಲಕ್ಷಣ ತೊಂದರೆಗೀಡಾಗುವ ಭಯವಿಲ್ಲ. ಗರ್ಭನಿರೋಧದ ಬಗ್ಗೆಯೂ ತಲೆಕೆಡಿಸಿಕೊಳ್ಳಬೇಕಾಗಿಲ್ಲ.



ವಕ್ರವಾದ ವಿಷಯ ಮಾರ್ಗಗಳಲ್ಲಿ ಅಪಕ್ವವಾದವನಿಗೆ, ಹೆಜ್ಜೆ-ಹೆಜ್ಜೆಗೂ ಆತಂಕಗಳು ತಪ್ಪಿದ್ದಲ್ಲ. ಅಷ್ಟು ಆತಂಕಗಳನ್ನು ಎದುರಿಸಿಯೂ ಆತ ದುರ್ಮಾರ್ಗದಲ್ಲಿಯೇ ಮುಂದುವರಿಯಲು ಹವಣಿಸುವುದೆಂದರೆ ಅದು ಹಾವಿನ ಹುತ್ತವನ್ನು ಹೊಕ್ಕಂತೆಯೇ ಸರಿ.

—ವಿವೇಕ ಚೂಡಾಮಣಿ

ಅಜ್ಞಾನ, ಸೋಮಾರಿತನ, ಆಲಸ್ಯ, ನಿದ್ದೆ, ಮರೆವು, ಮೂಢತ್ವ ಇವೆಲ್ಲವುಗಳೂ ತಮೋಗುಣ ಧರ್ಮಗಳು. ಇವುಗಳಿಂದ ಕೂಡಿದ ಮಾನವನು ಜ್ಞಾನಸಾಗರದಲ್ಲಿ ತೇಲಾಡುತ್ತಿದ್ದರೂ ಏನೂ ತಿಳಿಯದವನಂತೆ ನಿದ್ರಾಸಕ್ತನಾಗಿ ಸೋಮಾರಿಯಾಗಿರುವನು.

—ಸ್ವಾಮಿ ರಾಮತೀರ್ಥ

ಆರೋಗ್ಯ ಔಷಧಿಯಲ್ಲಿದೆಯೆ?

ಎ. ಪಿ. ಚಂದ್ರಶೇಖರ್

ವ್ಯಕ್ತಿಯ ಮನೋದೈಹಿಕಾರೋಗ್ಯದ ರಹಸ್ಯ ಅತ ಅದಷ್ಟು ಸರಳ ಅಡಂಬರ ರಹಿತ ಪರಿಕರಮುಕ್ತ ನೈಸರ್ಗಿಕ ಜೀವನ ನಡೆಸುವುದರಲ್ಲಿ ಅಡಗಿದೆ, ಹೊರತು, ಕೃತಕ ಔಷಧಿ ಸೇವನೆಯಲ್ಲಿ ಅಲ್ಲ. ಬುದ್ಧಿಶೂನ್ಯ ಪ್ರಾಣಿಗಿರದ ಭಯ ಬುದ್ಧಿವಂತ ಮನುಷ್ಯನಿಗೇಕೆ? ಓದಿ ಇಲ್ಲಿಯ ಸ್ವಾನುಭವ ಜಿಜ್ಞಾಸೆ.

"ಆರೋಗ್ಯವೇ ಭಾಗ್ಯ" ಎಂದು ಶಾಲೆಗೆ ಹೋಗುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಉರು ಹೊಡೆಯುತ್ತಾನೆ. ದೌರ್ಭಾಗ್ಯವೆಂದರೆ ಶಿಕ್ಷಕರಿಂದ ಹಿಡಿದು ವಿದ್ಯಾರ್ಥಿಗಳವರೆಗೆ, ತಂದೆತಾಯಿಗಳಿಂದ ಮಕ್ಕಳವರೆಗೆ, ಹಿರಿಯರಿಂದ ಕಿರಿಯರವರೆಗೆ ಹೆಚ್ಚಿನ ಮಂದಿಗೆ ಆರೋಗ್ಯದ ನಿಜಾರ್ಥ ಗೊತ್ತಿಲ್ಲ. ಭಾಗ್ಯದ ಭವ್ಯಾರ್ಥ ತಿಳಿದಿಲ್ಲ. ರೋಗ ಇಲ್ಲದಿರುವುದು ಆರೋಗ್ಯ. ಹಾಗಾದರೆ ರೋಗವೆಂದರೇನು? ಎಂದು ಮನಸ್ಸಿನ ದಾಸನಾದ ಬುದ್ಧಿಯ ಮೂಲಕ ಮನುಷ್ಯ ಪ್ರಶ್ನೆ ಮಾಡುತ್ತಾನೆ. ಶೀತ,ಜ್ವರ ಬಾರದಿರುವುದು, ಯಾವುದೇ ನೋವು ಏಳದಿರುವುದು ಆರೋಗ್ಯ. ಈ ಪರಿಕಲ್ಪನೆ ವಿಸ್ತಾರಗೊಳ್ಳುತ್ತಾ ಇಂದು ಆರೋಗ್ಯದ ಅರ್ಥ ಹೀಗಾಗಿದೆ—ದುಡಿಯದಿರುವುದು, ದಣಿಯದಿರುವುದು, ಬೆವರದಿರುವುದು ಬೇಯದಿರುವುದು ಆರೋಗ್ಯ. ಆರಾಮವೇ ಆರೋಗ್ಯ, ಆಲಸ್ಯವೇ ಆರೋಗ್ಯ. ಐಷಾರಾಮವೇ ಆರೋಗ್ಯ. ಮಳೆಗೆ ಹೋದರೆ ತಾನೆ ಶೀತ ಬರುವುದು. ಹಾಗಾಗಿ ಮಳೆಗೆ ಹೋಗದಿರೋಣ. ನಡೆದರೆ ತಾನೆ ನೋಯುವುದು. ಹಾಗಾಗಿ ಪಕ್ಕದ ಹಾಲಿನ ಬೂತಿಗೂ ಸ್ಕೂಟರಿನಲ್ಲಿ ಹೋಗೋಣ. ದುಡಿದರೆ ತಾನೆ ದಣಿಯುವುದು. ಹಾಗಾಗಿ ಬುದ್ಧಿವಂತಿಕೆಯಿಂದಲೇ ಕೆಲಸ ಮಾಡೋಣ ಎಂಬ ಸ್ಥಿತಿಗೆ ನಾವಿಂದು ತಲುಪಿದ್ದೇವೆ.

ಬುದ್ಧಿ ಇರುವ ಮನುಷ್ಯ ಬುದ್ಧಿ ಇಲ್ಲದ ಪ್ರಾಣಿಗಳನ್ನು ಎಂದೂ ಗಮನಿಸಲೇ ಇಲ್ಲ. ಈ ಬುದ್ಧಿ ಯಾಕೆ ಬರಲಿಲ್ಲವೋ ಗೊತ್ತಿಲ್ಲ. ನಮ್ಮ ಆರೋಗ್ಯ ಕಾಪಾಡಿಕೊಳ್ಳುವುದಕ್ಕಾಗಿ ನಾವಿಂದು ಸಾವಿರಗಟ್ಟಲೆ ಔಷಧಿಗಳನ್ನು ಕಂಡುಹಿಡಿದಿದ್ದೇವೆ. ದಿನದಿನವೂ ಹೊಸ ಪ್ರಯೋಗಗಳನ್ನು ಮಾಡಿ ಹೆಚ್ಚು ಹೆಚ್ಚು ಔಷಧಿಗಳನ್ನು ಕಂಡು ಹುಡುಕುತ್ತಿದ್ದೇವೆ. ಈ ಹೆಚ್ಚುಗಾರಿಕೆಗಾಗಿ ಬೀಗುತ್ತಿದ್ದೇವೆ. ನಮಗೆ ಇಂದು ಆರೋಗ್ಯದ ಬಗ್ಗೆ ಎಷ್ಟೊಂದು ಕಾಳಜಿ! ಆರೋಗ್ಯ

ಇಂದು ಎಷ್ಟೊಂದು ದುಬಾರಿ! ಯಾಕೆ ಹೀಗೆ? ಎಂದು ಒಂದೊವ್ಮೆ ನಾವು ಪುನರಾವಲೋಕನ ಮಾಡಿದ್ದರೆ? ನಿಸರ್ಗವನ್ನೊವ್ಮೆ ಕಣ್ತೆರೆದು ನೋಡಿದ್ದರೆ? ನೈಸರ್ಗಿಕವಾಗಿ ಬದುಕುತ್ತಿರುವ ಹಲವು ಪ್ರಾಣಿ ಪಕ್ಷಿಗಳನ್ನೊವ್ಮೆ ಕುತೂಹಲದಿಂದ ಗಮನಿಸಿದ್ದರೆ? ಆರೋಗ್ಯ ಕಾಪಾಡಲೆಂದು ಇಂದು ನಾವು ಮಾಡುತ್ತಿರುವ ಹಲವೊಂದು ಕಾರ್ಯಾಚರಣೆಗಳೇ ಆರೋಗ್ಯವನ್ನು ಹರಣಮಾಡುತ್ತಿವೆ ಎಂಬ ಸತ್ಯ ನಮಗೆ ಅರಿವಾಗುತ್ತಿತ್ತು.

ಈಗ ಭಾಗ್ಯದ ಖಾತೆಗೆ ಬರೋಣ. ಚೆನ್ನಾಗಿ ತಿನ್ನುವುದೇ ಭಾಗ್ಯ. ರುಚಿಯಾದದ್ದನ್ನು ತಿನ್ನುವುದೇ ಭಾಗ್ಯ. ಹೊಸ ಹೊಸ ರುಚಿ ಕಾಣುವುದೇ ಭಾಗ್ಯ. ತಿನ್ನುತ್ತಾ ಇರುವುದೇ ಭಾಗ್ಯ. ನಡೆಯದಿರುವುದೇ ಭಾಗ್ಯ. ಕಾರಿನಲ್ಲಿ ತಿರುಗಾಡುವುದೇ ಭಾಗ್ಯ. ಧೂಳು ನುಸುಳದ ಕೋಣೆಯಲ್ಲಿ ಮಲಗುವುದೇ ಭಾಗ್ಯ. ಹೆಚ್ಚು ಹೆಚ್ಚು ಆಧುನಿಕ ಉಪಕರಣಗಳನ್ನು ಹೊಂದುವುದೇ ಭಾಗ್ಯ. ಪ್ರಕೃತಿಯಿಂದ ಹೆಚ್ಚು ಹೆಚ್ಚು ದೂರವಾಗಿ ಬದುಕವುದೇ ಭಾಗ್ಯ ಎಂಬ ಭಾವನೆ ಬಲಿತು ಇಂದು ಹಣದಿಂದ ಆರೋಗ್ಯವನ್ನು ಕೊಳ್ಳಬೇಕಾದ ಸ್ಥಿತಿ ಬಂದಿದೆ. ಎಂದರೆ "ಆರೋಗ್ಯವೇ ಭಾಗ್ಯ" ಎಂಬ ಅಂದಿನ ಮಾತು "ಭಾಗ್ಯವೇ ಆರೋಗ್ಯ" ಎಂದು ಬದಲಾಗಿದೆ.

ಆರೋಗ್ಯ ಭಾಗ್ಯ ಸದಾ ನಮ್ಮದಾಗಬೇಕಾದರೆ ನಾವು ನಿಸರ್ಗಕ್ಕೆ ಹತ್ತಿರವಾಗಬೇಕು. ಆಧುನಿಕತೆಯನ್ನು ಅಂಕೆಯಲ್ಲಿಡಬೇಕು. ಯೋಚನೆಯಲ್ಲಿ, ಯೋಜನೆಯಲ್ಲಿ ಸರಳರಾಗಬೇಕು. ಚಿಂತನೆಯಲ್ಲಿ ಗಹನರಾಗಬೇಕು. ಇಂಥ ಚಿಂತನೆ ನಮ್ಮ ಕುಟುಂಬದೊಳಗೆ ಬರಬೇಕು. ಈಗ ನಮ್ಮ ಕುಟುಂಬ ಯಾವುದು, ಆರೋಗ್ಯ ಪಾಲನೆಯಲ್ಲಿ ಕುಟುಂಬದ ಪಾತ್ರ ಏನು ಎಂದು ತಿಳಿಯೋಣ. ಜ್ಞಾನಿಗಳಿಗೆ ಜಗತ್ತೇ ಕುಟುಂಬ. ಅವರಿಗೆ ಎಲ್ಲದರ ಬಗ್ಗೆ, ಎಲ್ಲರ ಬಗ್ಗೆ ಕುತೂಹಲವಿದೆ, ಅನುಕಂಪವಿದೆ. ಸಾಧಿಸುವ ಸಾಮರ್ಥ್ಯವಿದೆ. ಆದರೆ ನಾವು ನೀವು ನಮ್ಮ ಮನೆಗಳಿಂದ ಪ್ರಾರಂಭಿಸೋಣ. ತಂದೆ, ತಾಯಿ, ಗಂಡ, ಹೆಂಡತಿ, ಮಕ್ಕಳು ಇಂಥ ಒಂದೊಂದು ಸಂಸಾರದಲ್ಲೂ ಪರಿವರ್ತನೆಯ ಗಾಳಿ ಬೀಸಬೇಕು. ನಮ್ಮ ವಿಚಿತ್ರ ಚಿಂತನೆ ಹೇಗೆ ಸಾಗುತ್ತದೆಂದರೆ—"ನಾನೊಬ್ಬ ಬದಲಾಗುವುದರಿಂದ ಪ್ರಪಂಚವೇನೂ ಬದಲಾಗುವುದಿಲ್ಲ. ಪ್ರಪಂಚ ಬದಲಾದಾಗ ನಾನೂ ಬದಲಾಗುತ್ತೇನೆ" ಆದರೆ ವಾಸ್ತವ ಹೇಗಿದೆ ಎಂದರೆ ಒಬ್ಬೊಬ್ಬರೇ ಬದಲಾಗಿ ಪ್ರಪಂಚ ಬದಲಾಗುತ್ತದೆ. ಹಾಗಾಗಿ ಬದಲಾವಣೆಯ ಮೊದಲ ಕಿಡಿ ನಾವಾಗಬೇಕು. ಪ್ರಪಂಚವನ್ನು ಒವ್ಮೆಲೇ ಬೆಳಗುವ ಜ್ಞಾನ ದೀವಳಿಗೆ ನಾವಲ್ಲವಾಗಿರಬಹುದು. ಆದರೆ ಒಬ್ಬಿಬ್ಬರನ್ನು ಪ್ರಕಾಶಿಸುವ ಹಣತೆ ನಾವಾಗಬಹುದು. ಇಂಥ ಚಿಂತನೆಗಳನ್ನು ಕುಟುಂಬದೊಳಗೆ ತುಂಬಿ ಮಾನಸಿಕ ಆರೋಗ್ಯವನ್ನು ಉತ್ಕರ್ಷಿಸುವುದು ಕುಟುಂಬಿಯ ಹೊಣೆ ಹಾಗೂ ಕರ್ತವ್ಯ.

ಯಾವುದೇ ಆದರ್ಶವನ್ನು ಒಂದೇ ನೆಗೆತಕ್ಕೆ ಏದಲು ಬರುವುದಿಲ್ಲ ಹಾಗೂ ಅವಕ್ಕೆ ವಕ್ರದಾರಿಗಳೂ ಇಲ್ಲ. ಕಠಿಣ ತಪೋಸದೃಶ ದುಡಿಮೆಯೇ ಸದ್ಗುರಿಯನ್ನು ಸೇರುವ ಸಾಧನವಾಗಿದೆ. "ಕುಂಬಾರನಿಗೆ ವರ್ಷ ದೊಣ್ಣೆಗೆ ನಿಮಿಷ" ಗಾದೆ ನಮಗೆ

ಹೊಸದಲ್ಲ. ಇಲ್ಲಿರುವ ಮಥಿತಾರ್ಥವನ್ನು ಸ್ವಲ್ಪ ವಿವೇಚಿಸೋಣ. ಕಟ್ಟುವ ಕ್ರಿಯೆ ಕಷ್ಟ, ನಿಧಾನ. ಆದರೆ ಒಡೆಯುವ ಕ್ರಿಯೆ ಸುಲಭ, ನಿಮಿಷ ಮಾತ್ರ. ಎಲ್ಲ ಮನಸಿನ ಆರೋಗ್ಯದ ಮೂಲ ಆದರ್ಶದೆಡೆಗಿನ ಗಮನದಲ್ಲಿದೆ. ಗಮನಕ್ಕೆ ಎರಡು ಅರ್ಥಗಳಿವೆ. ಒಂದು ಆ ಕುರಿತು ಚಿಂತನೆ. ಇನ್ನೊಂದು ಆ ಎಡೆಗೆ ಪಯಣ. ಹಾಗಾಗಿ ಸಕಲ ಆರೋಗ್ಯಗಳಿಗೆ ಮೂಲವಾದ ನಿಷ್ಕಲ್ಮಷ ಮನಸ್ಸುಗಳನ್ನು ಕಟ್ಟುವ ಕಷ್ಟದ ಕ್ರಿಯೆ ಮನೆ ಮನೆಗಳಲ್ಲೂ ಪ್ರಾರಂಭವಾಗಬೇಕು.

ಗಾಂಧಿ ತಾತನ ಆಶ್ರಮದಲ್ಲಿ
ಇದ್ದವು ಮೂರು ಕೋತಿಗಳು
ನೀತಿಯ ಸಾರುವ ಕೋತಿಗಳು

ಆ ನೀತಿ ಏನು ?—ಕೆಟ್ಟದ್ದನ್ನು ನೋಡಬೇಡ, ಕೇಳಬೇಡ, ಹೇಳಬೇಡ. ಕೆಟ್ಟದು ಯಾವುದು ಎಂಬುದನ್ನು ಬಸವಣ್ಣನವರು ಬಹಳ ಸುಲಭವಾಗಿ ಹೇಳಿದ್ದಾರೆ. “ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ, ಅನ್ಯರಿಗೆ ಅಸಹ್ಯ ಪಡಬೇಡ ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ” ಇದು ಶಾಲೆಗಳಲ್ಲಿ ಹತ್ತು ಅಂಕ ಪಡೆಯಲು ಕಂಠಪಾಠವಾಗುವ ಕಸರತ್ತು ತಪ್ಪಿ ಮನೆ ಮನೆಯ ಮೂಲ ಪಾಠವಾಗಬೇಕು. ಇಷ್ಟು ಹೇಳುವಾಗ ಬುದ್ಧನ ಮಾತು ನೆನಪಾಗದಿರಲು ಸಾಧ್ಯವೇ ?—ಈ ಎಲ್ಲ ಬೇಡಗಳನ್ನು ಮಾಡಿಸುವ ಮರ್ಕಟ “ಆಸೆ”. ಹಾಗಾಗಿ ಆಸೆಯೇ ದುಃಖದ ಮೂಲ. ಮೇಲೆ ಹೇಳಿದ ಬೇಡಗಳನ್ನು ಮಾಡದಿರಬೇಕಾದರೆ ನಮ್ಮ ಬೇಕುಗಳು ಕಡಿಮೆಯಾಗಬೇಕು. ಮನುಷ್ಯನಿಗೆ ಹೋಲಿಸಿದರೆ ಅತ್ಯಂತ ಆರೋಗ್ಯಕರವಾಗಿರುವ ಪ್ರಾಣಿಗೇಗಿಲ್ಲದ ಮನಸ್ಸನ್ನು ನಿರಾಸೆಗೊಳಿಸುವುದು ಅಷ್ಟೊಂದು ಸುಲಭದ ಮಾತೇನೂ ಅಲ್ಲ. ಹಾಗೆಂದು ಮನಸ್ಸನ್ನು ತೃಪ್ತಿಪಡಿಸಿದಷ್ಟೂ ಅತೃಪ್ತಿಯ ಹೊಗೆ ಹೆಚ್ಚೇ ಆಗುತ್ತದೆಂಬುದೂ ನಮಗೆ ಗೊತ್ತಾಗಬೇಕು. ಈ ರೀತಿಯ ವಿಚಾರ ತರಂಗಗಳು, ವಿಮರ್ಶೆಯ ಅಲೆಗಳು ಕುಟುಂಬದೊಳಗೆ ಏಳಬೇಕಾದದ್ದು ಅತ್ಯಂತ ಅಪೇಕ್ಷಣೀಯ.

ಎಂದರೆ ಕುಟುಂಬದ ಸದಸ್ಯರೊಳಗೆ ವೈಚಾರಿಕ ಸಂಘರ್ಷ ನಡೆಯಬೇಕು. ಯಾವುದೇ ಒಳಿತು ಕೆಡಕುಗಳ ಬಗ್ಗೆ, ಕೆಲಸ ಕಾರ್ಯಗಳ ಬಗ್ಗೆ ಮನೆಮಂದಿ ಒಟ್ಟಾಗಿ ಚರ್ಚಿಸಬೇಕು. ಹಲವೊಂದು ಮನೆಗಳಲ್ಲಿ ತಂದೆ, ತಾಯಿ ಮತ್ತು ಮಕ್ಕಳ ನಡುವೆ ಇಂಥ ಪಾಲುಗಾರಿಕೆಯ ತೀವ್ರ ಕೊರತೆ ಇರುತ್ತದೆ. ತಂದೆ, ತಾಯಿಗಳು ಕೇವಲ ಹಣ ಕೊಡುವ ಬ್ಯಾಂಕ್ ಆಗಿರುತ್ತಾರೆ. ಹಿರಿಯರು ಗುಟ್ಟಾಗಿ ಅವರ ವ್ಯವಹಾರ ಮಾಡುತ್ತಿರುತ್ತಾರೆ. ಕಿರಿಯರು ಅಷ್ಟೇ ಗುಟ್ಟಾಗಿ ತಮ್ಮ ವ್ಯವಹಾರ ಮಾಡುತ್ತಿರುತ್ತಾರೆ. ಇಂಥ ಅವಸ್ಥೆ (case)ಗಳೆಲ್ಲಾ ಒಡೆದ ಕನ್ನಡಿಗಳಾಗಿರುತ್ತವೆ. ತಾವು ಕೆಟ್ಟದ್ದರ ಜೊತೆಗೆ ಸಂಪರ್ಕಕ್ಕೆ ಬಂದ ಪರಿಸರ ಹತ್ತು ಹಲವರಿಗೆ ತಾಗಿ ಘಾಸಿಗೊಳಿಸಿ ಆರೋಗ್ಯ ಕೆಡಿಸುತ್ತವೆ.

ಯಾವುದೇ ಮಗು ಮೂಲತಃ ಕೆಟ್ಟದೂ ಅಲ್ಲ, ಒಳ್ಳೇದೂ ಅಲ್ಲ. ಬೆಳೆದ ಪರಿಸರ, ಸಿಕ್ಕಿದ ಸಂಸ್ಕಾರಕ್ಕೆ ತಕ್ಕನಾಗಿ ಅದು ರೂಪುಗೊಳ್ಳುತ್ತದೆ. ಮಕ್ಕಳ ಮನಸ್ಸು ಹಸಿಮಣ್ಣಿನ ಗೋಡೆಯಹಾಗೆ. ಅದು ಹತ್ತಿರ ಹಾಗೂ ದೂರದಿಂದ ಹೊಡೆದ ಒಂದೊಂದೂ ಕಲ್ಲುಗಳನ್ನು ಪ್ರೀತಿಯಿಂದ

ಸ್ವೀಕರಿಸುತ್ತದೆ. ಕಲಾಕಾರನ ಕೈಯಲ್ಲಿ ಈ ಗೋಡೆಯ ಮೇಲಿನ ಕಲ್ಲುಗಳು ಸೌಂದರ್ಯವನ್ನು ಪಡೆದು ವಿರಾಜಿಸುತ್ತವೆ. ಅದೇ ಕಲಾಹೀನನ ಕಲ್ಲುಗಳು ಗೋಡೆಯನ್ನು ವಿಕಾರಗೊಳಿಸುತ್ತವೆ. ನಮ್ಮ ಮಕ್ಕಳ ಮನಸ್ಸುಗಳನ್ನು ಸುಂದರ ಕಲಾಕೃತಿಯನ್ನಾಗಿಸುವ ಅವಕಾಶ ಮತ್ತು ಜವಾಬ್ದಾರಿ ನಮ್ಮದೇ ಆಗಿದೆ. ಇಲ್ಲಿ ನಮ್ಮ ಭವ್ಯ ಪುರಾಣ ಮತ್ತು ಚರಿತ್ರೆಗಳ ಪಾತ್ರ ಅಗಾಧವಾಗಿದೆ. ಇವುಗಳಲ್ಲಿ ಬರುವ ಧೀರರ, ವೀರರ, ಸತ್ಯಸಂಧರ, ಸದ್ಗುಣಿಗಳ ಕಥೆಗಳೆಂಬ ಸಾಲಿಗ್ರಾಮಗಳನ್ನು ನಮ್ಮ ಮಕ್ಕಳ ಮನೋಮಂಟಪದಲ್ಲಿ ಜೋಡಿಸಬೇಕು. ವಿದ್ಯೆಯ ಮೊದಲ ಲಕ್ಷಣವಾದ ವಿನಯವನ್ನು ತುಂಬಿಸಬೇಕು.

ಆಡಬಾರದು ಪಗಡೆ
ಮುಟ್ಟಬಾರದು ಇಸ್ಪೀಟು
ಆಡಿದರೆ ಆಡಬಹುದು
ಒಂದಾಟ ಚದುರಂಗ

ಹೆಚ್ಚಾದರೆ ಚದುರಂಗವೂ ಅಪಾಯಕಾರಿ ಎಂದು ಹಿರಿಯರು ಎಚ್ಚರಿಸಿ ಹೊಡೆದ ಕಲ್ಲು ನನ್ನ ಮನದಂಗಳದಲ್ಲಿ ಇಂದೂ ದೃಢವಾಗಿದೆ. ಇದಕ್ಕೆ ಇಂದಿನ ಕಾಲಕ್ಕೆ ತಕ್ಕನಾಗಿ ನಾನೊಂದು ಚರಣ ಸೇರಿಸಲು ಬಯಸುತ್ತೇನೆ.

"ನೋಡಬಾರದು ಟಿ. ವಿ"

"ಮಾನಸಿಕ ಆರೋಗ್ಯ"ದ ಬಗ್ಗೆ ನನ್ನ ನಿಲುವು ನಿಮಗೂ ಖಚಿತವಾಗಿದೆಯೆಂದು ಭಾವಿಸುತ್ತೇನೆ. ಮಂಕು, ಹುಚ್ಚು ಮುಂತಾಗಿ ಆಸ್ಪತ್ರೆಗೆ ಸೇರಿಸುವ ಸಂದರ್ಭಗಳು ಮಾತ್ರ ಅನಾರೋಗ್ಯಕರವಲ್ಲ. ಕೆಟ್ಟ ಆಸಕ್ತಿಗಳನ್ನು ಹೊಂದಿರುವ ಒಂದೊಂದು ಮನಸ್ಸೂ ಅನಾರೋಗ್ಯಕರವೇ. ಕೆಟ್ಟ ಆಸಕ್ತಿಗಳು ಹೇಗೆ ದೈಹಿಕ ಅನಾರೋಗ್ಯಕ್ಕೆ ಕಾರಣವಾಗುತ್ತವೆ ಎಂಬುದನ್ನು ಈಗ ನೋಡೋಣ.

ಸಕಾಲಿಕ ಆಹಾರ, ವಿಹಾರ, ನಿದ್ರೆ, ಮೈಥುನಗಳು ದೈಹಿಕ ಆರೋಗ್ಯದ ಗುಟ್ಟು ಎಂಬುವನ್ನು ಎಲ್ಲ ಸ್ವಚ್ಛ ಮನಸ್ಕರೂ ಒಪ್ಪುತ್ತಾರೆ. ಯಾರು ಒಪ್ಪಲಿ ಬಿಡಲಿ, ಮೇಲಿನವು ಕ್ರಮ ತಪ್ಪಿದಾಗ ದೇಹ ಬಳಲುವುದಂತೂ ನಿರ್ವಿವಾದ. ಇಸ್ಪೀಟು, ಕುಡಿತ ಇತ್ಯಾದಿ ಚಟಗಳು, ವ್ಯಸನಗಳು ಇಂದು ಕುಲೀನತೆಯ (Gentlemanly) ಸಂಕೇತಗಳಾಗಿವೆ. ಚಟಗಳು ಎಂದೂ ಒಂದಾಗಿ ಇರುವುದಿಲ್ಲ. ಅವೆಲ್ಲಾ ಅಣ್ಣತಮ್ಮಂದಿರು. ಒಂದಕ್ಕೊಂದು ಬಹಳವಾಗಿ ಹೊಂದಿಕೊಂಡು ಬರುತ್ತವೆ ಬದುಕುತ್ತಿವೆ. ಇವು ನಮ್ಮ ವೈಚಾರಿಕತೆಯನ್ನು, ಬುದ್ಧಿವಂತಿಕೆಯನ್ನು, ಕೆಲಸಮಾಡುವ ಸಾಮರ್ಥ್ಯವನ್ನು ಹರಣಮಾಡುವುದರ ಜೊತೆಗೆ ಕ್ರಮತಪ್ಪಿದ ಆಹಾರ, ವಿಹಾರಗಳಿಗೆ ಕಾರಣವಾಗುತ್ತವೆ.

ಎಲ್ಲ ಅಕ್ರಮಗಳೂ ಜೀರ್ಣಾಂಗವನ್ನು ಕೆಡಿಸುತ್ತವೆ. ಅಜೀರ್ಣ, ಅರುಚಿ, ಮಲಬದ್ಧತೆ, ಗ್ಯಾಸು, ಎದೆಸೆಳೆತ, ತಲೆನೋವು ಹೀಗೆ ಒಂದೊಂದು ಲಕ್ಷಣಗಳು ಪ್ರಾರಂಭವಾಗುತ್ತವೆ. ಹೆಚ್ಚಿನ ಖಾಯಿಲೆಗಳ ಮೂಲ ಹೊಟ್ಟೆಯೆ. ಹಾಗಾಗಿ ಹೊಟ್ಟೆಯನ್ನು ಅತ್ಯಂತ ವಿವೇಚನೆಯಿಂದ ನೋಡಿಕೊಳ್ಳಬೇಕಾಗುತ್ತದೆ. ಒಳ್ಳೆಯ ಆಹಾರವನ್ನು ತಿನ್ನುವುದು ಮಾತ್ರವೇ ಮುಖ್ಯವಲ್ಲ. ಕನಿಷ್ಠ ಆರುಗಂಟೆ ಅಂತರವಿರುವಂತೆ ಸಕಾಲ

ದಲ್ಲಿ ತಿನ್ನುವುದು, ಅವಸರವಿಲ್ಲದೆ, ಉದ್ವೇಗವಿಲ್ಲದೆ ತಿನ್ನುವುದೂ ಅತ್ಯಂತ ಮುಖ್ಯವಾಗಿದೆ. ಹಾಗೂ ಅತಿಯಾಗಿ ತಿನ್ನದಿರುವುದು ಕೂಡ ಅಷ್ಟೇ ಮುಖ್ಯವಾಗಿದೆ. ಅತಿಯಾದಾಗ ಅಮೃತವೂ ವಿಷವಾಗುತ್ತದೆ. ಇನ್ನು ಬರುವುದು ವ್ಯಂಜನಗಳ ಸರದಿ— ಉಪ್ಪು, ಹುಳಿ, ಸಿಹಿ, ಖಾರ, ಎಣ್ಣೆ ಕರಿದ ಪದಾರ್ಥಗಳು. ಇವುಗಳು ಸ್ವಯಂ ದೋಷಪೂರಿತವಾಗಿರುವುದಕ್ಕಿಂತ ಹೆಚ್ಚಾಗಿ ನಮ್ಮನ್ನು ಅಕಾಲದಲ್ಲಿ ಅತಿಯಾಗಿ ತಿನ್ನುವಂತೆ ಪ್ರೇರೇಪಿಸುತ್ತವೆ. ಇವುಗಳ ನಿಯಂತ್ರಣ ನಮ್ಮ ಆರೋಗ್ಯ ಸಾಧನೆಯಲ್ಲಿ ಮಹತ್ವದ ಹೆಜ್ಜೆ. ಹಾಗಾಗಿ ರಾತ್ರಿಕಾಲದಲ್ಲಿ ಊಟದ ಬದಲು ವ್ಯಂಜನಗಳಿಲ್ಲದ ಹಸಿತರಕಾರಿ, ಮೊಳಕೆಕಾಳು, ಹಣ್ಣುಗಳ ಮಿತಾಹಾರ ಹಿತಕರವೆಂದು ನಿಸರ್ಗ ಚಿಕಿತ್ಸಕರು ನಿರ್ವಿವಾದವಾಗಿ ಪ್ರತಿಪಾದಿಸುತ್ತಾರೆ.

ಅಬ್ಬಾ ಎಷ್ಟೊಂದು ಹೋಟೆಲುಗಳು! ಹಳ್ಳಿಹಳ್ಳಿಗಳಲ್ಲಿ, ಗಲ್ಲಿಗಲ್ಲಿಗಳಲ್ಲಿ, ದಾರಿಕರೆಗಳಲ್ಲಿ, ಚರಂಡಿಯ ಕಲ್ಲುಗಳಲ್ಲಿ. ಹಾಗಾದರೆ ಸಂಸಾರಿಗರಾದ ನಾವು ಮಾಡುವುದೇನು? ನಮಗೇನು ಕೆಲಸ? ನಮ್ಮ ಹೊಟ್ಟೆಗೆ ಬೇಕಾದಷ್ಟು ಅನ್ನ ತಿಂಡಿ ಮಾಡಿಕೊಳ್ಳಲಾರದಷ್ಟು ನಮಗೆ ಸಮಯದ ಅಭಾವವೇ? ಶಕ್ತಿಯ ಕೊರತೆಯೇ? ತಂತ್ರಜ್ಞತೆಯ ತೊಡಕೇ? ಅನಿವಾರ್ಯವಾಗಿ ಪ್ರಯಾಣ ಕಾಲದಲ್ಲಿ ಹೋಟೆಲು ಬೇಕಾಗಬಹುದು. ಆದರೆ ಇಂದು ಶೇಕಡಾ ೯೦ ಹೋಟೆಲುಗಳು ಚಪಲಕ್ಕಾಗಿ ಬೇಕಾಗಿರುವುದು. ಕೆಟ್ಟ ಆಹಾರವನ್ನು ಕೆಟ್ಟಕಾಲದಲ್ಲಿ ತಿನ್ನುತ್ತಿದ್ದರೆ ಯಾವ ಔಷಧಿಗಳೂ ನಮ್ಮ ಆರೋಗ್ಯವನ್ನು ಕಾಪಾಡಲಾರವು.

ಇಂದು ನಾವು ಹೆಚ್ಚು ದುಡ್ಡು ಕೊಟ್ಟು ಶ್ರೇಷ್ಠ ಆಹಾರವೆಂದು ವಿಷಾಹಾರವನ್ನು ತಿನ್ನುತ್ತಿದ್ದೇವೆ ಎಂಬುದು ನಿಮಗೆ ಗೊತ್ತೇ? ಆ್ಯಪಲ್, ದ್ರಾಕ್ಷಿ, ಕ್ಯಾಬೇಜ್, ಕಾಲಿಫ್ಲವರ್‌ಗಳನ್ನು ತಿನ್ನುವುದೂ ನೇರ ಒಂದೊಂದು ಚಿಟಿಕೆ ಡಿ.ಟಿ.ಟಿ. ಯನ್ನು ಬಾಯಿಗೆ ಹಾಕುವುದೂ ಒಂದೇ. ಗಿಡ ನೆಟ್ಟಂದಿನಿಂದ ಹಣ್ಣು ಕಾಯಿ ಕೊಯ್ಯುವವರೆಗೆ ವಾರಕ್ಕೆ ಒಂದು, ಎರಡು, ಮೂರು ಸಲ ಹತ್ತು ಹಲವು ವಿಷಗಳಲ್ಲಿ ಮುಳುಗಿ ಎದ್ದು ಇವು ನಿಮ್ಮ ಬಟ್ಟಲಿಗೆ ಬರುತ್ತವೆ. ಸತ್ವವಾಗಲೀ, ಆರೋಗ್ಯವಾಗಲಿ ಆ್ಯಪಲ್‌ನ ಬಣ್ಣದಲ್ಲಿಲ್ಲ ಎಂಬುದು ನಮಗೆ ತಿಳಿಯಬೇಕು. ಸತ್ವದ ಲೆಕ್ಕಾಚಾರದಂತೆ, ಹಣ್ಣುಗಳಲ್ಲೆಲ್ಲಾ ಅತ್ಯಂತ ಕೆಳಮಟ್ಟದಲ್ಲಿ ನಿಲ್ಲುವ, ಹಣ್ಣೇ ಅಲ್ಲದ ಆ್ಯಪಲನ್ನು ನೀವು ತಿನ್ನುವ ಕಾಲಕ್ಕೆ ಅದನ್ನು ಕೊಯ್ದು ಐದಾರು ತಿಂಗಳುಗಳಾಗಿರಬಹುದು. ಮೇಣ ಸವರಿ ಶೀತಲದಲ್ಲಿಟ್ಟು ನಿಮ್ಮ ಬುದ್ಧಿಯನ್ನು ಮಂಕುಗೊಳಿಸುವ ಆ್ಯಪಲಿಗೆ ಬದಲಿ ಏನೆಂದು ಕೇಳುವಿರೇ?

"ಮನುಷ್ಯನ ಎಲ್ಲ ಆವಶ್ಯಕತೆಗಳನ್ನು ಪೂರೈಸಲು ಈ ಭೂಮಿಗೆ ಶಕ್ತಿ ಇದೆ. ಆದರೆ ಅವನ ದುರಾಸೆಗಳನ್ನಲ್ಲ" ಎಂದು ಗಾಂಧೀಜಿ ಆಡಿರುವ ಮಾತು ಎಷ್ಟೊಂದು ಮಾರ್ಮಿಕ. ನಮ್ಮ ಪರಿಸರದಲ್ಲಿ ನಮಗೆ ಬೇಕಾದ, ನಮ್ಮ ಆರೋಗ್ಯ ಕಾಪಾಡಬಲ್ಲ, ಎಲ್ಲಾ ರೀತಿಯ ಹಣ್ಣು, ತರಕಾರಿಗಳು, ಕಾಲಕಾಲಕ್ಕೆ ಬೆಳೆಯುತ್ತವೆ. ಅವುಗಳನ್ನು ಉಪಯೋಗಿಸಲು ನಾವು ಕಲಿಯಬೇಕು. ಹತ್ತು ಹಲವು ರೀತಿಯ ದಂಟಿನ ಸೊಪ್ಪುಗಳು, ಗೆಡ್ಡೆಗಳು ನಮ್ಮ ಸುತ್ತೆಲ್ಲಾ ಬೇಡ

ವೆಂದರೂ ಬೆಳೆಯುತ್ತವೆ. ವರ್ಷ ಪೂರ್ತಿ ಒಂದಿಲ್ಲೊಂದು ಬೆಳೆಯುತ್ತವೆ. ಕ್ಯಾಬೇಜಿನ ಎಲೆಗಳಿಗಿಂತ ಎಲ್ಲ ರೀತಿಯಲ್ಲೂ ಶ್ರೇಷ್ಠ ವಾದ ಈ ಎಲೆಗಳನ್ನು ಗುರುತಿಸಿ ಉಪ ಯೋಗಿಸಲು ಕಲಿಯೋಣ. ಸಿಮ್ಲಾದ ಆ್ಯಪಲ್ ರೈತರಿಗೆ (ವ್ಯಾಪಾರಿಗಳಿಗೆ) ದುಬಾರಿ ಬೆಲೆ ಕೊಡುವ ಬದಲು ನಮ್ಮ ಬಾಳೆ, ಸೀಬೆ, ಹಲಸುಗಳ ರೈತರಿಗೆ ಲಾಭ ದಾಯಕ ಬೆಲೆ ಕೊಡುವ ಪ್ರವೃತ್ತಿ ಬೆಳೆ ಸೋಣ. ಕೃತಕ ಊಟನೆ ಇಲ್ಲದೆ ನೈಸರ್ಗಿಕ ವಾಗಿ ಆಯಾ ದೇಶ ಕಾಲಗಳಲ್ಲಿ ಬೆಳೆಯುವ ಆಹಾರ ಪದಾರ್ಥಗಳನ್ನು ತಿನ್ನುವುದರಲ್ಲೇ ನಿಜವಾದ ಆರೋಗ್ಯವಿದೆ.

ನಾವು ನಮ್ಮ ಕಾರಿಗೆ ಪೆಟ್ರೋಲು ಹಾಕುತ್ತೇವೆ. ಇಲ್ಲಿ ಉದ್ದೇಶವಿದೆ. ಈ ಪೆಟ್ರೋಲನ್ನು ಉಪಯೋಗಿಸಿ ನಮ್ಮ ಕಾರು ಓಡಬೇಕು. ಹಾಗೆಯೇ ಪ್ರಕೃತಿ ಆಹಾರವನ್ನು ಉತ್ಪಾದಿಸಿ ನಮಗೆಲ್ಲಾ ತಿನ್ನಿಸುವುದರ ಹಿಂದೆಯೂ ಉದ್ದೇಶ ಇದೆ. ನಾವು ತಿಂದುದಕ್ಕೆ ಸಮವಾಗಿ ಕೆಲಸ ಮಾಡಬೇಕು. ಇಂದು ಬಹಳಷ್ಟು ಭಾಗ್ಯ ವಂತರು ತಿನ್ನುವುದು ಮಾತ್ರವಾಗಿದೆ. ವ್ಯಾಯಾಮ ಎಂಬುದು ಇಲ್ಲವೇ ಇಲ್ಲ. ಎಲ್ಲ ವ್ಯಾಯಾಮಗಳೂ ಕಾರಿನಲ್ಲೇ. ನಾವೆಲ್ಲರೂ ಬುದ್ಧಿವಂತರು. ಬುದ್ಧಿವಂತಿಕೆಯ ಕೆಲಸ ಗಳನ್ನೇ ಮಾಡುವವರು. ನಾವು ತಿಂದ ಆಹಾರ ಜೀರ್ಣವಾಗುವಷ್ಟಾದರೂ ಕೆಲಸ ಮಾಡಬೇಕೆಂಬ ಬುದ್ಧಿವಂತಿಕೆ ನಮಗೆ ಬರುವವರೆಗೆ ನಮ್ಮ ಆರೋಗ್ಯ ಭಾಗ್ಯ ಕನಸಿನ ಗಂಟಾಗಿ ಮಾತ್ರ ಉಳಿದೀತು. ನಮ್ಮ ತಟ್ಟೆ ಬಟ್ಟೆಗಳನ್ನು ನಾವೇ ತೊಳೆಯುವಷ್ಟಾದರೂ ಸ್ವಾವಲಂಬಿಗಳಾಗ ಬಿದ್ದರೆ, ನೆರೆಮನೆಗೆ ನಡೆಯುವಷ್ಟಾದರೂ ನಮ್ಮ ಕಾಲುಗಳಿಗೆ ಕೆಲಸ ಕೊಡದಿದ್ದರೆ, ಮಣ್ಣು, ಮರಗಳನ್ನು ಎಂದೂ ಮುಟ್ಟದ ಮಡಿವಂತಿಕೆ ನಮ್ಮದಾದರೆ, ನಮಗೆ ಎಲರ್ಜಿ ಆಗದಿರುವ ಯಾವುದೂ ಈ ಪ್ರಪಂಚದಲ್ಲಿ ಇರಲಾರದು.

ಯಾವುದೇ ವೈದ್ಯ ಪದ್ಧತಿಗಳಿಂದ ಗುಣ ವಾಗದ ತಲೆನೋವು, ಎದೆನೋವು, ಶೀತ, ಉಬ್ಬಸ, ಚರ್ಮರೋಗಾದಿಗಳು ವ್ಯಾಯಾಮ, ಯೋಗಾಸನ, ಹಿತಮಿತ ವಾದ ಸಾತ್ವಿಕ ಆಹಾರಕ್ರಮಗಳಿಂದ ಶಾಶ್ವತವಾಗಿ ಗುಣವಾದ ಸಾವಿರ ಉದಾ ಹರಣೆಗಳು ನಮ್ಮ ಕುಟುಂಬಗಳಿಗೆ ಪಾಠ ವಾಗಬೇಕು.

ರಾತ್ರಿ ಬೇಗ ಮಲಗಿ, ಬೆಳಿಗ್ಗೆ ಬೇಗ ಏಳುವುದು ಅತ್ಯಂತ ಆರೋಗ್ಯಕರವಾಗಿದೆ. ಉಷಾಪಾನ, ಸ್ನಾನ, ಯಾನಗಳೂ ಅತ್ಯಂತ ಶ್ರೇಯಸ್ಕರಗಳಾಗಿವೆ. ಎದ್ದ ಕೂಡಲೇ ಒಂದೂಕಾಲು ಲೀಟರು ನೀರು ಕುಡಿಯುವುದರಿಂದ (ಜಲಚಿಕಿತ್ಸೆ) ಹಲವು ದೀರ್ಘಕಾಲೀನ ರೋಗಗಳು ಗುಣವಾದ ನಿದರ್ಶನಗಳುಂಟು? ಕಷ್ಟವಾದರೆ ಕೊನೇ ಪಕ್ಷ ಕಾಲುಲೀಟರ್ ನೀರಾದರೂ ಕುಡಿಯು ವುದರಿಂದ ಸಾಮಾನ್ಯವಾಗಿ ಹೆಂಗಸರಿಗೆ ಆಗಾಗ ಬರುವ ಉರಿಮೂತ್ರದ ಸಮಸ್ಯೆ ಇಲ್ಲವಾಗುತ್ತದೆ, ಮಲಬದ್ಧತೆ ದೂರ ವಾಗುತ್ತದೆ.

ಏಕಪತ್ನೀವ್ರತದ ಶ್ರೇಷ್ಠತೆಯ ಬಗ್ಗೆ ವಿವರಿಸಿ ಹೇಳುವ ಅಗತ್ಯವಿಲ್ಲ. ಎಲ್ಲ ಲೈಂಗಿಕ ರೋಗಗಳಿಂದ ಏಡ್ಸ್‌ವರೆಗಿನ ಭಯಾನಕ ಪೀಡೆಗಳಿಗೆ ಅತ್ಯಂತ ಯುಕ್ತ ಔಷಧಿ ರಾಮ ನಾಗುವುದು, ರಾವಣನಾಗದಿರುವುದು.

"ಊಟ ಬಲ್ಲವನಿಗೆ ರೋಗವಿಲ್ಲ-
ಮಾತು ಬಲ್ಲವನಿಗೆ ಜಗಳವಿಲ್ಲ"
"ಉಪ್ಪು ತಿಂದವ ನೀರು ಕುಡಿದಾನು"
"ಲಂಘನಂ ಪರಮೌಷಧಂ"

ಮುಂತಾದ ನಾಣ್ಣುಡಿಗಳು ಯುಗಾಂತರ ಅನುಭವಸಾರವಾಗಿವೆ. ಪ್ರಕೃತಿ ವಿರೋಧಿ ಜೀವನ ಕ್ರಮಗಳಿಂದ ಬರುತ್ತಿರುವ ಖಾಯಿಲೆಗಳಿಗೆ ವೈದ್ಯರನ್ನು ಕಾಣುವುದರಿಂದ ಅವರಿಗೆ ದಾನಮಾಡಿದ ಪುಣ್ಯ ಬಂದೀತೇ ಹೊರತು ನಮ್ಮ ಆರೋಗ್ಯ ಭಾಗ್ಯ ವೃದ್ಧಿಸಲಾರದು. ಒಬ್ಬರು ವೈದ್ಯರೇ ಆಡಿದ ಮಾತು—"ನೀವು ದಿನಾ ನಿಮ್ಮ ಹೆಂಡತಿ, ಮಕ್ಕಳೊಂದಿಗೆ ಹಲವು ಕಾರಣಗಳಿಗಾಗಿ ಜಗಳಾಡುತ್ತೀರಿ. ಆದರೂ ಪ್ರೀತಿಯಿಂದಲೇ ಜೀವನ ಮಾಡುತ್ತೀರಿ. ಹಾಗೆಯೇ ಹಲವು ಸಣ್ಣಪುಟ್ಟ ಖಾಯಿಲೆಗಳನ್ನು ನಿಮ್ಮ ಜೀವನ ಸಂಗಾತಿಗಳೆಂದು ಕಾಣಿರಿ. ಕಾಲವೇ ಅವುಗಳಿಗೆ ಪರಿಹಾರ ಕೊಡುತ್ತದೆ". ಹೌದು ನಮ್ಮ ಮಕ್ಕಳಲ್ಲಿ ನಮಗೆ ಪ್ರೀತಿ ಇರುವಂತೆ ಪ್ರಕೃತಿಗೆ ತನ್ನ ಮಕ್ಕಳಾದ ನಮ್ಮ ಮೇಲೆ ಖಂಡಿತಾ ಪ್ರೀತಿ ಇದೆ. ಈ ಪ್ರೀತಿ, ವಿಶ್ವಾಸ ಆಧುನಿಕತೆಯ ಅತಿ ಪ್ರಹಾರದಲ್ಲಿ ಇಂದು ನಮಗೆ ತಪ್ಪಿ ಹೋಗಿದೆ.

ಭಯಗಳಲ್ಲೆಲ್ಲಾ ಪ್ರಾಣಭಯ ಅತ್ಯಂತ ತೀವ್ರವಾದದ್ದು. ನಮಗೆ ಬರುವ ಶೇಕಡಾ ೯೦ ಕಾಯಿಲೆಗಳಲ್ಲಿ ಪ್ರಾಣಭಯವಿಲ್ಲ. ಕೆಲವು ದಿನ ಕಾಯುವಷ್ಟು ಪುರುಸೊತ್ತು ಇದೆ. ನಮ್ಮ ಪರಿಸರದಲ್ಲಿ ಹೇಗೆ ಆಹಾರವಿದೆಯೋ ಹಾಗೆಯೆ ಔಷಧಿಯೂ ಇದೆ. ಇಂಥ ಸುಲಭ ಔಷಧಿಗಳನ್ನು ಉಪಯೋಗಿಸಿ ಹೆಚ್ಚಿನ ಬೇನೆಗಳನ್ನು ನಿವಾರಿಸಿಕೊಳ್ಳಬಹುದು. ಈ ಔಷಧಿಗಳು ಆಹಾರವೇ ಆಗಿರುವುದರಿಂದ ದೇಹಕ್ಕೆ ದುಷ್ಪರಿಣಾಮಗಳನ್ನೂ ಮಾಡುವುದಿಲ್ಲ. ಹಿಡಿಮು ಮುಟ್ಟಿದ್ದಕ್ಕೆ ಈಗಿನ ಎಲೋಪಥಿ ವೈದ್ಯ ಮಾಡುವುದರಿಂದ ಔಷಧಿ ಜನ್ಯ ಹೊಸ ಕಾಯಿಲೆಗಳು ಬಂದು ಮುಂದೆ ಸಾವೆಂದೂ ಚೈತನ್ಯವುಳ್ಳ ವ್ಯಕ್ತಿಗಳಾಗಿ ಉಳಿಯುವುದಿಲ್ಲ. ಜೀವಚ್ಛವಗಳಾಗಿರುತ್ತೇವೆ. ಅನಿವಾರ್ಯವಾದ ತೀವ್ರತರ ಸಾಂಕ್ರಾಮಿಕ ರೋಗಗಳಲ್ಲಿ ಮಾತ್ರ ವೈದ್ಯರನ್ನು ಕಾಣುವ ವಿವೇಚನೆಯನ್ನು ಬೆಳೆಸೋಣ. ಔಷಧಿಗಳು ನಮ್ಮನ್ನು ರಕ್ಷಿಸುತ್ತವೆ. ಆದರೆ ಇಂದು ಔಷಧಿಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕಾದ ಕಾಲ ಬಂದಿದೆ.

ಹೃದಯಾಘಾತವಾದ (Heart attack) ವ್ಯಕ್ತಿಯೊಬ್ಬ ಪ್ರಖ್ಯಾತ ವೈದ್ಯರನ್ನು ಸಂದರ್ಶಿಸಿದನಂತೆ. ಕೊನೆಯಲ್ಲಿ ವೈದ್ಯರ ಶುಲ್ಕ ಕೇಳಿ ಆತನಿಗೆ ಹೃದಯ ಸ್ಥಂಭನವಾಯಿತಂತೆ (Heart fail) ಈ ಹಳೆ ಹಾಸ್ಯದ ಹೊಸ ವಾಸ್ತವ ನನ್ನ ಅನುಭವಕ್ಕೆ ಬಂತು. ಭಾರೀಯಾದ ಆಸ್ಪತ್ರೆ. ಸಾಲಾಗಿ ಜೋಡಿಸಿದ ಕಂಪ್ಯೂಟರುಗಳಿಂದ ಸಾಲಂಕೃತ ಮಹಿಳಾಮಣಿಗಳು ಕೊಡುವ ಪ್ರವೇಶ ಪತ್ರಗಳೇ ರೋಗಕ್ಕೆ "ತೊಲಗಲು" ಕೊಡುವ ಆದೇಶ ಪತ್ರಗಳೆಂಬ ಭಾವ. ಮುಂದೆ ಭಾರೀಯಾದ ಗಣಪತಿಗುಡಿ-ಭಕ್ತೋದ್ಧಾರಕ. ಎಲ್ಲೆಲ್ಲೂ ವೈದ್ಯರ ತಂಡ. ಅಲ್ಲಲ್ಲಿ ಕಂಪ್ಯೂಟರ್ ಸಜ್ಜಿತ ರೋಗ ಪರೀಕ್ಷಾ ಕೇಂದ್ರಗಳು. ರೋಗಿಗಳು ಆಸ್ಪತ್ರೆಗೆ ಬರುವುದು ನನಗೆ ಗೊತ್ತಿತ್ತು. ಆದರೆ ನಿರೋಗಿಗಳು ಆಸ್ಪತ್ರೆಗೆ ಬರುವ ಹೊಸ ಸಂಪ್ರದಾಯ ನನಗೆ ಹೊಸ

ಅನುಭವ. "Whole Body Periodical Checkup". ಇಲ್ಲದ ರೋಗಗಳನ್ನು ಕಂಪ್ಯೂಟರ್ ಸಹಾಯದಿಂದ ಎಳೆ ಎಳೆಯಾಗಿ ಪರೀಕ್ಷಿಸುವ ವಿಧಾನವಿದು. ಅಲ್ಲಿನ ದುಬಾರಿ ಶುಲ್ಕ ತೆತ್ತು ಏನೂ ಆಗದೆ ತಮ್ಮ ಕಡತಗಳನ್ನು ತಾವೇ ಹಿಡಕೊಂಡು ಕಾರಿನಲ್ಲಿ ಬಂದು ಹೋಗಬೇಕಾದರೆ ನಿಜವಾಗಿಯೂ ಅವರು ಆರೋಗ್ಯವಂತರೇ ಇರಬೇಕು. ನಮ್ಮ ಆರೋಗ್ಯ ಹಣದಲ್ಲಿದೆಯೇ? ಕಂಪ್ಯೂಟರಿನಲ್ಲಿದೆಯೇ? ಸ್ಕ್ಯಾನಿಂಗ್‌ನಲ್ಲಿದೆಯೇ? ವೈದ್ಯರಲ್ಲಿದೆಯೇ? ದೇವರಲ್ಲಿದೆಯೇ?

ನೆನಪಿಡಿ—ನಾವು ಪ್ರಕೃತಿಯ ಆಜ್ಞಾಪಾಲಕರೇ ಹೊರತು ಆಜ್ಞಾಪಕರು ಅಲ್ಲ. ಇದೇ ನಮ್ಮ ಆರೋಗ್ಯದ ಸೂತ್ರ.



ಕ್ಷಾತ್ರತೆಯು ಶರೀರ ಪುಷ್ಟ-ಶಕ್ತಿಗಳಲ್ಲಿಲ್ಲ. ಮನೋನಿರ್ಧಾರ ಧೈರ್ಯಗಳಲ್ಲಿದೆ. ನಿರ್ಭಯವಾದ ಮನಸ್ಸಿನಲ್ಲಿದೆ. ಸಹನತೆ, ಕ್ಷಮೆ, ದಯೆ, ಔದಾರ್ಯ, ಪ್ರೇಮ ಇವು ಕ್ಷಾತ್ರಗುಣದ ಪೋಷಕ ಶಕ್ತಿಗಳು. ತೋಪು ಗುಂಡುಗಳ ಶಕ್ತಿಯಿಲ್ಲದಿದ್ದರೂ ಮೇಲಿನ ಶಕ್ತಿಗಳಿಂದ ವೈರಿಗಳನ್ನು ಗೆಲ್ಲಬಹುದು.

—ಗಾಂಧೀಜಿ

ಹೊನ್ನು, ಹೆಣ್ಣು, ನಿನ್ನನ್ನಗಲಿ ಹೋಗುವವೆಚ್ಚರಿಕೆ, ಮುನ್ನ ಮಾಡಿದ ಪುಣ್ಯ ಬೆನ್ಹತ್ತಿ ಬರುವುದೆಚ್ಚರಿಕೆ. ಚೆನ್ನಾಗಿ ಬದುಕಿದೆ, ಗಳಿಸಿದೆ ನಾನೆಂಬ ಹೆಮ್ಮೆ ಬೇಡೆಚ್ಚರಿಕೆ, ನಿನ್ನಾಯು ಮುಗಿಯಲು ಯಮದೂತರು ಬಂದು ಎಳೆಯುವರೆಚ್ಚರಿಕೆ.

—ಹರಿದಾಸರು

ಮನೆಯೆ ಮೊದಲ ಪಾಠಶಾಲೆ

ಗಂಗಾ ಪಾದೇಕಲ್

ಗೆಳತಿ ಕುಸುಮಳ ಮನೆಗೆ ಹೋಗಿದ್ದೆ. ಅವಳು ಏನೋ ದುಗುಡದಲ್ಲಿದ್ದ ಹಾಗೆ ತೋರಿತಾಗಿ ಕೇಳಿದೆ. 'ಏನು ಕುಸುಮ? ಸಪ್ಪೆಯಾಗಿದ್ದೀ?' ಸಪ್ಪೆಯಾಗದೆ ಏನು ಮಾಡಲಿ?' ಪ್ರಶ್ನೆಗೆ ಪ್ರತಿ ಪ್ರಶ್ನೆ ಎಸೆದ ಅವಳು ನಂತರ ಹೇಳಿದಳು. 'ನಮ್ಮ ರವಿಯ ಬಗ್ಗೆ ಅವನ 'ಮಿಸ್' ವಾರಕ್ಕೆ ನಾಲ್ಕು ಸಲ 'ವಾರ್ನಿಂಗ್' ಮಾಡುತ್ತಾರೆ' ಅದೇಕೆ? ರವಿ ತುಂಬ ಪಾಪದ ಹುಡುಗನಲ್ಲವೆ? ತಂಟಕೋರನಾಗಿದ್ದಿದ್ದರೆ ಅದು ಬೇರೆ ಮಾತು' ನಾನು ಉದ್ಗರಿಸಿದಾಗ ವಿವರಿಸಿದಳಾಕೆ 'ಪಾಪವೆಂದರೆ ಬರೀ ಪಾಪ. ಅದೇ ಬಂದದ್ದು ದೋಷ. ಅಲ್ಲಿ ಏನೇನೂ ಕಲಿಯುತ್ತಿಲ್ಲ ನೋಡು. ಹಾಗಾಗಿ ಯಾವಾಗ ನೋಡಿದರೂ 'ಪನಿಷ್‌ಮೆಂಟ್' ಇವನಿಗೆ. ಸಂಜೆ ಬರುವುದು. 'ಇಂಪೋಸಿಷನ್' ಬರೆಯುವುದು. ಹೀಗಾಗಿ ನಮಗೂ ಸಂಜೆ ಎಲ್ಲಿಗೂ ಹೋಗುವಂತಿಲ್ಲ' ಅವಳ ಸಮಸ್ಯೆ ಅರ್ಥವಾಗಿ ಸಹಾನುಭೂತಿ ಸೂಚಿಸುತ್ತ ನುಡಿದೆ. 'ಅವತ್ತೆಲ್ಲ ಅಷ್ಟು ಚುರುಕಾಗಿದ್ದ. ಈಗೇನಾಯಿತಪ್ಪ ಅವನಿಗೆ? ಆ ದಿನ ಹೇಳಿದ್ದ ನೋಡು? ಆ ನಕ್ಷತ್ರದ ಹಾಡು? ಎಷ್ಟು ಚೆನ್ನಾಗಿತ್ತದು? ನಾವು ಮಾತು ಮುಗಿಸಬೇಕಿದ್ದರೇ ತಾತ್ಸಾರದ ಸ್ವರದಲ್ಲಿ ನುಡಿದಳು ಕುಸುಮ. 'ಅದು' ಕನ್ನಡದ್ದಲ್ಲವೆ? ಯಾರಿಗೆ ಬರುವುದಿಲ್ಲ ಅಂತಹುದು?'

'ಅಂದರೆ?' ನನ್ನ ತಲೆ ಒಳಗೆ ಆಗಷ್ಟೇ ಬೆಳಕು ಮೂಡಿತ್ತು 'ಓ, ಹಾಗಿದ್ದರೆ ಅವನು ಇಂಗ್ಲಿಷ್ ಮಾಧ್ಯಮದಲ್ಲಿ ಓದುತ್ತಿದ್ದಾನೆಯೆ?' ಕೇಳಿದಾಗ 'ಹುಂ' ಗುಟ್ಟಿದ ಅವಳು, ಆಮೇಲೆ ಅಸಹನೆಯ ದನಿ ಎತ್ತಿದಳು 'ಅಲ್ಲಿರುವ ಮಕ್ಕಳೆಲ್ಲ ಎಷ್ಟು ಚೆನ್ನಾಗಿ'ಮೂ'ಆಗುತ್ತಾರೆ ಗೊತ್ತಿದೆಯೇ. ಇಂಗ್ಲಿಷ್ ಮ್ಯೂಸಿಕ್ ಹಾಕಿದಾಗಂತೂ? ಓಹ್, ಎಷ್ಟು ಚಂದಕೆ 'ಡಿಸ್ಕೋ' ಕುಣಿಯುತ್ತವೆ? ಅದೇ ಇವನು? ಇದ್ದಾನೆ ಮೂದೇವಿ ತರಹ'

ಹಾಗೆ ರವಿಯ 'ಗುಣಗಾನ' ನಡೆದ ನಂತರ ನನಗೆ ತಿಳಿದ ಕೆಲವು ವಿಚಾರಗಳಷ್ಟು ಕುಸುಮಳಿಗೆ ಹಂಚಿ ನಾನಲ್ಲಿಂದ ಹೊರಟೆ. ಆದರೆ ಮನಸ್ಸಿನೊಳಗೆ ವ್ಯಥೆ ತಾನೇ ತಾನಾಗಿತ್ತು. ಈ ಇಂಗ್ಲಿಷ್ ವ್ಯಾಮೋಹದಿಂದ ರವಿಯಂತಹ ಜಾಣ ಹುಡುಗ 'ಮೂದೇವಿ' ಎನ್ನಿಸಿಕೊಂಡುದನ್ನು ನೆನೆದಾಗಲಂತೂ ಇನ್ನಷ್ಟು ಖಿನ್ನಳಾದೆ. ನಂತರ, ಮನೆ ಸೇರಿದ ಮೇಲೆ ಕೂಡಾ ಅದೇ ವಿಚಾರವೇ ಮನಸ್ಸಿನೊಳಗೆ ರಿಂಗಣ ಹಾಕು

ತ್ತಿತ್ತು. ನಿಜಕ್ಕೂ ಇಷ್ಟು ಎಳೆ ವಯಸ್ಸಿನ ಪುಟಾಣಿಗಳಿಗೆ ಇಂಗ್ಲಿಷ್ ಅಗತ್ಯವೆ? ಈ ವ್ಯಾಮೋಹ ಹೇಗೆ ಬಂತು? ಇದಕ್ಕೆ ಕಾರಣ ರಾರು? ನನ್ನ ಯೋಚನೆಗೆ ಉತ್ತರವಾಗಿ, ನನಗೆ ಕಂಡ ಅಂಶಗಳನ್ನಿಲ್ಲಿ ನಿಮ್ಮ ಜತೆಗೆ ಹಂಚಿಕೊಳ್ಳಬಯಸುತ್ತಿದ್ದೇನೆ.

ಈಗೀಗ ಹೆಚ್ಚಿನ ಕುಟುಂಬಗಳಲ್ಲಿಯೂ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಗಮನ ಹರಿಸುವವಳು ತಾಯಿ. ಕಾರಣ, ಬಿಡುವೇ ಇಲ್ಲದ ಚಟುವಟಿಕೆಯ ಈ ದಿನಗಳಲ್ಲಿ ಮನೆಯಿಂದ ಹೊರಗೇ ಹೆಚ್ಚಿನ ಸಮಯ ವ್ಯಯಿಸುವ ಗಂಡಸು, ಮನೆಯೊಳಗಣ ಎಲ್ಲ ವ್ಯವಹಾರಗಳನ್ನು ಮನೆ ಒಡತಿಗೇ ಬಿಟ್ಟುಬಿಡುತ್ತಾನೆ. ಈಗಿನ ಮಹಿಳೆಯರೆಲ್ಲ ವಿದ್ಯಾವಂತೆಯರೇ ಆಗಿರುವುದಲ್ಲದೇ, "ಮಕ್ಕಳಿಗೆ ತಾಯಿಯೇ ಮೊದಲ ಗುರು' ಎನ್ನುವ ಮೊದಲನಿಂದಲೂ ನಡೆದು ಬಂದ ರೂಢಿಯೂ ಇದಕ್ಕೆ ಹಿನ್ನೆಲೆಯಾಗಿದ್ದೀತು. ನಿಜವೆ, ಮಕ್ಕಳಿಗೆ ತಾಯಿಯೇ ಮೊದಲ ಗುರು. ಆದರೆ 'ಮನೆಯೆ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು, ಜನನಿಯಿಂದ ನಾವು ಮೊದಲ ಪಾಠ ಕಲಿವೆವು ಎಂಬ ಹಾಡಿನ ಸುಂದರ ಆಶಯವನ್ನು ಇಂದಿನ ಮಹಿಳೆಯರು ಸರಿಯಾಗಿ ಅರ್ಥ ಮಾಡಿಕೊಂಡಿದ್ದಾರೆಯೆ? ಎನ್ನುವ ಸಂದೇಹ ಇತ್ತೀಚೆಗೆ ಕೆಲವರನ್ನಾದರೂ ಕಾಡಲಾರಂಭಿಸಿರಬಹುದು. ಕಾರಣ, ನಮ್ಮ ಮಹಿಳೆಯರು ತಂತಮ್ಮ ಮಕ್ಕಳಿಗೆ ಮೊದಲ ತುತ್ತಾಗಿ ಉಣ್ಣಿಸುವುದು ಇಂಗ್ಲಿಷನ್ನೇ. ಈ ಮೋಹ ಎಷ್ಟರಮಟ್ಟಿಗಿದೆ ಎಂದರೆ, ತಮಗೆ ಆ ಭಾಷೆಯ ಗಂಧ, ಗಾಳಿ ಗೊತ್ತಿಲ್ಲದೇ ಇದ್ದರೂ, ಅದಕ್ಕಾಗಿ ವಿಶೇಷ ಶಿಕ್ಷಕರನ್ನು ಮನೆಪಾಠಕ್ಕೆ ನೇಮಿಸಿಕೊಂಡು ಆ ಹಸುಳೆಗಳು ಮಮ್ಮಿ, ಡ್ಯಾಡಿ ಎಂದೋ, ಇಲ್ಲ ಕೆಲವು ಇಂಗ್ಲಿಷ್ ಪದಗಳನ್ನು ಉಚ್ಚರಿಸಿಯೋ ತೋರಿಸಿದಾಗ, ಈ ಮಾತೆಯರು ತಾವು ಸ್ವರ್ಗದಲ್ಲಿಯೇ ಇದ್ದೇವೆಂದು ಭಾವಿಸಿ ಬೀಗುತ್ತಾರೆ. ವಾಸ್ತವದಲ್ಲಿ ತಮಗಾದ ದೊಡ್ಡನಷ್ಟದ ಅರಿವೇ ಇವರಿಗೆ ಇಲ್ಲದಿರುವುದು ತೀವ್ರ ವಿಷಾದಕರ. ಎಳೆಯ ಮಕ್ಕಳ ಮನಸ್ಸು ಬಿಳಿಯ ಖಾಲಿ ಹಾಳೆಯಂತೆ. ಅಲ್ಲಿ ಯಾವುದನ್ನೇ ಬರೆದರೂ ಅಳಿಸಲಾಗದಂತೆ ಅದು ಅಲ್ಲಿ ಬೇರೂರಿ ಬಿಡುತ್ತದೆ. ಆದುದರಿಂದಲೆ ಈ ವಯಸ್ಸಿನಲ್ಲಿ ತಾಯ್ತಂದೆಯರು ತಂತಮ್ಮ ಮಕ್ಕಳ ಒಟ್ಟು ಬೆಳವಣಿಗೆ ಬಗ್ಗೆ ಜಾಗ್ರತೆ ವಹಿಸಬೇಕಾದದ್ದು ಅತೀ ಅಗತ್ಯ. ಇಂಗ್ಲಿಷ್ ಎಷ್ಟಾದರೂ ಪರಭಾಷೆ. ಕನ್ನಡವಾದರೋ ನಮ್ಮ ಮಾತೃಭಾಷೆ. ಅದರ ಕಲಿಕೆ ನಮ್ಮ ಉಸಿರಾಟದಷ್ಟೇ ಸಹಜ ಹಾಗೂ ಮನಸ್ಸಿನ ಬೆಳವಣಿಗೆಗೂ ಆರೋಗ್ಯಕರ. ಇಲ್ಲಿ ಒಂದು ಉದಾಹರಣೆಯ ಜತೆಗೆ ಈ ಲೇಖನವನ್ನು ಮುಂದುವರೆಸಬಹುದೇನೋ?


ಆದೇ ತಾನೇ ಹುಟ್ಟಿದ ಕಿರುಸಸಿಗಳನ್ನು ಕಿತ್ತು ನಾವು ನಮಗೆ ಬೇಕಾದ ಜಾಗದಲ್ಲಿ ನಡುತ್ತೇವೆ ತಾನೆ? ಅಂಥಹ ಸಸಿಗಳಲ್ಲಿ ಕೆಲವು ಸತ್ತೇ ಹೋಗುತ್ತವೆ. ಇನ್ನು ಕೆಲವು ಅರೆ ಜೀವದಿಂದಿರುತ್ತವೆ ಮತ್ತು ಕೆಲವು ಸಾಧಾರಣವಾಗಿ ಬೆಳೆಯುತ್ತವಾದರೆ, ಇನ್ನು ಹಲವು ಸುತ್ತಲಿನ ಪರಿಸರವನ್ನು ಸರಿಯಾಗಿ ದಕ್ಕಿಸಿಕೊಂಡು ಪುಷ್ಟವಾಗಿ ಬೆಳೆದು ನಳನಳಿಸುತ್ತವೆ. ಆದೇಕೆ ಆ ಸಸಿಗಳ ಪಾಡು ಹಾಗಾಯಿತು? ಹೊಸ ಪರಿಸರಕ್ಕೆ ಹೊಂದಿಕೊಳ್ಳಲಾಗದೇ ಇದ್ದುದರಿಂದ. ಹೊಂದಿಕೊಂಡ ಸಸಿಗಳು ಇಲ್ಲವೆಂದಲ್ಲ ಇವೆ. ಆದರೆ ಪರಿಸರವನ್ನು ದಕ್ಕಿಸಿಕೊಳ

ಲಾಗದ ಸಸಿಗಳೂ ಅಷ್ಟೇ ಸಂಖ್ಯೆಯಲ್ಲಿವೆ ಎನ್ನುವುದು ಗಮನಾರ್ಹ. ನಿಧಾನವಾಗಿ ಈ ಸಸಿಗಳೂ ಚೇತರಿಸಿಕೊಳ್ಳಲಾರಂಭಿಸು ತ್ತವೆ ಎನ್ನುವುದು ಸತ್ಯವಾದರೂ, ಅದ ಕ್ಕಾಗಿ ಅದೆಷ್ಟು ಪ್ರಯತ್ನ ನಡೆಸಬೇಕಾಗು ತ್ತದೆ ಎನ್ನುವುದರ ಅರಿವು ನಮಗಿಲ್ಲ. ಅದುವೇ ಹುಟ್ಟಿದ ಸ್ಥಳದಲ್ಲಿಯೇ ಆಗಿದ್ದರೆ ಆ ಸಸಿಗಳು ಬೇಗನೇ ಬೆಳೆಯುತ್ತಿದ್ದವು ಅಥವಾ ಕೆಲಕಾಲ ಅಲ್ಲಿಯೇ ಬಿಟ್ಟು ನಂತರ ನೆಟ್ಟಿದ್ದರೂ ಚೇತರಿಸಿಕೊಳ್ಳುತ್ತಿದ್ದವು. (ಉದಾ : ನೇಜಿನೆಡುವಿಕೆ, ನಿರ್ದಿಷ್ಟ ದಿನಗಳ ನಂತರವೇ ಆ ಎಳೆ ಸಸಿಗಳನ್ನು ಕಿತ್ತು, ಉತ್ತು ಹದಮಾಡಿದ ಗದ್ದೆಯಲ್ಲಿ ನೆಡು ತ್ತಾರೆ.) ಆದರೆ ನಮ್ಮಲ್ಲೀಗ ಹೆಚ್ಚಿನ ಮನೆ ಗಳಲ್ಲಿಯೂ ತೀರ ಎಳೆಯರನ್ನೇ ಇಂಗ್ಲಿಷ್ ಭಾಷೆ ಕಲಿಕೆಗೆ ಕಳಿಸುತ್ತಾರೆ. ನಮ್ಮ ಎಳೆಯರ ಪಾಡು, ನಿರ್ದಿಷ್ಟ ದಿನಗಳಿಗೆ ಮುನ್ನವೇ ಕಿತ್ತು ನೆಟ್ಟ ಕಿರು ಸಸಿಗಳ ಬವಣೆಗಿಂತ ಭಿನ್ನವೇನಲ್ಲ ಎನ್ನುವುದು ಚಿಂತಿಸತಕ್ಕ ವಿಚಾರ. ಮೂರು, ನಾಲ್ಕರ ಎಳೆವರೆಯದಲ್ಲಿಯೇ 'ಇಂಗ್ಲಿಷ್‌ಮಾಧ್ಯಮ' ಎಂಬ, ತಮ್ಮ ಸಂಸ್ಕೃತಿಗೆ ತೀರ ಹೊರತಾದ ಹೊಸನೆಲದಲ್ಲಿ ಕಾಲಿಟ್ಟ ಕಂದಗಳು, ಅಲ್ಲಿ ಬೇರು ಬಿಡಬೇಕಿದ್ದರೆ ತಮ್ಮ ಇಡೀ ದಿನ ವನ್ನೂ, ಸರ್ವತಿಳುವಳಿಕೆಯನ್ನೂ ಅದ ಕ್ಕಾಗಿ ಮೀಸಲಿಡಬೇಕಾಗುತ್ತದೆ ಮತ್ತು ಹೀಗಾಗಿಯೇ ನಮ್ಮ ಸಂಸ್ಕೃತಿಯನ್ನು ತಿಳಿದುಕೊಳ್ಳಲು ಅಂಥಹ ಮಕ್ಕಳು ಅನಾಸಕ್ತಿ ತೋರಿಸುತ್ತಾರೆ.

ಇಂದಿನ ಎಷ್ಟೋ ಎಳೆಯರಿಗೆ ಝಾನ್ಸಿಯ ರಾಣಿ, ಕಿತ್ತೂರರಾಣಿಯರಾಗಲೀ, ಭಗತ್ ಸಿಂಗ್, ವೀರ ಸಾವರ್‌ಕರ್ ಆಗಲೀ ಯಾರೆಂದೂ ತಿಳಿಯದು. ಇನ್ನು ಸರ್ವಜ್ಞ, ಕನಕದಾಸ, ಪುರಂದರದಾಸರ ಹೆಸರೇ ಗೊತ್ತಿಲ್ಲ. ಮತ್ತೆ ವೇದ, ರಾಮಾಯಣ, ಮಹಾಭಾರತ, ಗೀತೆಗಳೆಂದರೆ 'ಅದು ಯಾವ ಸಿನಮಾ ?' ಎನ್ನುವ ಮಕ್ಕಳೂ ನಮ್ಮಲ್ಲಿದ್ದಾರೆಂದರೆ ನಗುವ ಮಾತಲ್ಲ. ಪರಿಸ್ಥಿತಿ ಹೀಗಿರುವಾಗ ಆ ಮಕ್ಕಳು ಬೆಳೆದ ಮೇಲೆ, ಅವರಿಂದ ಸ್ವದೇಶ ಅಭಿಮಾನ ವನ್ನಾಗಲೀ, ತಮ್ಮ ಪ್ರಾಚೀನ ಸಂಸ್ಕೃತಿಯ ಬಗ್ಗೆ ಅವರಿಂದ ತಿಳುವಳಿಕೆಯ ಮಾತು ಗಳನ್ನಾಗಲೀ ನಿರೀಕ್ಷಿಸಿದರೆ ಅದು ತಮ್ಮದೇ ಮೂರ್ಖತನವಾದೀತಷ್ಟೇ ಮಾತ್ರವಲ್ಲ, ಇಲ್ಲಿ ಅಲಕ್ಷ್ಯ ಮಾಡಲಾಗದ ಇನ್ನೊಂದು ಅಪಾಯವೂ ಇದೆ. ಅದು ಅರೆಜೀವವಾದ ಸಸಿಗಳ ಸಮಸ್ಯೆ. ಕೆಲವು ಮಕ್ಕಳು ಏನೇ ಮಾಡಿದರೂ ಹೊಸ ಪರಿಸರಕ್ಕೆ ಹೊಂದಿ ಕೊಳ್ಳುವುದಿಲ್ಲ. ಆಗ ಶಾಲೆಯಲ್ಲಿ 'ಮಿಸ್' ನಿಂದ ಬೈಗಳು, ಮನೆಯಲ್ಲಿ ಮಾತೆಯಿಂದ ಮಾಹಿತ ತಿವಿತ ಇವೇ ಆ ಮಗುವಿಗೆ ಸಿಗು ತ್ತವೆ (ಕುಸುಮಳ ಮಗ ರವಿಯಂತೆ). ಸ್ವಲ್ಪ ಹಟಸ್ವಭಾವದ ಮಗುವಾದರೆ, ಈ ಯಾವ ಶಿಕ್ಷೆಗೂ ಬಗ್ಗದೇ ತನ್ನದೇ ರೀತಿ ಯಲ್ಲಿ ಬೆಳೆದು ವಿದ್ಯಾವಂತನಾಗಲಿಕ್ಕೂ ಸಾಕು, ಇಲ್ಲವೆ ಪುಂಡನಾಗಲೂಬಹುದು ಅಥವಾ ಮಗು ಮೃದು ಸ್ವಭಾವದ್ದಾದರೆ, ತನ್ನ ಕಷ್ಟವನ್ನು ಯಾರಲ್ಲೂ ಹೇಳಿಕೊಳ್ಳ ಲಾಗದೇ ಮಾನಸಿಕ ಸ್ಥಿರತೆಯನ್ನು ಕಳೆದು ಕೊಳ್ಳಲೂಬಹುದು. ಮುಂದೆ ಬೆಳೆದಾಗ ಇಂಥಹ ಮಕ್ಕಳೇ 'ಶಿಕ್ಕಲು, ಪುಕ್ಕಲು, ಸ್ಟುಕಿಕ್' ಎಂದೆಲ್ಲ ಹೇಳಿಸಿಕೊಳ್ಳುತ್ತಾರೆ. ಈ ರೀತಿಯ ವಿಕೃತ ಮನಸ್ಸಿನ ಮಕ್ಕಳ ಸಮೂಹವೇ ಒಂದು ತಯಾರಾದಲ್ಲಿ ಅದು

ದೇಶದ ಪ್ರಗತಿಗೆ ಎಷ್ಟು ಮಾರಕವೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಆದುದರಿಂದಲೇ ಮಕ್ಕಳ ದೈಹಿಕ ಬೆಳವಣಿಗೆಗೆ ಮಾತ್ರವಲ್ಲ, ಮಾನಸಿಕ ಬೆಳವಣಿಗೆಗೂ ಹೆತ್ತವರು ಪ್ರಾಮುಖ್ಯತೆ ನೀಡಬೇಕು. ಇದರರ್ಥ ಇಂಗ್ಲಿಷ್ ಕಲಿಸಲೇ ಬಾರದೆಂದಲ್ಲ. ವ್ಯಾವಹಾರಿಕ ಜಾಣ್ಮೆಗೆ, ಬೌದ್ಧಿಕ ವಿಕಾಸಕ್ಕೆ ಎಷ್ಟು ಭಾಷೆ ಕಲಿತರೂ ಕಡಿಮೆಯೇ. ಆದರೆ ಈ ಕಲಿಕೆ ಯೋಗ್ಯ ಸಮಯದಲ್ಲಿ ನಡೆಯಬೇಕು. ಎಂದೇ ಹಾಲು ಕುಡಿವ ಹಸುಳೆಗಳಿಗೆ ಮೊದಲ ಪಾಠಶಾಲೆ ಮನೆಯೆ ಆಗಿದ್ದರೆ ಒಳಿತು. ಕನ್ನಡ ನಮ್ಮ ಮಾತೃಭಾಷೆ, ನಮ್ಮ ಸಂಸ್ಕೃತಿಯ ತಾಯಿ ಬೇರು, ಕನ್ನಡದ ಕಲಿಕೆ ನಮ್ಮತನದ ಉಳಿಕೆ ಎಂಬ ಭಾವನೆಗಳನ್ನು ಮೈಗೂಡಿಸಿಕೊಂಡ ನಮ್ಮ ತಾಯಂದಿರು ಭಾಷೆಯ ಮಹತ್ವವನ್ನು, ದೇಶದ ಸಾಂಸ್ಕೃತಿಕ ಹಿರಿಮೆಯನ್ನು ಆದಷ್ಟು ಸರಳವಾಗಿ ಎಳೆಯರಿಗೆ ತಿಳಿಯ ಹೇಳಬಹುದು. ಅಷ್ಟೇ ಅಲ್ಲ, ನಂತರ ಶಾಲೆಯ ಮೊದಲ ವರ್ಷಗಳ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿಯೇ ಅವರು ಪಡೆದರೆ ಬಹಳಷ್ಟು ಒಳ್ಳೆಯದು. ತಮ್ಮ ತಾಯಿಯ ಮಡಿಲಲ್ಲಿಯೇ ಕಲಿತು ಆದರ ಬಗ್ಗೆ ಗೌರವ, ಆದರಾಭಿಮಾನಗಳನ್ನು ಮೈಗೂಡಿಸಿಕೊಂಡೇ ಬೆಳೆದ ಮಕ್ಕಳಲ್ಲಿ ತಮ್ಮತನ, ಆತ್ಮವಿಶ್ವಾಸಗಳೂ ಗಟ್ಟಿಯಾಗಿರುತ್ತವೆ. ಹೀಗೆ ಕನ್ನಡ ನೆಲದಲ್ಲಿ ಜನಿಸಿ, ಕನ್ನಡದ ನೀರನ್ನು ಕುಡಿದು, ಕನ್ನಡದ ಗಾಳಿಯನ್ನಾಘ್ರಾಣಿಸುತ್ತ ತಮ್ಮ ಆತ್ಮವಿಶ್ವಾಸದ ಬೇರುಗಳನ್ನು ಗಟ್ಟಿಮಾಡಿಕೊಂಡ ಎಳೆಯರು, ನಂತರ ಇಂಗ್ಲಿಷನ್ನೂ ಕಲಿಯಲಿ. ಆದರೆ ಆ ಕೆಲಸವನ್ನು, ಸರಿಯಾದ ವೇಳೆಯಲ್ಲಿ ಎಳೆಸಸಿಗಳ ನಾಟಿಯ ಜವಾಬ್ದಾರಿಯನ್ನು, ವಹಿಸಿಕೊಳ್ಳಬೇಕಾದವರು ನಾವು, ಮಹಿಳೆಯರು.

ಕೊನೆಯದಾಗಿ, ಸೋದರಿಯರ, ನನ್ನ ಈ ಅಭಿಪ್ರಾಯದ ಹಿನ್ನೆಲೆಯಲ್ಲಿ ಇರುವ, ಯಾವುದೇ ದುರುದ್ದೇಶವಿಲ್ಲದ ಪ್ರಾಮಾಣಿಕ ಕಳಕಳಿಯನ್ನು ನೀವೆಲ್ಲರೂ ಸರಿಯಾಗಿ ಅರ್ಥೈಸಿಕೊಳ್ಳುತ್ತೀರಿ ಎಂದು ನಂಬುತ್ತ, ಈ ಮಾತುಗಳಿಗೆ ವಿರಾಮ ನೀಡುತ್ತಿದ್ದೇನೆ.



ಸಕಾಲದಲ್ಲಿ ಯೋಗ್ಯಕ್ರಮ ತೆಗೆದುಕೊಳ್ಳಲು ತಪ್ಪುವ ಮೂರ್ಖನು ತಾನೂ ಕೆಡುತ್ತಾನೆ, ಇತರರನ್ನೂ ಕೆಡಿಸುತ್ತಾನೆ.

—ಭರ್ತೃಹರಿ

ಚೀನಿ ಸಣ್ಣಕಥೆ—

ನಿರರ್ಥಕ ವರ್ಷಗಳು

ಡಾ॥ ಆರ್. ರಾಮಕೃಷ್ಣ

ಜ್ಯಾಂಗ್ ಕಾಂಗ್‌ಕಾಂಗ್ (೧೯೫೦). ಹೆಸರಾಂತ ಚೀನಿ ಸಣ್ಣ ಕಥೆಗಾರ್ತಿ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಕೃಷಿ ಮಾಡಿದ್ದಾರೆ. ಯುವ ಪೀಳಿಗೆಯ ಸಮಸ್ಯೆಯನ್ನು ಚಿತ್ರಿಸುವುದರಲ್ಲಿ ಪ್ರಬುದ್ಧೆ. "ದಿ ರೈಟ್ ಟು ಲವ್" ಇವರ ಪ್ರಥಮ ಕಥೆ. ಬರವಣಿಗೆಯನ್ನೇ ವೃತ್ತಿಯನ್ನಾಗಿಸಿಕೊಂಡಿರುವ ಈಕೆಯ ಹೆಸರು ಮನೆಮಾತಾಗಿದೆ. ಚೀನಿ ಬರಹಗಾರರ ಸಂಘದ ಹೈಲೊಂಗ್ ಜಿಯಾಂಗ್ ಶಾಖೆಯ ಸದಸ್ಯೆ.

ಭೂಮಿ ಕತ್ತಲನ್ನು ಹೊದ್ದು ಮಲಗಿ ಬಹಳ ಹೊತ್ತಾಗಿತ್ತು. ಮೊಗಸಾಲೆಯಲ್ಲೇನೊ ಸದ್ದು. ನಿಶ್ಯಬ್ದ ರಾತ್ರಿಯನ್ನು ಸೀಳುತ್ತಿರುವ ಸದ್ದು. ನನ್ನ ಬಾಗಿಲ ಬಳಿ ದಡ್ ದಡ್ ಎನ್ನುವ ಹೆಜ್ಜೆ ಸಪ್ಪಳ.

ಟಪ್ ! ಟಪ್ ! ಟಪ್ ! ಟಪ್

ನನ್ನ ಬಾಗಿಲನ್ನು ಯಾರೋ ಸುತ್ತಿಗೆಯಿಂದ ಬಲವಾಗಿ ಹೊಡೆಯುತ್ತಿದ್ದಾರೆ.

ಬರೆಯುತ್ತಿದ್ದ ಪೆನ್ನನ್ನು ಕೆಳಗಿಟ್ಟು, ಡೆಸ್ಕಿನ ಮೇಲಿದ್ದ ಅಲಾರಂ ಗಡಿಯಾರ ನೋಡಿದೆ. ಹನ್ನೊಂದಕ್ಕೆ ಇನ್ನೂ ಹದಿನೈದು ನಿಮಿಷವಿತ್ತು. ಈ ಅವಧಿಯಲ್ಲಿ ಕ್ವಾರ್ಟರ್ಸ್‌ಗೆ ಬರುವವರೆಂದರೆ ಕಷ್ಟಪಟ್ಟು ದುಡಿಯುವ ಮಂದಿ ಹಾಗೂ ತಾಳ್ಮೆಯಿಲ್ಲದೆ ತವಕಗೊಂಡಿರುವ ವಿದ್ಯಾರ್ಥಿಗಳು ಮಾತ್ರ.

"ಮಿಸ್ಟರ್ ಪೆಂಗ್ ಅವರನ್ನು ನಾನು ಕಾಣಬೇಕು, ಅವರಿಲ್ಲಿ ವಾಸಿಸುತ್ತಿದ್ದಾರೆಯೋ ?" ಗಂಡಸಿನ ಧ್ವನಿ.

"ನಾನೇ, ದಯೆಯಿಟ್ಟು ಒಳಗೆ ಬನ್ನಿ" ನಾನು ಕೂಗಿದೆ.

ಶರತ್ಕಾಲದ ಚಳಿಗಾಳಿ. ಅವರು ನನ್ನ ಕೋಣೆಯೊಳಗೆ ಬಂದರು. ಇಬ್ಬರು ಅಪರಿಚಿತರು. ಸಾಧಾರಣ ಉಡುಗೆ ತೊಡುಗೆಯಿಂದಿದ್ದ ಮಧ್ಯ ವಯಸ್ಸಿನ ದಂಪತಿಗಳು. ನಡುಕೋಣೆಗೆ ಬಂದು ನಿಂತ ಅವರಿಬ್ಬರನ್ನೂ ನೋಡಿದೆ. ಅತ್ತು ಅತ್ತು ಕೆಂಪಾಗಿ ಊದಿದ ಕಣ್ಣುಗಳ ಹೆಂಗಸು ಮತ್ತು ವಿಷಣ್ಣ ಮೊಗದ ಗಂಡಸು.

ಮೌನ ಮುರಿದು ಗಂಡ ಕೇಳಿದ "ಕ್ಸು-ಲಿ ನಿನಗೆ ಗೊತ್ತೆ ?"

ಜ್ಯಾಂಗ್ ಕಾಂಗ್‌ಕಾಂಗ್ ಅವರ ಚೀನಿ ಮೂಲ ಲೇಖನ. ಷೆನ್ ಜೆನ್ ಅವರ ಆಂಗ್ಲ ಲೇಖನದ ಅನುವಾದ.

"ಅವನೊಬ್ಬ ಹುಡುಗ", ಕೊಳಕಾದ ಸ್ಕಾರ್ಫ್‌ನಿಂದ ಕಣ್ಣೀರೊರೆಸಿಕೊಳ್ಳುತ್ತಾ ಹೆಂಡತಿ ಹೇಳಿದಳು.

"ಕ್ಸ್ಸ–ಲಿ? ಕ್ಷಮಿಸಿ, ಅವನಾರೋ ನನಗೆ ಗೊತ್ತಿಲ್ಲ" ನಾನು ತಲೆಯಾಡಿಸುತ್ತ ಉತ್ತರಿಸಿದೆ.

ಅವನಿಲ್ಲಿ ಬಂದಿಲ್ಲವೆ?" ಗಂಡ ಕೆಮ್ಮುತ್ತಾ ಸಂಶಯಾತ್ಮಕವಾಗಿ ಕೇಳಿದ. ಉತ್ತರಿಸಲು ಸಾಧ್ಯವಾಗದೆ, ನಾನು ಮತ್ತೊಮ್ಮೆ ತಲೆಯಾಡಿಸಿದೆ. ಆ ಹೆಂಗಸು ದುಃಖದಿಂದ ತನ್ನ ಮುಖವನ್ನು ಸ್ಕಾರ್ಫ್‌ನಿಂದ ಮುಚ್ಚಿಕೊಂಡು ಅಳುತ್ತ "ಅವನಿಲ್ಲಿ ಇರದಿದ್ದರೆ, ಮತ್ತೆಲ್ಲಿದ್ದಾನೆ?"

"ಏನು ವಿಷಯ? ಏನಾಯಿತು? ಆತಂಕ ಬೇಡ. ಏನಾಗಿದೆಯೆಂಬುದನ್ನು ನಿಧಾನವಾಗಿ ತಿಳಿಸಿ."

"ಏನಾಯ್ತು?! ನಿನಗೆ ಗೊತ್ತಿಲ್ಲವೇನು? ನೀನು ಅವನಿಗೆ ಕಲಿಸಿದೆ; ಅವನು ಹುಚ್ಚನಂತಾಗಿಬಿಟ್ಟ. ಅವನನ್ನು ನಿಮ್ಮೊಂದಿಗೆ ಹೋಲಿಸಲು ಸಾಧ್ಯವಿಲ್ಲ. ನೀನಾದರೋ ಒಬ್ಬ ಮೇಷ್ಟ್ರು. ಅವನಾದರೋ ಒಬ್ಬ ಮೂರ್ಖ; ಏನನ್ನೂ ತಿಳಿಯದವನು. ಎನ್ನುತ್ತಾ ಆ ಗಂಡಸು ನನ್ನ ಕಡೆ ಕ್ರೂರ ದೃಷ್ಟಿ ಬೀರಿದ. ಅವನ ಆ ನೋಟ ನನ್ನನ್ನು ಗೊಂದಲಗೊಳಿಸಿತು.

"ಕ್ಸ್ಸ–ಲಿ ಯಾರೀತ?" ನನ್ನ ಸ್ಮೃತಿ ಯಾಳಕ್ಕೆ ಇಳಿದೆ. ಕುಪಿತ ಗಂಡನ ಕುಣಿಯುತ್ತಿರುವ ಹುಬ್ಬುಗಳು ಹಾಗೂ ಅಳುತ್ತಾ ಕೆಟ್ಟ ಧ್ವನಿಯಲ್ಲಿ ಕೂಗುತ್ತಿರುವ ಹೆಂಡತಿಯ ಬಾಯಿ, ಯಾವುದೋ ಅಸ್ಪಷ್ಟ ಮುಖವನ್ನು ನೆನಪಿಗೆ ತರಲು ಪ್ರೇರೇಪಿಸಿದವು. ನನ್ನಷ್ಟಕ್ಕೆ ನಾನೇ "ಕ್ಸ್ಸ–ಲಿ ಯಾರವನು?" ಎಂದುಕೊಂಡೆ. ಯಾವುದೋ ಪರಿಚಯವಾದ ಹೆಸರು ಇದ್ದಂತಿದೆಯಲ್ಲಾ ಎನಿಸಿತು.

"ಈ ಕಾಗದ ನಿನ್ನದಲ್ಲವೇ? ಅವನಿಗೆ ನೀನು ಬರೆದುದಲ್ಲವೆ? ನೋಡು" ಎಂದು ತನ್ನ ಜೇಬಿನಿಂದ ಮುದುರಿದ್ದ ಕಾಗದವನ್ನು ಹೊರತೆಗೆದು ನನಗೆ ನೀಡಿದ.

"ನೀನು ಬರೆದದ್ದು ತಾನೇ ಅದು? ನೀನು ನಿನ್ನ ಸಮಯವನ್ನು ವ್ಯರ್ಥ ಮಾಡಿದೆ. ಅವನೊಬ್ಬ ಶತಮೂರ್ಖ!"

ನಾನು ನನ್ನ ಕೈಬರೆಹವನ್ನು ಗುರುತಿಸಿದೆ: "ಗೆಳೆಯ ಕ್ಸ್ಸ–ಲಿ...." ತಕ್ಷಣವೇ ನಾಚಿಕೆಸ್ವಭಾವದ, ತನ್ನ ತಂದೆಯಂತೆಯೇ ದೊಡ್ಡ ಹುಬ್ಬುಗಳುಳ್ಳ ತಾಯಿಯಂತೆ ಅಗಲ ಬಾಯುಳ್ಳ ಯುವಕನೊಬ್ಬ ನನ್ನ ನೆನಪಿಗೆ ಬಂದ. ನಾನು ವ್ಯಾಕುಲಚಿತ್ತನಾದೆ.

"ಅವನು ಮನೆಗೆ ಬರುವಂತೆ ಮಾಡಿ ದಯೆಯಿಟ್ಟು....ತಾಯಿ ಮಮ್ಮಲ ಮರುಗುತ್ತಿದ್ದಳು "ಅಯ್ಯೋ! ನನ್ನ ನಡುಕಲ ಮಗನೆ....ನೀನೇಕೆ ಮನೆಬಿಟ್ಟು ಓಡಿಹೋದೆ....?"

ನಟ್ಟ ನಡುರಾತ್ರಿ. ದಂಪತಿಗಳ ರೋದನದಿಂದ ಅಕ್ಕಪಕ್ಕದವರಿಗೆ ಮತ್ತೆ ತೊಂದರೆ ವುಂಟಾದೀತೆಂದು ನಿಶ್ಯಬ್ದವಾಗಿರೆಂದು ಅವರನ್ನು ಬೇಡಿದೆ. "ಕ್ಸ್ಸ–ಲಿ ಬಗ್ಗೆ ನನಗೆ ಸ್ವಲ್ಪ ಮಾತ್ರವೆ ಗೊತ್ತು. ಪುಸ್ತಕವೊಂದನ್ನು ನನ್ನಿಂದ ಎರವಲು ಪಡೆಯಲು ಒಮ್ಮೆ ಮಾತ್ರ ನನ್ನ ಬಳಿಗೆ ಬಂದಿದ್ದ. ಅವನಿಗಾಗಿ ಪುಸ್ತಕವನ್ನು ನಾನು ತಂದಿರುವೆನೆಂಬ ವಿಷಯವನ್ನು ಅವನಿಗೆ ತಿಳಿಸಲು ನಾನು ಕಾಗದ ಬರೆದಿದ್ದೆ, ಅಷ್ಟೆ. ಇದಿಷ್ಟು ವಿಚಾರದ ಹೊರತಾಗಿ ಬೇರೇನೂ ತಿಳಿದಿಲ್ಲ."

"ಅವನು ಮನೆಯಿಂದ ಓಡಿ ಹೋಗಿದ್ದಾನೆಂದು ನಾನು ಭಾವಿಸಿಲ್ಲ, ಆದರೂ ನೀವು ಹೇಳಿದ ವಿಷಯ ಕೇಳಿ ನನಗೆ ದುಃಖವುಂಟಾಗಿದೆ" ಎಂದೆ.

ನನ್ನ ಕೋಣೆಯನ್ನು ಅವರಿಬ್ಬರೂ ಸಂದೇಹಾಸ್ಪದವಾಗಿ ಮತ್ತೊಮ್ಮೆ ವೀಕ್ಷಿಸಿದರು ತಮ್ಮ ಮಗನಿಗಾಗಿ. ಕೊನೆಗೆ ಏನೂ ಹೇಳಲು ತೋರದೆ ತಲೆ ತಗ್ಗಿಸಿ ತಾಯಿ ಹೇಳಿದಳು.

"ಮೂರು ದಿನಗಳಿಂದ ಅವನು ನಾಪತ್ತೆಯಾಗಿದ್ದಾನೆ."

ಕುತೂಹಲ ತಡೆಯದೆ ನಾನು ಕೇಳಿದೆ "ಮನೆಯಿಂದ ಅವನೇಕೆ ಓಡಿಹೋದ?"

"ಯಾರಿಗೆ ಗೊತ್ತು? ಶ್ಚು. ಒಂದು ಮಾಹಿತಿ ಪತ್ರವಿಲ್ಲ. ಏನೊಂದೂ ಸುಳಿವಿಲ್ಲ ಇದ್ದಕ್ಕಿದಂತೆ ಕಾಣೆಯಾಗಿದ್ದಾನೆ...." ಹತಾಶ ಭಾವದಿಂದ ತಂದೆ ತಲೆ ತಗ್ಗಿಸಿದ.

"ಅವನಿಗೆ ಯಾರಾದರೂ ಆಪ್ತ ಗೆಳತಿಯಿದ್ದಳೆ? ಅವಳೊಂದಿಗೇನಾದರೂ...." ಮಾತಿನ ಮಧ್ಯೆ ತಡೆದ ತಾಯಿ ಹೇಳಿದಳು: "ಹುಡುಗಿಯರನ್ನು ಕಂಡರೆ ತುಂಬಾ ನಾಚುತ್ತಿದ್ದ ಸ್ವಭಾವ ಅವನದು. ಹಾಗೆ ಹೋಗಿರಲಾರ. ಇಡೀ ದಿನ ಓದುವುದು ಮತ್ತು ಸದಾ ಕಷ್ಟಪಟ್ಟು ಕೆಲಸ ಮಾಡುವುದು ಅವನ ಸ್ವಭಾವ. ಎಲ್ಲರೂ ಅವನನ್ನು ಇಷ್ಟ ಪಡುತ್ತಿದ್ದರು. ಶ್ಲಾಘಿಸುತ್ತಿದ್ದರು.... ಅಯ್ಯೊ, ಮಗನೆ, ತಾಳ್ಮೆ ಕಳೆದುಕೊಂಡ ನಿನ್ನ ತಂದೆ ಬಡಿದಾಗಲೂ ನೀನು ಓಡಿ ಹೋಗುತ್ತಿರಲಿಲ್ಲ. ಈಗ...."

ಯಾವುದೇ ವಿಚಾರವನ್ನು ಆ ದಂಪತಿಗಳು ನನಗೆ ವಿವರವಾಗಿ ತಿಳಿಸಲಿಲ್ಲ. ಅವರ ಮನೆಜಗಳ ಏನಿತ್ತೊ ನಾನರಿಯೆ. ತಮ್ಮ ಮಗನ ನಾಪತ್ತೆಗೆ ಕೊಂಚ ಸುಳಿವನ್ನೂ ನನಗವರು ಕೊಡಲಿಲ್ಲ. ನಾನೇ ತಪ್ಪಿತಸ್ಥ ಎಂದು ಅವರು ಭಾವಿಸಿದಂತಿತ್ತು. ನಿಜ ಸಂಗತಿ ಬಯಲಾಗುವುದು ಅವರಿಗೆ ಬೇಡವಾಗಿತ್ತು.

ಗಡಿಯಾರ ನೋಡುತ್ತಾ ನಾನು ಹೇಳಿದೆ "ನೋಡಿ, ಕ್ಸು-ಲಿ ತನಗಾಗಿ ಓದಲು ಪುಸ್ತಕವೊಂದನ್ನು ಕೇಳಿರುವುದರಿಂದ, ಅದನ್ನು ಒಯ್ಯಲು ಅವನು ಬರಬಹುದು. ಹಾಗೇನಾದರೂ ಅವನು ಬಂದರೆ, ಅವನು ಎಲ್ಲಿರುವನೆಂಬ ವಿಚಾರವನ್ನು ನಿಮಗೆ ಕೂಡಲೇ ತಿಳಿಸುತ್ತೇನೆ. ಸರಿತಾನೆ?"

ಕ್ಷಣ ಕಾಲ ನನ್ನ ಮಾತನ್ನು ಮಥಿಸಿದ ತರುವಾಯ, ಅವರು ನನ್ನೆಡೆ ದಯಾಪೂರಿತ ನೋಟ ಬೀರಿದರು. "ನಿಮಗೆ ತೊಂದರೆ ಕೊಟ್ಟದ್ದಕ್ಕಾಗಿ ನಮ್ಮನ್ನು ಕ್ಷಮಿಸಿ" ಎಂದಳು ತಾಯಿ. ಅವರಿಬ್ಬರನ್ನೂ ಬೀಳ್ಕೊಡಲು ಬಾಗಿಲ ಬಳಿ ಬಂದೆ. ತನ್ನ ವಿಳಾಸವನ್ನು ಕೊಡುತ್ತಾ ಆತ ತನ್ನ ದೊಡ್ಡ ಕೈಗಳಿಂದ ವಿಳಾಸದ ವಿವರಣೆಯನ್ನು ನೀಡಿದ. ಅವನ ಕೈಗಳನ್ನು ಕಂಡು, ಕಾರ್ಖಾನೆಯಲ್ಲಿ ಅವನೊಬ್ಬ ಬಡಗಿಯಿರಬೇಕೆಂದು ಊಹಿಸಿದೆ.

"ಇನ್ನೊಮ್ಮೆ ಕ್ಸು-ಲಿ ಕೇಳಿದನೆಂದು ಅವನಿಗಾಗಿ ಪುಸ್ತಕ ಎರವಲು ಕೊಡಬೇಡ. ಇತಿಹಾಸ ಓದುವುದರಿಂದ ಆಗುವ ಪ್ರಯೋಜನವಾದರೂ ಏನು? ನೀನು ಮೇಷ್ಟ್ರಾಗಿ ಒಬ್ಬ ಹುಡುಗನಿಗಾಗಿ ಸಮಯ ವ್ಯರ್ಥ ಮಾಡಬೇಡ", ಮುಖ ಸಿಂಡರಿಸಿಕೊಂಡು ತಂದೆ ಬುದ್ಧಿವಾದ ಹೇಳಿದ ನನಗೆ.

ಬುದ್ಧಿಗೆ ಮಂಕು ಕವಿದು ಗಾಬರಿಯಾಯಿತು. ಗಲಿಬಿಲಿಗೊಂಡೆ. ಎಲ್ಲ ವಿಚಾರವನ್ನು ಮರೆಯಬೇಕೆಂದುಕೊಂಡೆ.

ಕೂಗಾಟ ಗೊಣಗಾಟದ ಹೆಜ್ಜೆ ಸಪ್ಪಳ ಗಳು ಕತ್ತಲಲ್ಲಿ ಕರಗಿಹೋದವು. ಕ್ವಾರ್ಟರ್ಸ್ ಕಟ್ಟಡದಲ್ಲಿ ಮತ್ತೆ ಮೌನ ಆವರಿಸಿತು.

*　　*　　*

ಕಡುಚಹಾ ಮಾಡಿದೆ. ಕುಡಿಯುತ್ತಾ ಕುಳಿತು ಆಲೋಚಿಸಿದೆ, ನಿಜ ಹೇಳ ಬೇಕೆಂದರೆ, ಕ್ಸು-ಲಿಯನ್ನು ನಾನು ಭೇಟಿ ಯಾದದ್ದು ಒಂದೇ ಒಂದು ಸಾರಿ. ಅದೂ ಹದಿನೈದು ದಿನಗಳ ಹಿಂದೆ. ಅವನಿಗಿಂತ ನಾನು ಹತ್ತು ವರ್ಷ ಹಿರಿಯವ. ಅವನು ನನ್ನನ್ನು ತನ್ನ ಮೇಷ್ಟ್ರಾಗಬೇಕೆಂದು ಒತ್ತಾಯಿಸಿದ್ದರೂ ನಾನು ನನ್ನ ಇನ್ನಿತರ ವಿದ್ಯಾರ್ಥಿಗಳಿಗೆ ಪಾಠ ಹೇಳಿದಂತೆ ಅವನಿಗೆ ಹೇಳಿರಲಿಲ್ಲ. ಯಾವುದೋ ಒಂದು ಘಳಿಗೆ, ಅವನನ್ನು ನನ್ನ ಬಳಿ ಕರೆತಂದಿತು.

ಒಂದು ದಿನ ತರಗತಿ ಮುಗಿಸಿಕೊಂಡು ಕೆಳಗಿಳಿಯುತ್ತಿದ್ದ ನನ್ನನ್ನು ಯಾರೋ ಹಿಂಬಾಲಿಸಿದರು. ನಾನು ಅಧ್ಯಾಪಕರ ಕೊಠಡಿ ಬಾಗಿಲ ಬಳಿಬಂದಾಗ ನನ್ನನ್ನು ಹಿಂಬಾಲಿಸಿದಾತ ಮುಂದೆ ಬಂದು ನಾಚಿಕೆ ಯಿಂದ ಕೇಳಿದ, "ಕ್ಷಮಿಸಿ, ಮಿಸ್ಟರ್ ಪೆಂಗ್ ನೀವೇ ತಾನೆ?"

"ಹೌದು, ನಿನಗೇನು ಬೇಕು?" ಬಾಗಿಲ ಬಳಿ ಅವನನ್ನು ತಡೆಯುತ್ತಾ ಕೇಳಿದೆ. ಪರೀಕ್ಷಾರ್ಥ ದೃಷ್ಟಿಯಿಂದ ಅವನನ್ನು ಗಮನಿಸಿದೆ. ತೆಳ್ಳನೆಯ ಚಿಗುರುಮೀಸೆ ಯುವಕ, ಕಣ್ಣುಗಳಲ್ಲಿ ಕಾಂತಿ ತುಂಬಿತ್ತು. ಅವನ ಬಗ್ಗೆ ನನ್ನಲ್ಲಿ ಒಳ್ಳೆಯ ಭಾವನೆ ಮೂಡಿತು.

ನಾಚಿಕೆಯಿಂದ ತೊದಲುತ್ತ ಒಂದುಕ್ಷಣ ಅವನು ಹೇಳಿದ, "ನಾನು....ನಾನು ಪತ್ರಿಕೆ ಯಲ್ಲಿ ಪ್ರಕಟವಾದ ನಿಮ್ಮ ಸಮಕಾಲೀನ ಬಂಡವಾಳಪದ್ಧತಿಯ ಅಭಿವೃದ್ಧಿ' ಎಂಬ ಲೇಖನ ಈಗ ತಾನೆ ಓದಿದೆ. ನನಗೆ ತುಂಬ ಮೆಚ್ಚುಗೆಯಾದ ಲೇಖನವದು "

ಶೈಕ್ಷಣಿಕ ಸಮಸ್ಯೆಗಳನ್ನು ವಿಚಾರ ಗಳನ್ನು ಚರ್ಚಿಸಲು ಬಂದವರನ್ನು ಕಂಡರೆ ನನಗೆ ತುಂಬ ಪ್ರೇಮ. ಅಂಥವರನ್ನು ನಾನು ಬಿಡುತ್ತಲೇ ಇರಲಿಲ್ಲ. ಆದರೂ ಆ ಯುವಕ ನಿಗೆ ಕಿರಿಕಿರಿಯುಂಟು ಮಾಡುವುದು ನನ ಗಿಷ್ಟವಾಗಲಿಲ್ಲ. ಆದ್ದರಿಂದ "ನೋಡು, ನಾನಿನ್ನೂ ಎರಡು ತರಗತಿಗಳಿಗೆ ಪಾಠ ಮಾಡಬೇಕಾಗಿದೆ. ಬೇಸರಿಸಬೇಡ, ದಯ ವಿಟ್ಟು ಮುಂದಿನ ಭಾನುವಾರ ಭೇಟಿ ಯಾಗು. ನಾನು ಐದನೆಯ ಬ್ಲಾಕಿನಲ್ಲಿರುವ ಎರಡನೆಯ ಫ್ಲಾಟಿನ ಮೂರನೆಯ ಮಹಡಿ ಯಲ್ಲಿ ವಾಸವಾಗಿದ್ದೇನೆ."

ಅವನು ಏನನ್ನೋ ಹೇಳಲು ಬಯಸಿ ದಂತಿತ್ತು. ಆದರೆ ಆತ ಹಿಂಜರಿದ. ನಾನು ಹೇಳಿದ ಮಾತುಗಳನ್ನೇ ಮೆಲುಕು ಹಾಕುತ್ತಾ ತಲೆಯಾಡಿಸಿ ಹೊರಟುಹೋದ.

ಭಾನುವಾರ ಮಧ್ಯಾಹ್ನ ಆತ ಬಂದ. ಚಿಲುಕ ಹಾಕದಿದ್ದ ಬಾಗಿಲ ಮೇಲೆ ಮೃದು ವಾಗಿ ತಟ್ಟಿ ನನ್ನೆದುರು ಬಂದು ನಿಂತ.

"ಕುಳಿತುಕೊ" ಸಂಜ್ಞೆ ಮಾಡಿ ಸೂಚಿಸಿದೆ ಅವನಿಗೆ.

"ಇಲ್ಲ....ಲ್ಲಲ್ಲ....ಪರವಾಗಿಲ್ಲ...." ನಟ್ಟ ನೋಟದಿಂದ ತನ್ನ ಪಾದಗಳನ್ನೇ ನೋಡುತ್ತಾ, ನಡುಗುತ್ತಾ ಕೋಣೆಯ ಮಧ್ಯಭಾಗದಲ್ಲಿ ಬಂದು ನಿಂತ. ತಕ್ಷಣವೆ ಅವನ ತೊಯ್ದ ವಸ್ತ್ರಗಳನ್ನೂ ನೆನೆದ ಕೂದಲನ್ನೂ ಗಮನಿಸಿದೆ. ಅವನಿಗೆ ಟವಲ್ಲೊಂದನ್ನು ಕೊಡುತ್ತಾ ಕೇಳಿದೆ "ತುಂತುರು ಮಳೆ ಬೀಳುತ್ತಿದೆಯೇ?"

"ಹೌದು."

"ಕೊಡೆಯನ್ನೇಕೆ ನೀನು ತರಲಿಲ್ಲ?"

"....ಕೊಡೆ? ನನ್ನ ಕೆಲಸದ ನಡುವೆ ಅದನ್ನು ಉಪಯೋಗಿಸುವುದಿಲ್ಲ."

"ಕೆಲಸ? ಯಾವ ಕೆಲಸ?"

"ಕಲ್ಲುಗಳನ್ನು ಟ್ರಕ್ಕಿಗೆ ತುಂಬುವ ಕೆಲಸ. ನಾನು ಕೆಲಸ ಮಾಡುವ ತಾಣ ಇಲ್ಲಿಂದ ಬಹಳ ದೂರವಿಲ್ಲ. ಹಲವಾರು ತಿಂಗಳಿಂದ ನಾನಿಲ್ಲಿ ಕೆಲಸ ಮಾಡುತ್ತಿದ್ದೇನೆ. ಆದರೆ, ತೀರ ಇತ್ತೀಚೆಗೆ ನಿಮ್ಮ ವಿಳಾಸ ಸಿಕ್ಕಿತು."

"ನೀನೊಬ್ಬ....?"

"ಖಾಯಂ ಉದ್ಯೋಗಕ್ಕಾಗಿ ಕಾಯುತ್ತಿದ್ದೇನೆ ನಾನು. ತೋಡುಗೆಲಸದ ಕೂಲಿಯಾಳಿನ ಈ ಕೆಲಸ ತಾತ್ಕಾಲಿಕ. ಮಳೆ ಬೀಳುತ್ತಿರುವ ಈ ದಿನ ಸುದಿನ. ಇಲ್ಲದಿದ್ದಲ್ಲಿ ನಾನು ನಿಮ್ಮನ್ನು ಭೇಟಿ ಮಾಡಲು ಸಾಧ್ಯವಾಗುತ್ತಿರಲಿಲ್ಲ". ಅವನು ಮುಗ್ಧ ಸುಂದರ ಯುವಕನಂತೆ ತೋರಿದ.

"ಉದ್ಯೋಗಕ್ಕಾಗಿ ಕಾಯುತ್ತಿರುವಾತನೆ? ನನಗೆ ತುಂಬ ಆಶ್ಚರ್ಯವಾಯಿತು. ಇತಿಹಾಸ ಅಧ್ಯಾಪಕನಾದ ನನ್ನನ್ನು ಅವನೇಕೆ ಕಾಣಲು ಬಂದ? ಒಗಟಾಯಿತು. ಬದಲಿಸಲು ಅವನಿಗೆ ನನ್ನ ಬಟ್ಟೆಗಳನ್ನು ಕೊಟ್ಟೆ. ತಕ್ಷಣವೆ ಅವನು ತನ್ನ ನಡುವಂಗಿಯ ಜೇಬಿನಿಂದ ಒಂದು ಪುಟ್ಟ ಪುಸ್ತಕ ಹೊರತೆಗೆದ. ಪುಸ್ತಕಕ್ಕೆ ಹೊದಿಸಿದ್ದ ಪ್ಲಾಸ್ಟಿಕ್ ರಕ್ಷಾಪುಟದ ತುದಿಗಳಲ್ಲಿ ಒದ್ದೆಯಾಗಿತ್ತು. ಡೆಸ್ಕಿನ ಮೇಲೆ ಪುಸ್ತಕವನ್ನಿಟ್ಟ ಬಳಿಕ ಬಟ್ಟೆ ಬದಲಿಸಿದ.

ಪುಸ್ತಕವನ್ನೇ ನಾನು ಗಮನಿಸಿದೆ. ಅದು ಕ್ಸಿನ್‌ಹುವ ಚೀನೀ ಶಬ್ದಕೋಶ. ನನ್ನ ದೃಷ್ಟಿ ಪುಸ್ತಕದ ಕಡೆ ಹರಿದಿದ್ದನ್ನು ಕಂಡು ಅವನು ಪೇಚಾಡಿದ. ಬಳಿಕ ಪೆದ್ದು ಪೆದ್ದಾಗಿ ನಕ್ಕ. "ಪ್ರಾಚೀನ ಪ್ರೌಢ ಗ್ರಂಥಗಳನ್ನು ಓದಲು ಕಷ್ಟವಾಗುತ್ತದೆ. ನನಗೆ ಅರ್ಥವಾಗದ ಹಲವಾರು ವಾಕ್ಯಗಳಿರುತ್ತವೆ ಅವುಗಳಲ್ಲಿ....ಕುಳಿತು ಅವನು ತನ್ನ ಮಾತನ್ನು ಮುಂದುವರೆಸಿದ, "ಆದರೆ ನಿಮ್ಮ ಬರೆಹಗಳನ್ನೂ ಸೂಕ್ಷ್ಮಗ್ರಾಹಿ ತೀಕ್ಷ್ಣ ದೃಷ್ಟಿಯ ವಿಶ್ಲೇಷಣೆಗಳನ್ನೂ ಅರ್ಥಮಾಡಿಕೊಳ್ಳುತ್ತಾನೆ. ಈ ಹಿಂದೆ ಯಾರೂ ವಿವರಿಸದ ಹಲವಾರು ನೂತನ ವಿಷಯಗಳು ನಿಮ್ಮ ಪ್ರಬಂಧ ಲೇಖನಗಳಲ್ಲಿವೆ."

"ಅಂದರೆ?"

"ಬಂಡವಾಳಪದ್ಧತಿ ಗ್ರೀಕ್ ಮತ್ತು ರೋಮನ್ನರಿಂದ ಅಭಿವೃದ್ಧಿ ಹೊಂದಿದರೂ, ಅದನ್ನು ಸಂಪೂರ್ಣವಾಗಿ ಅಭಿವೃದ್ಧಿ ಪಡಿಸಲು ಚೀನ, ಭಾರತ ಮತ್ತು ರಷ್ಯ ದೇಶಗಳಿಗೆ ಅಸಾಧ್ಯ. ಏಕೆಂದರೆ ಬಂಡವಾಳಪದ್ಧತಿ ಕೇವಲ ಆರ್ಥಿಕ ವಿಷಯ ಮಾತ್ರವಲ್ಲದೆ ಸಾಂಸ್ಕೃತಿಕ ವಿಷಯವೂ ಆಗಿರುವುದರಿಂದ...."

ನನ್ನ ಲೇಖನವನ್ನು ಆಳವಾಗಿ ಅಭ್ಯಸಿಸದಿದ್ದರೂ ಲೇಖನದ ಸಾರವತ್ತಾದ ಅಂಶವನ್ನು ಆತ ಗುರುತಿಸಿರುವುದನ್ನು ಕಂಡು ಸಂತೋಷವಾಯಿತು. ಆತನ ಆಲೋಚನೆ ಸರಿಯಾದ ದಿಕ್ಕಿನಲ್ಲಿ ಹರಿದಿದೆಯೆನಿಸಿತು. ನನ್ನ ,ಸಮ್ಮತಿ ಅವನನ್ನು ಪ್ರೋತ್ಸಾಹಿಸಿತು. ಹಲವಾರು ವಿಚಾರಗಳನ್ನು ಅವನು ಮುಕ್ತವಾಗಿ ಹೇಳಲು ಸಾಧ್ಯವಾಗಿಸಿತು. ಅವನು ಹಲವಾರು ಇತಿಹಾಸ ಪುಸ್ತಕಗಳನ್ನು ಓದಿರುವನೆಂಬುದು ಖಾತ್ರಿಯಾಯಿತು.

"ಆಸ್ಥಾನದಲ್ಲಿ ವಿಶ್ವಾಸಘಾತುಕರಿಂದ ಯಾವಾಗಲೂ ರಾಜಭಕ್ತರಾದ ನಿಷ್ಠೆಯುಳ್ಳ ಅಧಿಕಾರಿಗಳು ಸೋಲುತ್ತಾರೆ. ಏಕೆಂದರೆ ರಾಜಭಕ್ತರು ನಿಷ್ಠೆಯಿಂದ ಪ್ರಾಮಾಣಿಕರಾಗಿರಲು ಬಯಸುತ್ತಾರೆ. ಆ ಕಡೆಗೇ ಅವರ ಗಮನವಿರುತ್ತದೆ. ಆದರೆ ದ್ರೋಹಿಗಳು ವಿಶ್ವಾಸಘಾತುಕರು ತಮ್ಮೆಲ್ಲ ಶಕ್ತಿಯನ್ನು ರಾಜಭಕ್ತರ ಪ್ರಾಮಾಣಿಕರ ಅವನತಿಗೆ, ನೀಚತನಕ್ಕೆ, ದುಷ್ಟತನಕ್ಕೆ ಬಳಸುವರು. ಕೊನೆಗೆ, ದ್ರೋಹಿಗಳೇ, ಮೋಸಗಾರರೇ ಜಯಗಳಿಸುವರು. ಇತಿಹಾಸವನ್ನು ಓದಿದ ಬಳಿಕ ನಾನು ಕಂಡುಕೊಂಡ ತೀರ್ಮಾನವಿದು. ಇದು ಸರಿಯೇ ತಪ್ಪೇ ?" ಅವನು ಕೇಳಿದ.

ಅವನು ತನ್ನ ವಿಚಾರದಿಂದ ನನ್ನನ್ನು ಸೆಳೆಯುತ್ತಿರುವಂತೆ ಭಾಸವಾಯಿತು. ನನ್ನ ವಿದ್ಯಾರ್ಥಿಗಳ ಪೈಕಿ ಕೆಲವರು ಇತಿಹಾಸವನ್ನು ಕೇವಲ ಡಿಪ್ಲೊಮಾಗಾಗಿ ಮಾತ್ರ ಅಧ್ಯಯನ ಮಾಡುವರು; ಎಲ್ಲೋ ಕ್ವಚಿತ್ ಮಂದಿ ನಿಜವಾಗಿಯೂ ಆಸಕ್ತಿಯುಳ್ಳವರು. ಅಂಥವರಲ್ಲಿ ಈತನೂ ಒಬ್ಬ. ತಮ್ಮ ಅಧ್ಯಯನ ವಿಷಯಗಳನ್ನು ಎಲ್ಲ ಅಧ್ಯಾಪಕರೂ ಪ್ರೀತಿಸುವರು. ಇತಿಹಾಸ ವಿಷಯ ನನಗಂತೂ ನಿಘಂಟುವಿನಂತೆ, ಶಬ್ದಕೋಶದಂತೆ. ಪ್ರತಿಯೊಂದು ಕಾಲದ ಪ್ರತಿಯೊಂದು ಘಟನೆಯ ಬಗ್ಗೆಯೂ ಸ್ಪೋಪಜ್ಞವಾಗಿ ತಿಳಿಸಿಕೊಡುತ್ತದೆ ಅದು. ಪ್ರವಾಹಕ್ಕೆದುರಾಗಿ ಸಾಗುವ ಉಗಿದೋಣಿಯಂತೆ. ಆಯಾ ಕಾಲದಲ್ಲಿ ಜರುಗಿದ ಮಾನವನ ಸುಖದುಃಖಗಳಿಗೆ ಕಾರಣಗಳನ್ನೂ ಫಲಿತಾಂಶಗಳನ್ನೂ ಜನ ಗುರುತಿಸುವುದು ಇತಿಹಾಸದಿಂದ ಮಾತ್ರವೆ; ಅದರ ಅಧ್ಯಯನದಿಂದಲೇ. ಮತ್ತೊಂದು ವಿಧದಲ್ಲಿ ಹೇಳುವುದಾದರೆ ಇತಿಹಾಸ ಇಸಹಾಸವೇ ಹೊರತು ಬೇರೆಯಲ್ಲ. ಪ್ರಾಚೀನ ಸಂಗತಿಗಳ ಕಟ್ಟುಗಳ ಮೊತ್ತ, ರಾಶಿ, ಯಾವುದೇ ವಸ್ತುಲಾಭವಿಲ್ಲದ ಒಂದು ಬಗೆಯ ವಿಜ್ಞಾನ. ಆದ್ದರಿಂದ ಇದರ ಅಧ್ಯಯನದಲ್ಲಿ ಯಾರು ತಾನೆ ಆಸಕ್ತಿ ವಹಿಸುತ್ತಾರೆ? ಸ್ವಂತ ಆಸಕ್ತಿಯಿಂದ ಇತಿಹಾಸ ಓದುವ ಇಂಥ ಯುವಕನನ್ನು ಕಂಡಾಗ ಅಚ್ಚರಿಯಲ್ಲದೆ ಮತ್ತೇನು? ಅವನ ಮನದಲ್ಲೇನು ಮಂಥನ ನಡೆಯುತ್ತಿದೆ? ವಿಭಿನ್ನ ವೃತ್ತಿಗಳಿಗೆ ಸೇರಿದವರೂ ಯಾವ ಬಾಂಧವ್ಯಯೋಗ ನಮ್ಮನ್ನು ಒಂದುಗೂಡಿಸಿದೆ?

"ಇತಿಹಾಸ ಪುಸ್ತಕಗಳನ್ನು ನೀನು ಓದಿರುವುದರಿಂದ, ವಿಶ್ವವಿದ್ಯಾಲಯದಲ್ಲಿ ಅದನ್ನು ಓದಲು ತಯಾರಿ ನಡೆಸಿರುವೆಯಾ ?" ನಾನು ಕೇಳಿದೆ.

ನನ್ನ ಮಾತಿನಿಂದ ಅವನು ತಬ್ಬಿಬ್ಬಾದ. ಬಳಿಕ "ಇಲ್ಲ, ಇಲ್ಲ," ಎಂದು ಕಷ್ಟಪಟ್ಟು ನುಡಿದ. "ಪ್ರವೇಶ ಪರೀಕ್ಷೆಯಲ್ಲಿ ನಾನು ತೇರ್ಗಡೆಯಾಗುವುದಿಲ್ಲ. ಚೀನೀ ಹಾಗೂ ವಿದೇಶಿ ಭಾಷಾಜ್ಞಾನ ನನಗೆ ತುಂಬಾ ಕಡಿಮೆ. ವರ್ಷದ ತರುವಾಯ ಈಗಲೇ ನಾನು ಇಲ್ಲಿಗೆ ಬಂದಿರುವುದು. ಖಾಯಂ ಉದ್ಯೋಗಕ್ಕಾಗಿ ನಾನು ಪ್ರಯತ್ನಪಡುತ್ತಿದ್ದೇನೆ."

"ಮೊದಲೆಲ್ಲಿದ್ದೆ ?"

"ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದೆ. ಸಾಂಸ್ಕೃತಿಕ ಕ್ರಾಂತಿ ಆರಂಭಗೊಂಡಾಗ ಮಾಧ್ಯಮಿಕ ಶಾಲೆಯಲ್ಲಿದ್ದೆ. ಆಗಲೇ ನಾನು ಎಲ್ಲವನ್ನೂ ಕಳೆದುಕೊಂಡೆ...." ದೂರದಲ್ಲೆಲ್ಲೋ ಅವನ ದೃಷ್ಟಿ ಹರಿದಾಡಿತು. ಭಾರವಾದ ಹೃದಯದಿಂದ

ಅವನು ಹೇಳಿದ, "ವಿಶ್ವವಿದ್ಯಾಲಯ....ಅಲ್ಲಿ ನನಗೆ ಅವಕಾಶವಿಲ್ಲ. ನನಗೆ ಏನೇನೂ ತಿಳಿವಳಿಕೆಯಿಲ್ಲ, ವಿಷಯಜ್ಞಾನವಿಲ್ಲ."

ಅವನ ಪ್ರಾಮಾಣಿಕತೆ ನನಗೆ ವ್ಯಥೆಯನ್ನುಂಟು ಮಾಡಿತು. ನನ್ನ ಸುತ್ತಮುತ್ತಲಿನವರೆಲ್ಲ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ಇಂದಿನ ಗಣ್ಯವ್ಯಕ್ತಿಗಳು ಪ್ರಮುಖರು. ವಿಶ್ವವಿದ್ಯಾಲಯದ ಆವರಣಕ್ಕೆ ದೂರವಾಗಿ ಖಾಯಂ ಉದ್ಯೋಗವನ್ನು ಅರಸುತ್ತಿರುವ ಅವನಂಥ ಯುವಕರನ್ನು ತಡೆಯುವ ಬಗ್ಗೆ ಎಂದಾದರೂ ನಾವು ಯೋಚನೆ ಮಾಡಿದ್ದೇವೆಯೆ ?"

ಅವನಿಗೋಸ್ಕರ ನಾನು ಚಹಾ ಸಿದ್ಧಪಡಿಸಿದೆ.

"ನಿನ್ನಷ್ಟಕ್ಕೆ ನೀನೇ ಓದಿಕೊಳ್ಳುವೆಯಾ ?"

ತಲೆಯಾಡಿಸುತ್ತಾ ಅವನು ಹೇಳಿದ, "ಕೆಲವು ವರ್ಷಗಳ ಹಿಂದೆ ಇತಿಹಾಸದ ಅಧ್ಯಾಪಕರೊಬ್ಬರು ಓದಲು ಕೆಲವು ಪುಸ್ತಕಗಳನ್ನು ಕೊಟ್ಟಿದ್ದರು.... ಅನಂತರ ಅವರು ಬೇರೊಂದು ಸ್ಥಳಕ್ಕೆ ಹೊರಟುಹೋದರು. ಬಳಿಕ ಬೇರೆಯವರ ಬಳಿ ನಾನು ಪುಸ್ತಕಗಳನ್ನು ಎರವಲು ಪಡೆಯಲು ಪ್ರಯತ್ನಪಟ್ಟೆ. ಇತಿಹಾಸದ ಪುಸ್ತಕಗಳನ್ನು ಓದುವಾಗ ನನಗುಂಟಾಗುವ ಸಂತೋಷವನ್ನು ವ್ಯಕ್ತಪಡಿಸಲು ನಿಜವಾಗಿ ನನಗೆ ಸಾಧ್ಯವಾಗುವುದಿಲ್ಲ. ಸತ್ಯಸಂಗತಿಗಳನ್ನು ಪ್ರತಿಬಿಂಬಿಸುವಲ್ಲಿ ಇತಿಹಾಸ ಕನ್ನಡಿಯಂತೆ ಎಂದು ನಾನು ಭಾವಿಸಿದ್ದೇನೆ. ಇತಿಹಾಸವನ್ನು ಓದಿದ ತರುವಾಯ ಎಷ್ಟೋ ಸಂಗತಿಗಳನ್ನು ಸ್ಪಷ್ಟವಾಗಿ ಖಚಿತವಾಗಿ ನಾವು ತಿಳಿದುಕೊಳ್ಳಬಲ್ಲೆವು."

"ನೀನು ನಮ್ಮ ವಿಶ್ವವಿದ್ಯಾಲಯಕ್ಕೆ ಬಂದು ಇತಿಹಾಸ ತರಗತಿಗಳಲ್ಲೇಕೆ ಕುಳಿತುಕೊಳ್ಳಬಾರದು" ಅವನ ಬಗೆಗಿನ ಮರುಕದಿಂದ ಹಾಗೆ ಹೇಳಿದೆ. "ನೀನು ಇಷ್ಟಪಡುವುದಾದರೆ, ನಿನಗಾಗಿ ನಾನು ಆ ಏರ್ಪಾಡನ್ನು ಮಾಡಿಕೊಡಬಲ್ಲೆ."

ನನ್ನ ಮಾತನ್ನು ಕೇಳಿ ಅವನ ಮುಖ ಸಂತೋಷದಿಂದ ಅರಳಿತು. ಕಣ್ಣುಗಳು ಹೊಳೆದುವು. ಆದರೆ ಆ ಸಂತೋಷ ಬಹುಕಾಲ ಉಳಿಯದೇ ಹೋಯಿತು.

"ಇದು ಅಸಾಧ್ಯ. ತಿಂಗಳ ಮೂವತ್ತು ದಿನಗಳೂ ನಾನು ಹಗಲುಹೊತ್ತು ದುಡಿಯಬೇಕು. ನನ್ನ ತಾಯಿ ತಂದೆ ಇದಕ್ಕೆ ಅವಕಾಶ ಕೊಡುವುದಿಲ್ಲ....ಈ ಸಂಗತಿ ನಿಮಗೂ ತಿಳಿದಿರಬಹುದು...."

ತಲೆ ತಗ್ಗಿಸಿದ ಆತ ಪದಗಳಿಗಾಗಿ ತಡಕಾಡುತ್ತಿರುವನೆಂದೆನಿಸಿತು. ಕ್ಷಣಕಾಲ ಮೌನ. ಅನಂತರ ಅವನು ತನ್ನ ಮಾತನ್ನು ಮುಂದುವರಿಸಿದ. "ನಿಮಗೆ ತಿಳಿದಿಲ್ಲದ ಒಂದು ಸಂಗತಿ ಹೇಳುವೆ. ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆಯಲ್ಲಿ ನಾನು ಅನುತ್ತೀರ್ಣನಾದಾಗ, ನನ್ನ ತಾಯಿತಂದೆಗೆ ನಾನು ಮಾರುಕಟ್ಟೆಯಲ್ಲಿ ಹುರುಳಿಸೊಪ್ಪನ್ನು ಮಾರಾಟ ಮಾಡಿ ಹಣ ಗಳಿಸುವುದು ಬೇಕಾಗಿತ್ತು. ಇದರಿಂದ ದಿನಕ್ಕೆ ಆರರಿಂದ ಏಳು ಯೆನ್ ದೊರೆಯುತ್ತಿತ್ತು. ಆದರೆ ಈ ಕೆಲಸವನ್ನು ಮಾಡಲು ನಾನು ನಿರಾಕರಿಸಿದೆ. ದಿನದಲ್ಲಿ ಹತ್ತು ಗಂಟೆಗೂ ಹೆಚ್ಚು ಕಾಲ ನಾನು ದುಡಿದರೆ, ಓದಲು ನನಗೆ ಸಮಯವೇ ಸಿಗುವುದಿಲ್ಲ. ಆದ್ದರಿಂದ ಕಡಿಮೆ ಹಣ ದೊರೆತರೂ ನಾನು ಈಗ ಮಾಡುತ್ತಿರುವ ತೋಡುಗೆಲಸದ ಕೂಲಿಯಾಳಿನ ಕೆಲಸ

ವನ್ನೇ ಇಷ್ಟಪಡುತ್ತೇನೆ. ಟ್ರಕ್ಕುಗಳನ್ನು ಭರ್ತಿಮಾಡಿದ ತರುವಾಯ ಓದಲು ಕೊಂಚ ಸಮಯ ಸಿಗುತ್ತದೆ."

ಅವನು ತಂದಿದ್ದ ಕೋಶವನ್ನು ಕುರಿತು ಯೋಚಿಸುತ್ತಿದ್ದೆ.

"ನಾನೊಬ್ಬ ತಾತ್ಕಾಲಿಕ ಉದ್ಯೋಗಿಯಾದ್ದರಿಂದ ನಾನು ರಜೆ ಕೇಳಲು ಸಾಧ್ಯವಾಗುವುದಿಲ್ಲ. ಪ್ರತಿ ತಿಂಗಳು ನನ್ನ ಸಂಬಳವನ್ನು ನಾನು ಒಪ್ಪಿಸುವುದು........" ಅವನು ಇಷ್ಟು ಹೇಳಿ ಏಕೋ ಮಾತನ್ನು ತಡೆದ.

"ಹಾಗಾದರೆ ನೀನು ಹೇಗೆ ಓದುತ್ತೀ....?" ನಾನು ಕೇಳಿದೆ.

"ರಾತ್ರಿ ಒಂಬತ್ತು ಗಂಟೆ ತರುವಾಯ. ನಾನೂ ನನ್ನ ಕಿರಿ ಸಹೋದರಿಯೂ ಒಂದು ಸಣ್ಣ ಕೊಠಡಿಯಲ್ಲಿದ್ದೇವೆ. ನನ್ನ ಬಳಿ ಹಾಸಿಗೆ ಹಾಗೂ ಒಂದು ಡೆಸ್ಕ್ ಇದೆ. ನನ್ನ ತಂಗಿ ತನ್ನ ಹೋಂವರ್ಕ್‌ನ್ನು ಮುಗಿಸಿದ ಬಳಿಕ ಡೆಸ್ಕನ್ನು ನಾನು ಉಪಯೋಗಿಸಿಕೊಂಡು ಓದಲು ಶುರು ಮಾಡುತ್ತೇನೆ. ರಾತ್ರಿ ಒಂಬತ್ತು ಗಂಟೆಯ ಬಳಿಕ ಉಳಿದ ವೇಳೆಯೆಲ್ಲವೂ ನನ್ನದೇ...." ತಾನು ಸುಖಿ, ಅದೃಷ್ಟವಂತನೆಂಬ ಭಾವನೆಯಿಂದ ಅವನು ನಕ್ಕು ನುಡಿದ. ತನ್ನ ಸಣ್ಣ ಕೊಠಡಿಯ ಬಗ್ಗೆಯೇ ಹೆಚ್ಚು ವರ್ಣನಾತ್ಮಕವಾಗಿ ಅವನು ಹೇಳುತ್ತಿದ್ದ. ಹೆಮ್ಮೆ ಪಟ್ಟಿದ್ದ. ಅವನ ಸಣ್ಣ ಕೊಠಡಿಯೊಂದಿಗೆ ನಾನು ವಾಸಿಸುತ್ತಿರುವ ಹದಿನಾಲ್ಕು ಚದರದ ನನ್ನ ಕೊಠಡಿ ಸ್ವರ್ಗವೇ ಎಂದುಕೊಂಡೆ.

ಕತ್ತಲೆ ಕಾಲಿಟ್ಟಿತು. ದೀಪ ಬೆಳಗಿಸಿದೆ.

"ಹೋ! ಹೋ!" ಎನ್ನುತ್ತಾ ತಕ್ಷಣ ಎದ್ದು ನಿಂತು ಹಾಕಿಕೊಂಡಿದ್ದ ನನ್ನ ಸ್ವೆಟರನ್ನು ತೆಗೆದಿಟ್ಟು ಅವನ ಕೋಶವನ್ನು ಕೈಗೆತ್ತಿಕೊಂಡ. "ನಾನೀಗ ಹೊರಡಬೇಕು. ನನ್ನ ಕೋಣೆಗೆ ಹೋಗಿ ನನ್ನ ತಮ್ಮ ತಂಗಿ ತಮ್ಮ ಹೋಂವರ್ಕ್ ಮಾಡುವಷ್ಟರಲ್ಲಿ ರಾತ್ರಿಯ ಊಟವನ್ನು ಸಿದ್ಧಪಡಿಸಬೇಕು." ಅವನ ಒದ್ದೆ ಬಟ್ಟೆಗಳನ್ನೇ ಮತ್ತೆ ಹಾಕಿಕೊಂಡ.

"ಹೃತ್ಪೂರ್ವಕ ವಂದನೆಗಳು, ಮಿಸ್ಟರ್ ಪೆಂಗ್! ನನ್ನ ಬಗೆಗಿನ ಅಭಿಮಾನಕ್ಕಾಗಿ ನಾನು ಋಣಿ. ತಮ್ಮ ಅಮೂಲ್ಯ ಸಮಯವನ್ನು ಹಾಳುಮಾಡಿದ್ದಕ್ಕಾಗಿ ಕ್ಷಮೆ ಕೋರುತ್ತೇನೆ."

ಮೊಗಸಾಲೆಯ ಕತ್ತಲಲ್ಲೂ ಅವನ ಕಣ್ಣುಗಳು ಹೊಳೆದುವು. ಅವನು ಕೇಳಲೋ ಬೇಡವೋ ಎಂಬ ಭಾವನೆಯಿಂದ ಹಿಂಜರಿಯುತ್ತಾ ಕೊನೆಗೂ ಕೇಳಿದ, "ನಿಮ್ಮಿಂದ ಪುಸ್ತಕವೊಂದನ್ನು ನಾನು ಎರವಲು ಪಡೆಯಬಹುದೆ?"

"ಯಾವ ಪುಸ್ತಕ" .

"ಯಾನ್ ಫು ಅನುವಾದಿಸಿರುವ 'ವಿಕಾಸವಾದ' ಎಂಬ ಪುಸ್ತಕ"

"ಸಾರಿ, ಆ ಪುಸ್ತಕ ನನ್ನ ಬಳಿ ಇಲ್ಲ. ಆದರೆ ವಿಶ್ವವಿದ್ಯಾಲಯದ ಲೈಬ್ರರಿಯಿಂದ ತಂದುಕೊಡುತ್ತೇನೆ, ನಿನಗಾಗಿ." ನನಗೆ ಆಶ್ಚರ್ಯವಾಯಿತು. ಆ ಪುಸ್ತಕದಲ್ಲಿರುವುದು ಟಿ ಎಚ್ ಹಕ್ಸ್‌ಲಿಯ 'ಎವೊಲ್ಯೂಷನ್ ಅಂಡ್ ಎಥಿಕ್ಸ್' ಎಂಬ ಪುಸ್ತಕದ ಮೊದಲೆರಡು ಅಧ್ಯಾಯಗಳ ಸಾರಾಂಶ. ಸಂಕ್ಷಿಪ್ತ ವಿವರಣೆ. ಅದನ್ನೋದಿ ಇವನು ಅರ್ಥಮಾಡಿಕೊಳ್ಳಬಲ್ಲನೆ? ಎಂಬುದಾಗಿ ಯೋಚಿಸಿದೆ. ತಕ್ಷಣವೇ ಅವನಿಗೆ ಕೊಡೆ ಕೊಡುವ ಮನಸ್ಸಾಯಿತು. ಅದನ್ನು

ಕೊಡುವಷ್ಟರಲ್ಲಿ ಅವನು ಕತ್ತಲಲ್ಲೇ ಕರಗಿ ಹೋಗಿದ್ದ.

ಇನ್ನೂ ಮಳೆ ನಿಂತಿರಲಿಲ್ಲ.

"ನನ್ನ ಹೆಸರು ಕ್ಸು-ಲಿ!" ಮಳೆಯ ಸದ್ದಿನೊಂದಿಗೇ ದೂರದಲ್ಲೆಲ್ಲೋ ಹೇಳಿದಂತೆ ಕೇಳಿಸಿತು.

ಇವನೇ ಕ್ಸು-ಲಿ, ಈ ತರುಣನೇ, ಮನೆ ಬಿಟ್ಟು ಓಡಿ ಹೋಗಿರುವುದು? ತಾಯಿ ತಂದೆ ಬಗ್ಗೆ ಗೌರವ ಭಾವನೆಯುಳ್ಳ, ತಮ್ಮ ತಂಗಿ ಬಗ್ಗೆ ಅಪಾರ ಪ್ರೇಮವುಳ್ಳ ಆತ ಅವರೆಲ್ಲರಿಂದ ಏಕೆ ದೂರಹೋದ ಕಾರಣ ಗೊತ್ತಾಗುತ್ತಿಲ್ಲ. ಆದರೆ ಅವನ ಮನದ ಲ್ಲೇನೋ ಆತಂಕವಿದ್ದಂತಿತ್ತು. ಆ ದಿನ ರಾತ್ರಿ ಅವನೊಡನೆ ನಾನು ಮಾತಾಡಿದಾಗ ಈ ವಿಷಯ ಸ್ಪಷ್ಟವಾಗಿತ್ತು.

ಚಹಾ ತಣ್ಣಗಾದ್ದರಿಂದ ನಾನು ಕುಡಿಯ ಲಾಗಲಿಲ್ಲ. ಆ ರಾತ್ರಿ ನನಗೆ ನಿದ್ದೆ ಬರಲಿಲ್ಲ. ಪುಸ್ತಕವನ್ನು ನನ್ನಿಂದ ಎರವಲು ಪಡೆಯಲು ಅವನು ಮತ್ತೆ ಬಂದೇಬರುತ್ತಾ ನೆಂಬುದರಲ್ಲಿ ನನಗೆ ಸಂಶಯವಿರಲಿಲ್ಲ. ಏಕೆಂದರೆ ಆ ಪುಸ್ತಕ ಅವನಿಗೆ ಅಗತ್ಯವಾಗಿ ಬೇಕಾಗಿತ್ತು. ಯಾವುದೇ ತೊಂದರೆಯಲ್ಲಿ ಅವನು ಸಿಕ್ಕಿ ಹಾಕಿಕೊಳ್ಳದಿರಲಿ ಎಂದು ಆಶಿಸಿದೆ.

ಮೂರನೆಯ ದಿನ ಪ್ರಾಂತೀಯ ಇತಿಹಾಸ ಸಂಶೋಧನಾ ಸಂಸ್ಥೆಯು ಏರ್ಪಡಿ ಸಿದ್ದ ಸಭೆಯಲ್ಲಿ ಭಾಗವಹಿಸಬೇಕಾದ್ದರಿಂದ ಸಂಜೆ ನಾಲ್ಕರ ತನಕ ನಾನು ನನ್ನ ಕೊಠಡಿಗೆ ಬರಲು ಸಾಧ್ಯವಾಗಲಿಲ್ಲ. ನಾನು ಸಂಜೆ ಬಂದು ಬಾಗಿಲು ತೆರೆದಾಗ ನೆಲದ ಮೇಲೆ ಬಿದ್ದಿದ್ದ ಬಿಳಿ ಹಾಳೆಯ ಚೂರೊಂದನ್ನು ಕಂಡು ಎತ್ತಿಕೊಂಡು ಅದರಲ್ಲಿದ್ದುದನ್ನು ಓದಿದೆ:

ಮಿಸ್ಟರ್ ಪೆಂಗ್,

ನಿಮ್ಮಿಂದ ಪುಸ್ತಕವನ್ನು ಎರವಲು ಪಡೆಯಲು ನಾನು ಬಂದಿದ್ದೆ. ಆದರೆ ನೀವು ಇರಲಿಲ್ಲ. ನಾನೀಗ ಮನೆಯಲ್ಲಿಲ್ಲ. ನನಗೆ ಒಳ್ಳೆಯ ಹೊಸದೊಂದು ಕೆಲಸ ಸಿಕ್ಕಿದೆ. ನನ್ನ ಹೊಸ ವಿಳಾಸವಿದು: ಲಾಜಿಸ್ಟಿಕ್ಸ್ ಟೀಮ್, ೭೩೮೮ ವಸತಿ ನಿರ್ಮಾಣ ಕೇಂದ್ರ ಕಾರ್ಯಸ್ಥಾನ. ನಿಮ್ಮನ್ನು ಭೇಟಿಯಾದಾಗ ನನ್ನ ಬಗೆಗಿನ ಉಳಿದೆಲ್ಲ ವಿಚಾರಗಳನ್ನು ತಿಳಿಸುತ್ತೇನೆ.

ಹೆಚ್ಚಾಗಿ ಓದುವ ಅಭ್ಯಾಸವುಳ್ಳ ಹಾಗೂ ಯಾವುದೇ ಉತ್ತಮ ಶೈಕ್ಷಣಿಕ ತಳಹದಿ ಯಿಲ್ಲದ ತರುಣರು ಬರೆಯುವಂತೆ ಅವನ ಬರೆಹವಿತ್ತು. ಆದರೂ ಅವನು ಇಷ್ಟ ಪಟ್ಟಂತಹ ಒಂದು ಒಳ್ಳೆಯ ಉದ್ಯೋಗ ಸಿಕ್ಕಿರುವ ಬಗ್ಗೆ ನನಗೆ ಸಂತೋಷ ವಾಯಿತು.

"೭೩೮೮" ಎಂಬುದು ವಾಯುಪಡೆಗೆ ಸಂಬಂಧಿಸಿದ ದೊಡ್ಡ ಕಟ್ಟಡ ನಿರ್ಮಾಣ ಯೋಜನೆಯಾಗಿತ್ತು. ಹೆಚ್ಚು ತೊಂದರೆ ಯಿಲ್ಲದೆ ನಾನು ಆ ಕೇಂದ್ರ ಕಾರ್ಯಸ್ಥಾನ ವನ್ನು ಹುಡುಕಿದೆ. ಅಲ್ಲಿ ಸಣ್ಣಸಣ್ಣ ಸೂಚನಾಫಲಕಗಳನ್ನು ಹೊಂದಿದ್ದ ಉಬ್ಬು ತಗ್ಗಿನ ಕಬ್ಬಿಣದ ತಗಡಿನ ಮೇಲ್ಛಾವಣಿ ಯುಳ್ಳ ಪುಟ್ಟಪುಟ್ಟ ಸರಳವಾದ ಗುಡಿಸಿಲು ಗಳು ಸಾಲಾಗಿದ್ದುವು. ನಾನು ಲಾಜಿಸ್ಟಿಕ್ ಟೀಮ್ ಕಚೇರಿಗೆ ಹೋಗಿ ಕ್ಸು-ಲಿ ಬಗ್ಗೆ ವಿಚಾರಿಸಿದೆ. ಸೈನಿಕನಂತೆ ತೋರುತ್ತಿದ್ದ ಒಬ್ಬಾತ ಆಕಳಿಸುತ್ತಾ, ಕ್ಸು-ಲಿ! ಯಾರು? ನಾವು ಆ ಹೆಸರನ್ನು ಕೇಳೇ ಇಲ್ಲವಲ್ಲ."

"ಮತ್ತೊಮ್ಮೆ ಯೋಚಿಸಿನೋಡಿ, ಪರಿಶೀಲಿಸಿ. ಅವನೊಬ್ಬ ತಾತ್ಕಾಲಿಕ ಕೆಲಸ

ಗಾರ. ಹೊಸದಾಗಿ ಕೆಲಸಕ್ಕೆ ಸೇರಿರುವವನು."

"ತಾತ್ಕಾಲಿಕ ಕೆಲಸಗಾರರನ್ನು ಇಲ್ಲಿ ತೆಗೆದುಕೊಳ್ಳುವುದಿಲ್ಲ. ಅದಕ್ಕೆ ಸಂಬಂಧಿಸಿದ ಯಾವ ಕೆಲಸವೂ ಇಲ್ಲಿಲ್ಲ." ನನ್ನನ್ನು ನಿರ್ಲಕ್ಷಿಸುತ್ತಾ ದೂರವಾಣಿ ಕರೆಗೆ ಉತ್ತರಿಸಲು ತಿರುಗಿದ.

ಕ್ಸ್ಸ-ಲಿ ಬಗ್ಗೆ ಇವರಿಗೇಕೆ ತಿಳಿದಿಲ್ಲ ಎಂದು ಆಶ್ಚರ್ಯಪಡುತ್ತಾ ನಾನು ಸಿಟ್ಟಿನಿಂದ ಕಚೇರಿಯಿಂದ ಹೊರಬಂದೆ. ಒಳ್ಳೆಯ ಉದ್ಯೋಗ ಸಿಕ್ಕಿದೆಯೆಂದು ಕ್ಸ್ಸ-ಲಿ ಹೇಳಿದ್ದ. ಅವನೇಕೆ ನನಗೆ ಸುಳ್ಳುಹೇಳಿದ? ಅವನನ್ನು ಎಲ್ಲಿ ಹುಡುಕಲಿ?

ಅವನ ಬಗ್ಗೆ ಮತ್ಯಾರನ್ನಾದರೂ ಕೇಳೋಣವೆಂದುಕೊಂಡು ನನ್ನ ಬೈಸಿಕಲ್ಲನ್ನೂ ಏರಿ ಆ ಜಾಗದಲ್ಲೆಲ್ಲ ಸುತ್ತಿದೆ. ಕತ್ತಲಾಗುವ ಸಮಯ. ತುಸುದೂರದಲ್ಲಿ ಒಂದು ಸಣ್ಣ ಮರದ ಗುಡಿಸಿಲಿನ ಕೊಳವೆಯಿಂದ ಹೊರಬರುತ್ತಿದ್ದ ಹೊಗೆಯನ್ನು ಕಂಡು ಅತ್ತ ಸಾಗಿದೆ. ಗುಡಿಸಿಲಿನೊಳಗೆ ಯಾರೋ ಅವಿಶ್ರಾಂತವಾಗಿ ಕಾರ್ಯಮಗ್ನರಾಗಿದ್ದರು. ಹತ್ತಿರ ಹೋಗಿ ನಾನು ಕೂಗಿದೆ—

ಒಳಗಿದ್ದ ವ್ಯಕ್ತಿ ಕೆಳಗೆ ಬಿದ್ದಿದ್ದ ವಸ್ತುವನ್ನು ಮೇಲೆತ್ತಲು ಬಾಗಿದ್ದ. ನನ್ನ ದನಿಯಿಂದ ಆತ ತಿರುಗಿದ. ಅರೆ! ಕ್ಸ್ಸ-ಲಿ!

"ಕ್ಸ್ಸ-ಲಿ!" ನಾನು ಸಂತೋಷದಿಂದ ಕೂಗಿದೆ.

ನನ್ನನ್ನು ನೋಡಿ ಅವನಿಗೆ ಆಶ್ಚರ್ಯವಾಯಿತು. ಸಂತೋಷದಿಂದ ಅವನ ಮುಖ ಅರಳಿತು. ಅವನನ್ನು ಭೇಟಿ ಮಾಡಲು ನಾನು ಬರಬಹುದೆಂಬ ನಂಬಿಕೆ ಅವನಿಗಿದ್ದಂತಿರಲಿಲ್ಲ. ನಗುತ್ತಾ ಸ್ವಾಗತಿಸಿದ "ಮಿಸ್ಟರ್ ಪೆಂಗ್"—

"ನಿನ್ನ ಕಾಗದ ಸಿಕ್ಕಿತು. ಪುಸ್ತಕ ನಿನಗೆ ಕೊಡಲು ನಾನಿಲ್ಲಿಗೆ ಬಂದೆ ಹಾಗೂ ನಿನ್ನ ಹೊಸ ಉದ್ಯೋಗ ಯಾವುದು ಎಂಬುದನ್ನು ತಿಳಿಯುವ ಕುತೂಹಲದಿಂದಲೂ ಬಂದಿದ್ದೇನೆ" ಎಂದೆ ಸ್ವಾಭಾವಿಕವಾಗಿ.

ನನ್ನದು "ನೀರು ಕುದಿಸುವ ಕೆಲಸ" ಅವನು ಉತ್ತರಿಸಿದ.

"ನೀರು ಕುದಿಸುವುದು?"

"ಹೌದು. ಬಾಯ್ಲರ್ ರೂಮಿನಲ್ಲಿ ನೀರು ಕುದಿಸುತ್ತೇನೆ." ಕೈಲಿದ್ದ ಸಲಕರಣೆಗಳನ್ನು ಕೆಳಗಿಟ್ಟು ಒಳಗಡೆಗೆ ಕೈಬೆರಳು ಮಾಡಿ ತೋರಿಸುತ್ತಾ "ಅದೇ ನನ್ನ ಹೊಸ ಮನೆ" ಎಂದ.

ತಲೆ ತಗ್ಗಿಸಿ ಒಳಗೆ ಹೋದೆ. ಮೂಲೆಯಲ್ಲೊಂದು ಮರದ ಮಂಚ. ಅದರ ಮೇಲೆ ತೇಪೆ ಹಾಕಿ ಮಾಡಿದ ಒಂದು ಕೌದಿ. ಪಕ್ಕದಲ್ಲೇ ಮರದ ಪೆಟ್ಟಿಗೆ, ಹಾಸಿಗೆಯನ್ನು ಸೆಲೊಫೇನ್* ಹಾಳೆಯಿಂದ ಮುಚ್ಚಲಾಗಿತ್ತು. ಎದುರು ಬಾಯ್ಲರ್ ಇತ್ತು.

"ದಯೆಯಿಟ್ಟು ಸ್ವಲ್ಪ ತಡೆಯಿರಿ, ಎಷ್ಟೊಂದು ಧೂಳಿದೆ!" ಎನ್ನುತ್ತಾ ಚಿಂದಿ ಬಟ್ಟೆ ತೆಗೆದುಕೊಂಡು ಸೆಲೊಫೇನ್ ಹಾಳೆ ಮೇಲೆಲ್ಲಾ ಒರೆಸಿ ಶುಚಿಗೊಳಿಸಿದ. "ಈಗ ಕುಳಿತುಕೊಳ್ಳಿ" ಎಂದ, ಆತ್ಮೀಯವಾಗಿ.

ಹಾಸಿಗೆ ಮೇಲೆ ಕುಳಿತೆ. ಅಸ್ತವ್ಯಸ್ತ

---

* ಸೆಲೋಫೇನ್ : ವಸ್ತುಗಳನ್ನು ಮುಚ್ಚಲು, ಸುತ್ತಲು ದಾರುಮಜ್ಜದಿಂದ ಮಾಡಿದ ಪಾರದರ್ಶಕ ಪದಾರ್ಥ.

ಹಾಸಿಗೆಯಂದು. ಎಲ್ಲ ಕಡೆಯೂ ಮುದುರಿ ಕೊಂಡಿತ್ತು. ಕುಳಿತುಕೊಳ್ಳಲು ಅನಾನುಕೂಲ. ಹೇಗೋ ಕುಳಿತೆ. ಹಾಸಿಗೆಯ ಒಂದು ಮಗ್ಗುಲನ್ನು ಎತ್ತಿ ನೋಡಿದೆ. ಇತಿಹಾಸಕ್ಕೆ ಸಂಬಂಧಿಸಿದ ಅನೇಕ ನಿಯತ ಕಾಲಿಕೆಗಳು ಅಲ್ಲಿದ್ದವು!

ಹೆಗಲು ಕುಣಿಸುತ್ತಾ ಕ್ಸು-ಲಿ ಮುಗುಳ್ನಗೆ ಬೀರಿದ. "ಓದಲು ಈಗ ನನಗೆ ಸಾಕಷ್ಟು ಸಮಯ ಸಿಗುತ್ತದೆ. ಬಾಯ್ಲರಿನಲ್ಲಿ ನೀರು ಕುದಿಸುವುದು, ಕಲ್ಲಿದ್ದಲನ್ನು ಹಾಕಿ ಬೆಂಕಿಯನ್ನು ಸರಿಪಡಿಸುವುದು, ಇಷ್ಟು ನನ್ನ ಕೆಲಸ. ರಾತ್ರಿ ಪಾಳಿಯ ಕೆಲಸಗಾರರು ನೀರನ್ನು ಹೆಚ್ಚು ಕುಡಿಯುವುದಿಲ್ಲ. ಒಂದು ಬಾಯ್ಲರ್ ತುಂಬ ನೀರು ಸಾಕು. ಹೀಗಾಗಿ ನನಗೆ ಓದಲು ವೇಳೆ ಸಿಗುತ್ತದೆ. ಅಡುಗೆ ತೊಂದರೆಯೂ ಇಲ್ಲ." ಅವನನ್ನು ನೋಡಿದರೆ ಸಂತೋಷವಾಗಿ ತೃಪ್ತಿಯಿಂದ ಇದ್ದಾನೆ ಎನಿಸಿತು. ಸುತ್ತಲೂ ಕಣ್ಣಾಡಿಸಿದೆ. ಜೌಗು ನೆಲ, ತಗ್ಗಾದ ಒಳಮಾಳಿಗೆ ಮತ್ತು ಮಂದ ಪ್ರಕಾಶ ನನ್ನನ್ನು ಖಿನ್ನನಾಗಿಸಿತು.

"ಇಲ್ಲಿಗೇಕೆ ವಾಸ್ತವ್ಯ ಬದಲಾಯಿಸಿದೆ? ಸಂಬಳ ಹೆಚ್ಚಾಗಿ ಸಿಗುತ್ತಿದೆಯೇ?" ನನ್ನ ಪ್ರಶ್ನೆಗಳು ಎಷ್ಟೊಂದು ಹಾಸ್ಯಾಸ್ಪದ ಎನಿಸಿತು.

"ಹಿಂದಿನ ಕೆಲಸಕ್ಕೆ ಹೋಲಿಸಿದರೆ ಈ ಕೆಲಸದಲ್ಲಿ ನನಗೆ ಕಡಿಮೆ ಸಂಬಳ ಸಿಗುತ್ತಿದೆ" ಅವನು ಉತ್ತರಿಸಿದ.

"ಹಾಗಾದರೆ ನೀನೇಕೆ ಬಂದೆ?"

ತಲೆ ತಗ್ಗಿಸಿ ತನ್ನ ಕಾಲಿನ ಶೂಗಳೆಡೆ ನೋಡುತ್ತಾ ಮೌನವಾಗಿ ನಿಂತ. ಮೊತ್ತ ಮೊದಲ ಬಾರಿಗೆ ನನ್ನ ಕೊಠಡಿಗೆ ಬಂದಾಗ ಅವನು ಹೇಗೆ ನಡೆದುಕೊಂಡಿದ್ದನೋ ಹಾಗೆಯೇ ಈಗಲೂ, ಈ ಸನ್ನಿವೇಶದಲ್ಲೂ.

"ನನಗೆ...." ಮಾತನ್ನು ತಡೆದು ತನ್ನ ಒರಟು ಕೈಗಳಿಂದ ಕಣ್ಣುಗಳನ್ನು ಉಜ್ಜಿದ, ಬಳಿಕ ಕ್ಷೀಣದನಿಯಿಂದ ಹೇಳಿದ: "ನನಗೆ.... ನನಗೆ ಬೇರೆ ತಾವಿರಲಿಲ್ಲ...."

"ನಿನ್ನ ಮನೆಯಲ್ಲಿ? ನಿನಗಾಗಿ ಒಂದು ಸಣ್ಣ ಕೊಠಡಿ ಇರಲಿಲ್ಲವೆ?"

ಮತ್ತೊಮ್ಮೆ ಮಾತಿಲ್ಲ ಅವನಿಂದ. ಬಾಯ್ಲರಿನ ಕುದಿನೀರಿನ ಸದ್ದು ಹತಾಶ ಯುವಕನ ನಿಟ್ಟುಸಿರಿನಂತಿತ್ತು. ಕೆಂಪನೆಯ ಉರಿ ಕೂಡ ಅವನಲ್ಲಿ ಗೆಲುವನ್ನು ತರಲಿಲ್ಲ.

"ನಾನೇನು ಹೇಳಲಿ? ನನ್ನ ಚಿಕ್ಕಪ್ಪ ಮದುವೆಯಾದ. ಅವನಿಗೆ ಮನೆಯಿಲ್ಲದ್ದರಿಂದ ಎರಡು ಹಾಸಿಗೆ ಹಾಕಬಹುದಾದ ಸಣ್ಣ ಕೋಣೆಯೊಂದನ್ನು ನನ್ನ ತಂದೆ ಅವನಿಗೆ ಕೊಟ್ಟರು. ನಾನು ತಮ್ಮನೊಂದಿಗೆ ಒಂದೇ ಹಾಸಿಗೆಯಲ್ಲಿ ಮಲಗುವಂತಾಯಿತು. ರಾತ್ರಿಯ ವೇಳೆ ನಾನು ಓದಲು ಸಾಧ್ಯವಾಗುತ್ತಿರಲಿಲ್ಲ. ಕಾರಣ ಓದಲು ನಾನು ದೀಪ ಹಾಕಿದರೆ ತಾಯಿತಂದೆಗೆ ತೊಂದರೆಯಾಗುತ್ತಿತ್ತು...."

ದುಃಖವನ್ನು ತಡೆಯಲಾಗದೆ ಅವನಲ್ಲಿ ಅಳು ಒತ್ತರಿಸಿ ಬಂತು. ಸೆರೆ ಬಿಗಿ ಹಿಡಿದು ಗದ್ಗದಿತನಾಗಿ ನುಡಿದ, "....ಹುರುಳಿ ಸೊಪ್ಪನ್ನು ಮಾರಾಟ ಮಾಡುವುದು ಲಾಭದಾಯಕ ಉದ್ಯಮವೇ. ಆದ್ದರಿಂದ ನನ್ನ ಹೆತ್ತವರು ಅದನ್ನು ಮಾರಿ ಹಣ ಸಂಪಾದಿಸಲು ಸೂಚಿಸಿದರು. ಆರ್ಥಿಕಸ್ಥಿತಿ ಉತ್ತಮವಿದ್ದರೆ ನಿನಗೆ ಹೆಣ್ಣು ದೊರೆಯುವುದು ಕಷ್ಟವಾಗುವುದಿಲ್ಲವೆಂದು ಹೇಳಿದರು...ಹಣ ಸಂಪಾದನೆಯೇ ನನ್ನ ಮುಖ್ಯ ಗುರಿಯಾಗಿರ

ಲಿಲ್ಲ. ಆದ್ದರಿಂದ ನಾನು ಸೊಪ್ಪನ್ನು ಮಾರಾಟ ಮಾಡಲು ಇಷ್ಟ ಪಡಲಿಲ್ಲ. ಆದರೆ ನನಗೆ ಮುಖ್ಯವಾಗಿ, ಓದಲು ಎಲ್ಲೂ ಸಾಧ್ಯ ವಾಗಲಿಲ್ಲ...ಅಂಥ ಸಮಯದಲ್ಲಿ ನನ್ನ ಹಳೆಯ ಸಹಪಾಠಿ ಸಹಾಯಮಾಡಿದ. ಅವನ ಚಿಕ್ಕಪ್ಪ ಇಲ್ಲಿ ಮೊದಲು ನೀರು ಕುದಿಸುವ ಕೆಲಸ ಮಾಡುತ್ತಿದ್ದ. ಈ ಕೆಲಸ ದಲ್ಲಿ ಅವನಿಗೆ ಸಂಪಾದನೆ ಕಡಿಮೆಯಾದ್ದ ರಿಂದ ಕೆಲಸ ಬಿಟ್ಟುಹೋದ. ನಾನು ಚಿಂತಿಸ ಲಿಲ್ಲ. ಈ ಕೆಲಸವನ್ನೇ ಹಿಡಿದೆ...."

ಅವನ ಬದುಕಿನ ಅನೇಕ ಸಂಗತಿಗಳು ಈಗ ಬಯಲಾದ್ದರಿಂದ, ಅವನ ವಿಚಾರ ನನಗೆ ಸ್ಪಷ್ಟವಾಯಿತು. ಹೆಚ್ಚಾಗಿ ಹೇಳ ಬೇಕಾದ್ದೇನೂ ಉಳಿಯಲಿಲ್ಲ. ಅವನ ದುರ ದೃಷ್ಟದಿಂದಲೋ ಏನೋ ಅವ್ಯವಸ್ಥಿತವಾದ ಹತ್ತು ವರ್ಷಗಳು ಉರುಳಿಹೋಗಿದ್ದುವು. ಜೊತೆಗೆ ಅಂಧಾಭಿಮಾನದ ಧನದಾಶೆಯ ತಾಯಿ ತಂದೆಗಳೂ ಇದಕ್ಕೆ ಕಾರಣರಾಗಿ ದ್ದರು. ಕಣ್ಣೀರು ಸುರಿಸಲು ಸಹ ಅವನಿಗೆ ಶಾವಿಲ್ಲದಂತಾಗಿತ್ತು.

ಅವನು ಎದ್ದುನಿಂತು ತನ್ನ ಅಂಗಿಯ ತೋಳಿನಿಂದ ಮುಖವನ್ನು ಒರೆಸಿಕೊಂಡ. ಕುಲುಮೆಗೆ ಕಲ್ಲಿದ್ದಲನ್ನು ಸುರಿದ. ಕಿಡಿ ಕಾರುವ ಕಲ್ಲಿದ್ದಲಿನ ಉಂಡೆಗಳು ಧಗಧಗಿಸಿ ನೀಲಿ ಬಣ್ಣದಿಂದ ಉರಿಯ ತೊಡಗಿದವು.

"ಮಿಸ್ಟರ್ ಪೆಂಗ್...." ಅವನ ದನಿ ನನ್ನನ್ನು ಎಚ್ಚರಿಸಿತು. ಅಳುವುದನ್ನು ನಿಲ್ಲಿಸಿದ್ದ. ಕೆಳದುಟಿಯನ್ನು ಕಚ್ಚುತ್ತಾ ತಕ್ಷಣವೇ ದನಿಯೇರಿಸಿ ಕೇಳಿದ, "ನಾನೊಬ್ಬ ದಡ್ಡ, ಅವಿವೇಕಿ. ಇವನಿಗೆ ಭವಿಷ್ಯವೇ ಇಲ್ಲ ವೆಂದು ನೀವು ಭಾವಿಸಿದ್ದೀರಾ?"

"ನೀನು ದಡ್ಡ ಅವಿವೇಕಿಯೆಂದು ಯಾರು ಹೇಳಿದರು? ಮುಂದಿನ ವರ್ಷ ವಿಶ್ವವಿದ್ಯಾ ನಿಲಯದಲ್ಲಿ ಪ್ರವೇಶ ಪಡೆಯಲು ಮತ್ತೆ ಪ್ರಯತ್ನಿಸು."

"ನಾನು ಮತ್ತೊಮ್ಮೆ ಅನುತ್ತೀರ್ಣ ನಾದರೆ, ಮುಂದೆ ನನಗೆ ಭವಿಷ್ಯವಿದೆಯೇ? ಅವನು ಪ್ರಶ್ನಿಸಿದ.

"ನಾನು ವಿಶ್ವವಿದ್ಯಾಲಯದಲ್ಲಿ ಪ್ರವೇಶ ಗಿಟ್ಟಿಸಲಾಗಲಿ ಉತ್ತಮ ಉದ್ಯೋಗ ಪಡೆಯಲಾಗಲಿ ಓದುತ್ತಿಲ್ಲ. ನನ್ನ ತಿಳಿವಳಿಕೆ ಯನ್ನು ಹೆಚ್ಚಿಸಿಕೊಳ್ಳಲು ಇತಿಹಾಸವನ್ನು ಓದುತ್ತೇನೆ ಅಷ್ಟೆ. ನಾನು ಮತಿಹೀನ ನಾಗಲು ಇಷ್ಟವಿಲ್ಲ...." ಗೋಡೆಯ ಆಸರೆ ಪಡೆದು ನಿಂತು ಹೇಳಿದ. ಕೆಲಸದಿಂದ ಆಯಾಸಗೊಂಡಿದ್ದ.

ನಾವಿದ್ದ ಕೊಠಡಿ ಧಗಧಗಿಸುತ್ತಿದ್ದ ಬೆಂಕಿಯಿಂದಾಗಿ ಕುಲುಮೆಯಂತಾಗಿತ್ತು.

ಅವನ ಹತ್ತಿರ ಹೋಗಿ ಆತ್ಮೀಯತೆ ಯಿಂದ ಅವನ ತಲೆಮೇಲೆ ಕೈಯಿಟ್ಟು ಹೇಳಿದೆ: "ನಾನಿರುವಲ್ಲಿಗೆ ಬಾ. ನಿನಗೆ ತೊಂದರೆಯಿರುವ ಪಾಠಗಳನ್ನು ತಿಳಿಯು ವಲ್ಲಿ ನಾನು ಸಹಾಯ ಮಾಡುತ್ತೇನೆ. ನಾನು ನಿನ್ನ ಸ್ನೇಹಿತ. ನಾವು ಒಟ್ಟಾಗಿ ಅಧ್ಯಯನ ನಡೆಸೋಣ." ದುಃಖದಿಂದಾಗಿ ನನ್ನ ಗಂಟಲು ಬಿಗಿದಿತ್ತು. ಕಷ್ಟಕರವಾದ ಹತ್ತು ವರ್ಷಗಳನ್ನು ಕಳೆದರೂ ಯುವಕ ರಲ್ಲಿ ಉದಾತ್ತಭಾವನೆ ಮನೆ ಮಾಡಿರು ತ್ತದೆ. ಕಳೆದುಹೋದ ಕಾಲಕ್ಕಾಗಿ ಮರುಗು ತ್ತಾರೆ....ಅಂಥವರ ವಿದ್ಯಾಭ್ಯಾಸದಲ್ಲಿ ಉಂಟಾದ ತಡೆಗಳನ್ನೂ ತೊಂದರೆಗಳನ್ನೂ ಸರಿಪಡಿಸುವಲ್ಲಿ ಇಂದಿನ ಸಮಾಜ ಆಸಕ್ತಿ ವಹಿಸುತ್ತಿದೆ. ಅಲ್ಲದೆ ಅಂಥವರಿಗೆ ಯಾವ

ರೀತಿಯಲ್ಲಿ ಸಹಾಯ ಮಾಡಬಹುದು ಎಂಬುದನ್ನು ಕುರಿತು ತಾಯಿತಂದೆ ಹಾಗೂ ಅಧ್ಯಾಪಕವೃಂದ—ಯೋಚಿಸಿ ಕಾರ್ಯ ಪ್ರವೃತ್ತರಾದರೆ ಕ್ಸು-ಲಿ ಯಂಥವರ ಪಾಲಿನ ದುರ್ದಿನಗಳು ದೂರವಾಗಿ ಅವರ ಬದುಕು ಆಶಾದಾಯಕವಾಗುವುದರಲ್ಲಿ ಸಂದೇಹವಿಲ್ಲ.

ಕ್ಸು-ಲಿ, ತಿನ್ನಲು ನನಗೆ ಎಳ್ಳಿನ ಕೇಕ್ ಮತ್ತು ಹಸಿರು ಈರುಳ್ಳಿಯನ್ನು ಕೊಟ್ಟ. ಅವನ್ನು ಬಟ್ಟಲು ತುಂಬ ಬಿಸಿ ನೀರಿನೊಂದಿಗೆ ಸೇವಿಸಿದೆ. ತುಂಬ ರುಚಿಕರವಾಗಿತ್ತು. ಕ್ಸು-ಲಿ, ಮಾನವೀಯತೆಯ ಸಾಕಾರ ಮೂರ್ತಿಯಾಗಿ ಕಂಡ.

ಪರಸ್ಪರ ನೋಡುತ್ತಾ ನಾವಿಬ್ಬರೂ ಅದೆಷ್ಟೋ ಕಾಲ ಸುಮ್ಮನಿದ್ದೆವು. ಹೊರಡಲು ಎದ್ದೆ. ತಲೆಕೆರೆಯುತ್ತಾ ಹತ್ತಿರ ಬಂದ ಕ್ಸು-ಲಿ, "ಮಿಸ್ಟರ್ ಪೆಂಗ್, ನಾನು ನೀರು ಕುದಿಸುವ ಕಾಯಕದಲ್ಲಿದ್ದೇನೆಂದು ದಯೆಯಿಟ್ಟು ಯಾರಿಗೂ ಹೇಳಬೇಡಿ. ಪ್ರಮಾಣ ಮಾಡಿ....?"

ಒಡನೆಯೆ ಅವನ ತಾಯಿತಂದೆಗೆ ನಾನು ಹೇಳಿದ್ದ ಮಾತುಗಳು ನೆನಪಿಗೆ ಬಂದುವು. "ಈ ತನಕ ನಿನ್ನ ಸ್ನೇಹಿತರಾರೂ ನನಗೆ ಗೊತ್ತಿಲ್ಲ."

ಕಷ್ಟದಿಂದ ನುಡಿದ. "ನಾನೆಲ್ಲಿದ್ದೆನೆಂದು ನನ್ನ ತಾಯಿತಂದೆಗೂ ತಿಳಿದಿಲ್ಲ. ಅವರಿಗೆ ತಿಳಿದರೆ ಹುರುಳಿಸೊಪ್ಪು ಮಾರಾಟ ಮಾಡಲು ನನ್ನನ್ನು ಒತ್ತಾಯಿಸುತ್ತಾರೆ. ನಾನು ಓದುವುದನ್ನೂ ಕಡಿಮೆ ಹಣ ಸಂಪಾದನೆ ಮಾಡುವುದನ್ನೂ ಅವರು ಒಪ್ಪಲಾರರು, ಪ್ರತಿಭಟಿಸುವರು. ಆದರೆ ಹಣದಿಂದ ಕಾಲವನ್ನು ಕೊಳ್ಳಲು ಸಾಧ್ಯವೆ? ಒಮ್ಮೆ ಖಾಯಂ ಉದ್ಯೋಗ ದೊರೆತರೆ ನಾನು ಹೆಚ್ಚು ಕಾರ್ಯಮಗ್ನನಾಗಿರಬೇಕಾಗುತ್ತದೆ. ಈ ಸಂಗತಿಯನ್ನು ನೀವು ಒಪ್ಪುವಿರಿ ತಾನೆ? ನಾನಿಲ್ಲಿರುವೆನೆಂದು ನನ್ನ ತಾಯಿತಂದೆಗೆ ದಯೆಯಿಟ್ಟು ಹೇಳಬೇಡಿ. ನನಗೆ ತಿಂಗಳ ಕೂಲಿ ದೊರೆತಾಗ ನನ್ನ ಊಟಕ್ಕೆ ತಗಲಬಹುದಾದ ವೆಚ್ಚ ಹಾಗೂ ಕೆಲವು ಪುಸ್ತಕಗಳನ್ನು ಕೊಂಡ ಬಳಿಕ, ಉಳಿದ ಹಣವನ್ನು ಮನೆಗೆ ಕಳುಹಿಸುತ್ತೇನೆ." ಅವನ ಕಣ್ಣುಗಳು ನನ್ನೊಡನೆ ವಾದಕ್ಕೆ ಇಳಿದಂತಿದ್ದವು. ಅವನ ದೃಷ್ಟಿಯನ್ನು ನೇರವಾಗಿ ಎದುರಿಸಲು ನನಗೆ ಸಾಧ್ಯವಾಗಲಿಲ್ಲ.

ಬಾಗಿಲು ತೆರೆಯಿತು. ಬಾಗಿಲ ಬಳಿ ಗುಪ್ಪೆಯಾಗಿ ಬಿದ್ದಿದ್ದ ಕಪ್ಪುವಸ್ತು ರಾಶಿ ಕಡಿಮೆ ದರ್ಜೆಯ ಕಲ್ಲಿದ್ದಲು ಎಂಬುದನ್ನು ದೀಪದ ಬೆಳಕು ಹೊರಗೆಡಹಿತು.

"ಓಹ್ !" ಎನ್ನುತ್ತಾ ಅವನು ಮಂಡಿಯೂರಿ ಕುಳಿತು ಕೆಳಗೆ ಹರಡಿದ್ದ ಇದ್ದಿಲನ್ನು ಬೆಲೆಬಾಳುವ ಹರಳುಗಳೆಂದು ಭಾವಿಸಿ ಅದನ್ನು ತೆಗೆದುಕೊಂಡು ಕೊಠಡಿಯೊಳಗೆ ಪೇರಿಸಿದ್ದ ಕಲ್ಲಿದ್ದಲ ರಾಶಿಗೆ ಸುರಿದ. "ಅವನ್ನು ಹೊರಗೆಸೆಯಲು ದುಃಖವಾಗುತ್ತದೆ" ಎಂದು ತನ್ನಷ್ಟಕ್ಕೆ ತಾನೇ ಅಂದ. "ಅದು ಉತ್ತಮವಲ್ಲದಿರಬಹುದು. ಆದರೂ ಅದನ್ನು ಕ್ಷಣಕಾಲ ಉರಿಸಬಹುದು" ಎಂದು ತನಗೆತಾನೇ ಮಾತಾಡಿಕೊಂಡ.

ನನ್ನ ಬೈಸಿಕಲ್ಲನ್ನು ತೆಗೆದುಕೊಂಡು ಹೊರಡಲನುವಾಗಿ ವಂದನೆ ಹೇಳಿ ಕೈಯಾಡಿಸಿದೆ. ಒಡನೆಯೆ ನನ್ನ ಸೈಕಲ್ಲಿನ

ಮುಂದಿನ ಚಕ್ರ ಕಲ್ಲಿದ್ದಲ ರಾಶಿಯ ಮೇಲೆ ಹತ್ತಿ ಇನ್ನಿಲ್ಲನ್ನೆಲ್ಲ ಚೆಲ್ಲಾಪಿಲ್ಲಿ ಮಾಡಿತು

ಸ್ವಲ್ಪ ದೂರ ಬಂದು ಕ್ಸ-ಲಿ ಗುಡಿಸಿಲಿನ ಕಡೆಗೆ ಮತ್ತೊಮ್ಮೆ ಕಣ್ಣು ಹಾಯಿಸಿದೆ. ಬೆಳಕಿಗೆ ಎದುರಾಗಿ ಮೂಡಿದ್ದ ಕ್ಸ-ಲಿಯ ನೆರಳು ಕಾಣಿಸಿತು. ದಾರಿಯುದ್ದಕ್ಕೂ ಕ್ಸ-ಲಿ ಬಗ್ಗೆ ನಾನೇನೂ ಚಿಂತಿಸುವಂತಿರಲಿಲ್ಲ. ಅವನು ಸೀರು ಕುದಿಸುವ ಕಾಯಕದಲ್ಲಿದ್ದಾನೆಂದು ನಾನು ಅವನ ತಾಯಿ ತಂದೆಗೆ ಹೇಳಬಹುದೆ? ಹಾಗೆ ಹೇಳಿದರೆ ಅದರಿಂದ ಉಂಟಾಗುವ ಪ್ರತಿಫಲವೇನು? ಹೀಗೆ ನನ್ನಷ್ಟಕ್ಕೆ ನಾನೇ ಯೋಚಿಸುತ್ತಾ ಸೈಕಲ್ ತುಳಿಯುತ್ತಿದ್ದೆ. ಏನು ಮಾಡಬೇಕೆಂಬುದನ್ನು ನಾನು ನಿರ್ಣಯಿಸಲು ಸಾಧ್ಯವಾಗಲಿಲ್ಲ.



ಕಣ್ಣಿನಲ್ಲಿ ಹೆಮ್ಮೆ ಬೇಡ, ನಾಲಿಗೆಯಲ್ಲಿ ಸುಳ್ಳು ಬೇಡ, ಕೈ ಕೊಳೆಯಾಗದಿರಲಿ, ಹೃದಯ ದುರಾಲೋಚನೆ ಮಾಡದಿರಲಿ, ಕಾಲು ಕಡುಕಿನತ್ತ ಹೋಗದಿರಲಿ, ಬಾಯಿ ಅಸತ್ಯವನಾಡದಿರಲಿ, ಹೀಗಾಗಿ ದೇಹವು ದೇವನಿಗೆ ಸಲ್ಲಲಿ.

—ಯೇಸುಸ್ವಾಮಿ

ಮನುಷ್ಯನಿಗೆ "ಮನುಷ್ಯನಾಗಿ" ಸಾಯಲು ಅವಕಾಶ ದೊರೆತರೆ ಅದಕ್ಕಿಂತ ಹೆಚ್ಚಿನ ಭಾಗ್ಯವೇನಿದೆ?

—ಟಾಲ್‌ಸ್ಟಾಯ್

ಮನುಷ್ಯನು ಸ್ವಾರ್ಥಿ ಎನಿಸಿಕೊಳ್ಳುವುದು ಕೇವಲ ಅವನ ಒಳ್ಳೆಯದಕ್ಕಾಗಿಯೇ, ಹೋರಾಡುವುದಕ್ಕಲ್ಲ. ಜೊತೆಗೆ ಇತರರ ಒಳ್ಳೆಯದನ್ನು ಅಲಕ್ಷಿಸುವುದಕ್ಕಾಗಿ.

—ವಾಟ್ಲೆ

ಉಸಿರಿನ ದುರ್ವಾಸನೆಗೆ ವಿದಾಯ

ಬಿ. ಎಸ್. ಮಯೂರ

ಆಹಾರದ ಬಾಗಿಲು, ಮಾತಿನ ತಡಸಲು, ಹರ್ಷದ ಹೊನಲು, ದುಃಖದ ಉಗುಳು—ಎಲ್ಲವೂ ಬಾಯಿಯ ವಿವಿಧ ಪಾತ್ರಗಳು-ಮಾತೆಂಬುದು ಜ್ಯೋತಿರ್ಲಿಂಗ. ಇಂಥ ಬಾಯಿ ದುರ್ವಾಸನೆ ಬೀರಿದರೆ ನಿವಾರಣೆ ಹೇಗೆ ? ಓದಿ ಇಲ್ಲಿಯ ವೈಜ್ಞಾನಿಕ ವಿಶ್ಲೇಷಣೆ.

ಉಸಿರಿನ ದುರ್ವಾಸನೆ – ಬಾಯಿಯ ದುರ್ವಾಸನೆ ಎಲ್ಲರನ್ನೂ ಕಾಡುವ ಸಮಸ್ಯೆ. ಹೊಗೆಸೊಪ್ಪು, ಬೀಡಿ, ಸಿಗರೇಟ್ ಮುಂತಾದ ಚಟ ಇರುವವರ ಬಾಯಿ ಯಾವಾಗಲೂ ದುರ್ವಾಸನೆ ಬೀರುತ್ತಿರುತ್ತದೆ. ಆದರೆ ಉಸಿರಿನ ದುರ್ವಾಸನೆಗೆ ಇದೊಂದೇ ಕಾರಣವಲ್ಲ.

ಇದು ವಸಡಿನ ಜಾಡ್ಯ ಎಂದು ತಿಳಿದು ಬಾಯಿ ಮುಕ್ಕಳಿಸುವ, ಆಗಾಗ್ಗೆ ಹಲ್ಲು ಉಜ್ಜುವ, ವಸಡನ್ನು ತಿಕ್ಕುವ ಕ್ರಿಯೆಗಳನ್ನು ಮಾಡಲು ವೈದ್ಯರು ಸಲಹೆ ನೀಡುತ್ತಾರೆ. ಉಸಿರಿನ ವಾಸನೆಗೆ ಬೇರೆ ಕಾರಣಗಳೂ ಇವೆ.

ನಮ್ಮ ಬಾಯಿಯಲ್ಲಿ ಉಳಿದಿರುವ ಆಹಾರದ ತುಣುಕುಗಳಿಂದ ಸತ್ತ ಪೊರೆಗಳಿಂದ ಬದುಕುವ ಕೀಟಾಣುಗಳು ಇಂತಹ ದುರ್ವಾಸನೆ ಹೊರಡಿಸುತ್ತವೆ. ಇವು ವಾಯು ಇಲ್ಲದೆಡೆ, ವಿಶೇಷವಾಗಿ ಆಕ್ಸಿಜನ್ ಇಲ್ಲದೆಡೆ, ಬದುಕಿ ಬಾಳುತ್ತವೆ. ಆಕ್ಸಿಜನ್ ಹೆಚ್ಚಾಗಿರುವ ಜೊಲ್ಲಿನಲ್ಲಿ ಬದುಕುವುದಿಲ್ಲ. ನಿದ್ರೆಯಲ್ಲಿ ಜೊಲ್ಲು ಕಡಿಮೆಯಾಗುವುದರಿಂದ ಕೀಟಾಣುಗಳ ಕೈ ಮೇಲಾಗುತ್ತದೆ. ನಿದ್ರೆಯಿಂದ ಎದ್ದಾಗ ಬಾಯಿ ವಾಸನೆ ಇರುತ್ತದೆ.

ಸಾರಾಯಿ, (ಅತಿಯಾದ) ಮಾತು, ಕಟ್ಟಿದ ಮೂಗು, ಬಾಯಿಯಿಂದ ಉಸಿರಾಟ, ಇವೆಲ್ಲ ಬಾಯಿಯ ದುರ್ವಾಸನೆಗೆ ಕಾರಣಗಳು.

ವಯಸ್ಸಾದವರ ಬಾಯಿಯಲ್ಲಿ ಜೊಲ್ಲು ಕಡಿಮೆಯಾಗುವುದರಿಂದ ಅವರ ಬಾಯಿಯಲ್ಲಿ ವಾಸನೆ ಹೆಚ್ಚು. ಎಳೆಯ ಮಕ್ಕಳ ಬಾಯಿ ಜೊಲ್ಲಿನಿಂದ ಆವೃತವಾಗಿರುವುದರಿಂದ ಅವರ ಬಾಯಿ ಯಾವಾಗಲೂ ತಾಜಾವಾಗಿರುತ್ತದೆ.

೧೯೯೪ರ ಅಕ್ಟೋಬರ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಮ್ಯಾರಿ ಮರಿ ಅವರ "ಕಿಸ್ ಬ್ಯಾಡ್ ಬ್ರೀತ್ ಗುಡ್ ಬೈ" ಎಂಬ ಲೇಖನದ ಸಂಗ್ರಹಾನುವಾದ.

ಬಾಯಿ ಒಣಗಿದಾಗ ದುರ್ವಾಸನೆ ಬರುವುದೂ ಉಂಟು. ಜೊಲ್ಲು ಒಸರುವಂತೆ ಸಿಹಿತಿಂಡಿ ಅಥವಾ ಕಲ್ಲುಸಕ್ಕರೆ ಚೂರನ್ನು ತಿಂದರೆ ಉತ್ತಮ. ನೀರನ್ನೋ, ಪಾನಕವನ್ನೋ ಕುಡಿಯುತ್ತಿದ್ದರೆ ಬಾಯಿ ಒಣಗದೆ ಇರುತ್ತದೆ. ನಿಂಬೆಹಣ್ಣಿನ ರಸ ಎಲ್ಲಕ್ಕಿಂತ ಒಳ್ಳೆಯ ಸಾಧನ.

ಹಲ್ಲು ಉಜ್ಜುವುದರಿಂದ, ಬಾಯಿಯಲ್ಲಿ ನೀರಾಡಿಸಿ ಬೇಡವಾದ ಕೀಟಾಣುಗಳನ್ನು ಹೊರಕ್ಕೆ ಹಾಕುವುದರಿಂದ ದುರ್ವಾಸನೆ ಕಡಿಮೆಯಾಗುತ್ತದೆ. ನಾಲಿಗೆ, ಅಂಗುಳು, ಕೆನ್ನೆಯ ಒಳಭಾಗ ಎಲ್ಲವನ್ನೂ ಬೆರಳಿನಿಂದ ಉಜ್ಜಿ ತೊಳೆದರೆ ಉತ್ತಮ ಪರಿಣಾಮ ಒದಗುತ್ತದೆ.

ಬಾಯಿ ಮುಕ್ಕಳಿಸಲು ಎಂದೇ ಹಲವಾರು ದ್ರಾವಣಗಳು ತಯಾರಾಗಿವೆ. ಇವೂ ಸ್ವಲ್ಪ ಮಟ್ಟಿಗೆ ಅನುಕೂಲ. ಈ ದ್ರಾವಣಗಳು ತಮ್ಮದೇ ಆದ ಸುವಾಸನೆಯಿಂದ ಬಾಯಿಯ ವಾಸನೆಯನ್ನು ತಾತ್ಕಾಲಿಕವಾಗಿ ತಡೆಯುತ್ತವೆ. ಆದರೆ ಈ ದ್ರಾವಣದಿಂದ ಕೀಟಾಣುಗಳಿಗೇನೂ ಹಾನಿಯಿಲ್ಲ. ಇದರಿಂದ ಬಾಯಿ ಇನ್ನೂ ಬೇಗ ಒಣಗುವ ಸಂಭವವೇ ಹೆಚ್ಚು.

ನಮ್ಮ ಆಹಾರದ ಅಭ್ಯಾಸವೂ ಬಾಯಿಯ ವಾಸನೆಗೆ ಕಾರಣವಾಗುತ್ತದೆ. ಬೆಳ್ಳುಳ್ಳಿ, ಈರುಳ್ಳಿ (ಅದರಲ್ಲೂ ಹಸಿಯ ಈರುಳ್ಳಿ)–ಅಂತಹ ಅತಿ ವಾಸನೆಯ ತರಕಾರಿಗಳಿಂದ ದುರ್ವಾಸನೆ ಬರುತ್ತದೆ. ಇವನ್ನು ತಿಂದ ಕೂಡಲೇ ಬಾಯನ್ನು ಚೆನ್ನಾಗಿ ತೊಳೆದು ಸ್ವಲ್ಪಮಟ್ಟಿಗೆ ವಾಸನೆಯನ್ನು ತಡೆಯಬಹುದು. ಆದರೆ ಇವು ರಕ್ತಗತವಾದ ಮೇಲೆ, ಶ್ವಾಸಕೋಶಗಳಿಗೆ ಇವುಗಳ ಗಂಧಕ ಪೂರಿತ ವಾಯು ತಲುಪಿದಾಗ ನಮ್ಮ ಉಸಿರು ದುರ್ವಾಸನಾಯುಕ್ತವಾಗುತ್ತದೆ.

ದೊಡ್ಡ ಕರುಳಿನಲ್ಲಿ ವಾಸನೆಯನ್ನು ಹೋಗಲಾಡಿಸುವ ಕಿಣ್ವವನ್ನು ಒಸರುವ ಗ್ರಂಥಿ ಇರುತ್ತದೆ. ಕೆಲವರಲ್ಲಿ ಇದು ಚುರುಕಾಗಿರುವುದಿಲ್ಲ. ಅಂತಹವರು ಮೇಲೆ ಹೇಳಿದ ತರಕಾರಿಗಳನ್ನು ಅತಿಯಾಗಿ ಬಳಸಿದರೆ ಅವರ ಉಸಿರೂ, ಬೆವರೂ, ಮೂತ್ರವೂ ಕೊಳೆತ ಮೊಟ್ಟೆಯ ವಾಸನೆಯಿಂದ ಕೂಡಿರುತ್ತದೆ. ದುರ್ವಾಸನೆಯಿಂದ ಮುಕ್ತರಾಗಲು, ಅಂತಹವರು ಈ ತರಕಾರಿಗಳನ್ನು ಕಡಿಮೆ ಬಳಸಬೇಕು. ಹೆಚ್ಚಾಗಿ ನೀರು ಕುಡಿಯಬೇಕು.

ಬೊಜ್ಜು ಕರಗಿಸಿಕೊಳ್ಳಲು ಕೆಲವರು ಪಥ್ಯ ಮಾಡುತ್ತಾರೆ. ಹೆಚ್ಚಿನ ಕೊಬ್ಬು ಕರಗುವಾಗ ಉತ್ಪತ್ತಿಯಾಗುವ ಅನಿಲದಿಂದ ಅವರಿಗೂ ದುರ್ವಾಸನೆಯ ತೊಂದರೆ ಅಡರಿಕೊಳ್ಳುತ್ತದೆ. ಅಂತಹವರು ದ್ರವರೂಪದ ಆಹಾರ (ಪಾನಕ, ನೀರು,....) ವನ್ನು ಹೆಚ್ಚಾಗಿ ಬಳಸಬೇಕು.

ಕೆಲವರಿಗೆ ಬಾಯಿಯ ದುರ್ವಾಸನೆ ಅನುವಂಶಿಕ. ಅವರಿಗೆ ಯಾವ ಮಾರ್ಗದಿಂದಲೂ ದುರ್ವಾಸನೆಯಿಂದ ಮುಕ್ತಿ ಸಿಗುವುದಿಲ್ಲ. ತಾತ್ಕಾಲಿಕ ಪರಿಹಾರದ ಮಾರ್ಗವೇ ಅವರಿಗೆ ವರದಾನ.

ಯಾವುದೇ ಮಸಡಿನ ಜಾಡ್ಯ ಇಲ್ಲದೆಯೂ ಉಸಿರಿಗೆ ದುರ್ವಾಸನೆ ಸೇರಿಕೊಳ್ಳಬಹುದು. ನಾಲಿಗೆಯ ಕೆಳಭಾಗದಲ್ಲಿ ಬೆಚ್ಚಗೆ ವಾಸಿಸುವ ಕೀಟಾಣುಗಳೇ ಇದಕ್ಕೆ ಕಾರಣ. ಅದರಿಂದಲೇ ದಂತ ವೈದ್ಯರು ನಾಲಿಗೆಯ ಎರಡು ಬದಿಯನ್ನೂ ತಿಕ್ಕಿ ಚೊಕ್ಕಟ

ಮಾಡಿಕೊಳ್ಳಲು ಹೇಳುತ್ತಾರೆ. ನಾಲಿಗೆ ಯಾವಾಗಲೂ ತಿಳಿ ಗುಲಾಬಿ ಬಣ್ಣದ್ದಾಗಿರಬೇಕು. ನಾಲಿಗೆಯ ಮೇಲೆ ಬಿಳಿ ಪದರ ಇದ್ದರೆ, ಅದು ಕೀಟಾಣುಗಳ ಪದರ ಎಂದೇ ಅರ್ಥ. ಆಗಾಗ್ಗೆ ಈ ಪದರವನ್ನು ಹೆರೆದು ತೆಗೆಯುವುದು ಆರೋಗ್ಯಕ್ಕೆ ಒಳ್ಳೆಯದು.

ಅನಾರೋಗ್ಯದ ಸೂಚನೆಯಾಗಿ ಬಾಯಿ ವಾಸನೆ ಬೀರುವುದೂ ಉಂಟು. ಜ್ವರ ಇದ್ದರೆ, ನೆಗಡಿಯಾಗಿ ಮೂಗು ಬಿಗಿದರೆ, ಅಜೀರ್ಣವಾದರೆ ಬಾಯಿ ವಾಸನೆ ಬರುತ್ತದೆ. ಅಗ ವೈದ್ಯರನ್ನು ಕಾಣಬೇಕು. ಔಷಧಿಗಳಿಂದ ಬಾಯಿ ಒಣಗಿ ವಾಸನೆ ಬೀರುವುದೂ ಉಂಟು. ಆಗ ಹೆಚ್ಚಾಗಿ ನೀರು ಕುಡಿಯಬೇಕು.

ಬಾಯಿ ವಾಸನೆ ಇರುವವರು ತಮ್ಮ ಸಂಗಾತಿಯೊಡನೆ ಚರ್ಚಿಸಿ ಯುಕ್ತ ಕ್ರಮ ಅನುಸರಿಸುವುದು ಒಳ್ಳೆಯದು. ಉಸಿರಿನ ವಾಸನೆ ಇರುವವರು ಗೆಳೆಯರೊಡನೆ ಸಹಜವಾಗಿ ಬೆರೆಯಲು ಹಿಂಜರಿಯುತ್ತಾರೆ. ಇವರಿಗೆ ಹೀನ ಪ್ರಜ್ಞೆ ಕಾಡುತ್ತದೆ. ಇದರಿಂದ ಅವರ ಪ್ರತಿಭೆ ಕುಗ್ಗುತ್ತದೆ. ಅವರ ಸಾಮಾಜಿಕ ಚಟುವಟಿಕೆಗಳಿಗೆ ಕುಂದುಂಟಾಗುತ್ತದೆ. ಇಂತಹ ಹಿಂಬೆಳವಣಿಗೆಯನ್ನು ತಪ್ಪಿಸಲು ಅವಶ್ಯಕವಾದ ಕ್ರಮಗಳನ್ನು ಯುಕ್ತ ಸಮಯದಲ್ಲಿ ಬಳಸಿ, ಉಸಿರಿನ ದುರ್ವಾಸನೆಗೆ ವಿದಾಯ ಹೇಳುವುದು, ಎಲ್ಲರಿಗೂ ಹಿತವಾದ ಮಾರ್ಗ.



ಇತರರು ನಿನಗಾಗಿ ಚಿಂತಿಸುವದಿಲ್ಲ. ಆದರೆ ನೀನು ಮಾತ್ರ ಇತರರಿಗಾಗಿ ಚಿಂತಿಸುವುದನ್ನು ಕಲಿ.

—ಗಾಯ್ಟೆ

ಹೇಡಿಗಳು ಧಾರ್ಮಿಕ ವೇಷವನ್ನು ಬದುಕಿಗಾಗಿ ಆಶ್ರಯಿಸುತ್ತಾರೆ. ಸಮರ್ಥರು ಸ್ವತಃ ಬದುಕಿ ಧರ್ಮವನ್ನು ಧರ್ಮಕ್ಕಾಗಿ ಆಚರಿಸುತ್ತಾರೆ.

—ಶ್ರೀಕೃಷ್ಣ

ನೀವೂ ನೇತಾರರಾಗಬಹುದು

ಟಿ. ವಿ. ಅನ್ನಪೂರ್ಣಮ್ಮ

ಮುಂದಾಳು, ಧುರೀಣ ಅಥವಾ ನಾಯಕ ಯಾರು? ಜನ್ಮತಃ ಸಿದ್ಧನಾದವನೋ ಶಿಕ್ಷಣತಃ 'ತಯಾರಾದ'ವನೋ ಕ್ರಮಶಃ ಅರಳಿದವನೋ? ಸಫಲ ಕ್ರಿಯಾಶೀಲ ನಾಯಕರ ಯಶಸ್ಸಿನ ಗಾಥೆಯನ್ನು ಚಿಕಿತ್ಸಕವಾಗಿ ಪರಿಶೀಲಿಸಿದಾಗ ಈ ಒಂದೊಂದು ಪ್ರಶ್ನೆಗೂ ಅಷ್ಟು ಇಷ್ಟು ಪುರಾವೆ ದೊರೆಯುತ್ತದೆ, ನಿಜ. ಆದರೆ ಅವರೆಲ್ಲರೂ ನಡೆದುಬಂದ ದಾರಿಗಳಲ್ಲಿ ಒಂದು ಅಂಶವಂತೂ ಎದ್ದು ಕಾಣುತ್ತದೆ: ಅಪಯಶಸ್ಸಿನ ಹಾಲಾಹಲ ಘೂರ್ಣಿಸಿದಾಗ ಅವರು ಅದನ್ನು ಧರಿಸಿದ ನೀಲಕಂಠರಾದರು, ಯಶಸ್ಸಿನ ಅಮೃತ ಪ್ರಾಪ್ತವಾದಾಗ, ಅದನ್ನು ಹಂಚಿದ ಮೋಹಿನಿಯಾದರು, ಈ ಚಿರಸೂತ್ರಕ್ಕೆ ಬರೆದ ಭಾಷ್ಯ ಪ್ರಸಕ್ತ ಲೇಖನ.

ಸಮಾಜದಲ್ಲಿ ಒಬ್ಬ ನೇತಾರನಾಗಿ ಸ್ಥಾನಮಾನ ಪಡೆಯುವುದು ಬಹಳ ಗೌರವದ ವಿಷಯ. ನಾಯಕತ್ವ ಇಂದು ವಿಟಮಿನ್ 'ಸಿ' ಮಾತ್ರೆಯಾಗಿಬಿಟ್ಟಿದೆ. ಕೊಲೋರಾಡೊನಲ್ಲಿರುವ "ಸೆಂಟರ್ ಫಾರ್ ಕ್ರಿಯೇಟಿವ್ ಲೀಡರ್ ಶಿಪ್" (ರಚನಾತ್ಮಕ ನಾಯಕತ್ವ ಕೇಂದ್ರ) ಸಂಸ್ಥೆಯಲ್ಲಿ ಮನೋವಿಜ್ಞಾನಿಯಾಗಿ ಕೆಲಸಮಾಡುತ್ತಿರುವ ಡೇವಿಡ್ ಕ್ಯಾಂಪ್ ಬೆಲ್ ಈ ರೀತಿ ಹೇಳುತ್ತಾರೆ, "ಪ್ರತಿಯೊಬ್ಬ ವ್ಯಕ್ತಿಯೂ ಈ ನಾಯಕತ್ವದ ಅತ್ಯಂತ ಹೆಚ್ಚಿನ ಲಾಭ ಪಡೆಯಲು ಅಪೇಕ್ಷಿಸುತ್ತಾನೆಂದೆನಿಸುತ್ತದೆ."

ಇದು ಆಶ್ಚರ್ಯದ ಸಂಗತಿಯೇನಲ್ಲ. ನಾಯಕತ್ವದಿಂದ ಅಧಿಕಾರ ಮತ್ತು ಗೌರವ ದೊರೆಯುತ್ತವೆ. ಎಲ್ಲಕ್ಕಿಂತ ವಿಶೇಷವೆಂದರೆ, ನಾಯಕತ್ವದಿಂದ ಸದಾ ಕಾರ್ಯಸಿದ್ಧಿಯಾಗುತ್ತಿರುತ್ತದೆ. ಅದು ವಿಟಮಿನ್‌ಗೆ ಸಮನಾಗಿದ್ದರೂ, ನಾಯಕತ್ವದ ಗುಣಗಳನ್ನು ವಿಟಮಿನ್‌ನಂತೆ ಸುಲಭವಾಗಿ ಅರಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಗುಣಗಳನ್ನು ಬಹಳ ಎಚ್ಚರಿಕೆಯಿಂದ ಬೆಳೆಸಿಕೊಳ್ಳಬೇಕು.

ಹೆಚ್ಚಿನ ಉತ್ತಮ ನಾಯಕರು ಹುಟ್ಟಿನಿಂದ ಏನೂ ಸಾಮರ್ಥ್ಯ ಪಡೆದಿರುವುದಿಲ್ಲ. ಅವರು ನಾಯಕರಾಗಿ ಮಾಡಲ್ಪಡುತ್ತಾರೆ.

೧೯೮೯ನೇ ನವೆಂಬರ್ ತಿಂಗಳ 'ಸರ್ವೋತ್ತಮ್' ಹಿಂದಿ ಮಾಸ ಪತ್ರಿಕೆಯಲ್ಲಿ ಪ್ರಕಟವಾದ ಶೇರಿ ಸೂಬ್ ಕೋಹೆನ್‌ರವರ 'ನೇತಾ ಆಪ್ ಭೀ ಬನ್ ಸಕತೇ ಹೈ' ಲೇಖನದ ಅನುವಾದ.

ಈ ಸಂಗತಿ, ಬಳಕೆಯಲ್ಲಿರುವ ಸಾಮಾನ್ಯ ಅಭಿಪ್ರಾಯಕ್ಕೆ ಸಂಪೂರ್ಣ ವಿರುದ್ಧವಾಗಿದೆ. ಅವರು ತಮ್ಮ ಗುಣಗಳನ್ನು ತಮ್ಮ ದಿನನಿತ್ಯದ ಜೀವನದಲ್ಲಿ ಹೆಚ್ಚು ಹೆಚ್ಚು ಉತ್ತಮಪಡಿಸಿಕೊಳ್ಳುತ್ತಾರೆ. ಯಾವ ಗುಣಗಳನ್ನು ಅವರು ಉತ್ತಮ ಪಡಿಸಿಕೊಳ್ಳಬೇಕು? ಆ ಗುಣಗಳನ್ನು ಅನುಸರಿಸುವಂತೆ ಮಾಡಲು ಅವರು ಇತರರನ್ನು ಹೇಗೆ ಪ್ರೇರೇಪಿಸಬೇಕು? ನೀವು ಹೇಗೆ ಪ್ರೇರೇಪಿಸಬೇಕು?

ಸದಾ ಇತರರಿಗೆ ಮಾನ್ಯತೆ ಕೊಡಿ :

ಒಬ್ಬ ವ್ಯಕ್ತಿಯಿಂದ ಉತ್ತಮ ಕೆಲಸ ಮಾಡಿಸಿಕೊಳ್ಳುವ ಪರಿಣಾಮಕಾರಿ ರೀತಿ ಎಂದರೆ, ಆತನನ್ನು ಒಬ್ಬ ನಾಯಕನಂತೆ ಪರಿಗಣಿಸಿ ವ್ಯವಹರಿಸುವುದು ಎಂದು ಹೆಚ್ಚಿನ ನೇತಾರರು ಅನುಭವ ಪಡೆದಿದ್ದಾರೆ. ಆತನು ಮಾಡಿದ ಕೆಲಸಕ್ಕೆ, ಸಾಧಿಸಿದ ಗೆಲುವಿಗೆ, ಆತನಿಗೆ ಬಹಿರಂಗವಾಗಿ ಮಾನ್ಯತೆ ಕೊಡುವುದು, ನಾಯಕತ್ವಕ್ಕೆ ಸಂಬಂಧಪಟ್ಟಂತೆ ವಿಶ್ವದ ಸರ್ವಪ್ರಸಿದ್ಧ ತಂತ್ರವಾಗಿದೆ. ಇದು ಎಂದಿಗೂ ಮರೆಯಲಾಗದ ಔದಾರ್ಯಪೂರ್ಣ ವಿಷಯವಾಗಿದೆ.

ಇತರರಿಗೆ ಮಾನ್ಯತೆ ಕೊಡುವುದು, ಅವರ ರಚನಾತ್ಮಕ ವಿಮರ್ಶೆಗಿಂತ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಏತಕ್ಕೆಂದರೆ ವಿಮರ್ಶೆ ಕೆಲವೊಮ್ಮೆ ಲಾಭಕ್ಕಿಂತ ಹೆಚ್ಚು ನಷ್ಟವನ್ನೇ ಉಂಟುಮಾಡುತ್ತದೆ. "ದಿ ಒನ್ ಮಿನಿಟ್ ಮೇನೇಜರ್" ಲೇಖನದ ಸಹ ಲೇಖಕ ಕೇನೆಥ್ ಬ್ಲ್ಯಾಂಚಾರ್ಡ್ ಸಹ ಈ ಹೇಳಿಕೆಗೆ ಸಮ್ಮತಿಸುತ್ತಾನೆ ಆತ ಈ ರೀತಿ ಹೇಳುತ್ತಾನೆ. "ಉತ್ತಮ ಕೆಲಸ ಮಾಡುತ್ತಿರುವವರಿಗೆ ಮಾನ್ಯತೆ ಕೊಡಿ. ಆತನ ಕೆಲಸದ ವಿಷಯವನ್ನು ಸಮಸ್ತರಿಗೂ ತಿಳಿಸಿ. ಇದರಿಂದ ಆತನಲ್ಲಿ ಜಾಗೃತವಾಗುವ ಪ್ರಾಮಾಣಿಕತೆ, ಒಬ್ಬ ನಾಯಕನ ಅತ್ಯುತ್ತಮ ಆಸ್ತಿಯಾಗುತ್ತದೆ.

ಪೂರ್ವಸಿದ್ಧತೆ ಮಾಡಿ ಅಪಾಯವನ್ನು ಎದುರಿಸಿ :

"ಅಪಾಯವನ್ನು ಎದುರಿಸುವುದು ವಿವೇಚನೆ ಇಲ್ಲದೆ ಮಾಡುವ ಕೆಲಸವಲ್ಲ" ಇದನ್ನು ಸಮರ್ಥ ನಾಯಕರು ತಿಳಿದಿರುತ್ತಾರೆ. ಆಡಳಿತದ ಸಲಹೆಗಾರ ಮೆರೀಲಿನ್ ಮ್ಯಾಕ್ಗ್ರೋಬ್ಲಿಟ್ಜ್ ಈ ರೀತಿ ಹೇಳುತ್ತಾನೆ, "ಆಕಾಶದಿಂದ ಧುಮುಕುವ ಛತ್ರವಾಹಕ ವ್ಯಕ್ತಿ, ತನ್ನ ಪ್ಯಾರಾಚೂಟನ್ನು ಪರೀಕ್ಷಿಸಿಕೊಳ್ಳದೆ ವಿಮಾನವನ್ನು ಏರುವುದಿಲ್ಲ."

ಅಪಾಯವನ್ನು ಎದುರಿಸಬೇಕೆಂಬ ಅಭಿಪ್ರಾಯದೊಂದಿಗೇ ಅಸಫಲರಾಗುವ ಸಾಧ್ಯತೆಯೂ ಇರುತ್ತದೆ. ಅಪಾಯದ ಗಂಡಾಂತರವನ್ನು ಇತರರು ಎದುರಿಸಲಿ ಎಂದು ನಮ್ಮಲ್ಲಿ ಹೆಚ್ಚಿನವರು ಅಪೇಕ್ಷಿಸುತ್ತೇವೆ. ಆದರೆ ನೀವು ನಾಯಕರಾಗಲು ಅಪೇಕ್ಷಿಸುವಿರಾದರೆ ಅಪಜಯವನ್ನು ಸ್ವೀಕರಿಸಲು ಕಲಿಯಬೇಕು. ದುಃಖ ಮತ್ತು ಪಶ್ಚಾತ್ತಾಪದಿಂದ ಸೋತು ಕಂಗಾಲಾಗಬಾರದು. ಶಕ್ತಿಯನ್ನೆಲ್ಲಾ ಒಟ್ಟುಗೂಡಿಸಿ "ಮರಳಿಯತ್ನವ ಮಾಡಿ".

ಮಾರ್ಗದರ್ಶಕರಾಗಿ :

೧೯೬೬ರಲ್ಲಿ ದು–ಕೇಟ್ ಫಿಲಿಡೆಲ್ಫಿಯದಲ್ಲಿ ಗೃಹನಿರ್ಮಾತಳಾಗಿದ್ದಳು. ಆಕೆಗೆ ಒಂದು ಮಗುವೂ ಇತ್ತು. ಮಗುವಿಗೆ

ಸಕ್ಕರೆ ಕಾಯಿಲೆಯಿದೆಯೆಂದು ಆಕೆಗೆ ತಿಳಿಯಿತು. ಸಕ್ಕರೆ ಕಾಯಿಲೆಯಿರುವ ಇತರ ಮಕ್ಕಳ ತಾಯಂದಿರೊಂದಿಗೆ ಸಂಪರ್ಕ ಬೆಳೆಸಲು ಆಕೆ ಪ್ರಯತ್ನಿಸಿದಳು. ಆದರೆ ಮೊದಮೊದಲು ಆಕೆಯೊಡನೆ ಮಾತನಾಡಲು ಯಾರೂ ಇಷ್ಟಪಡಲಿಲ್ಲ.

ತಮ್ಮ ಅನುಭವಗಳನ್ನು ಆಕೆಯೊಡನೆ ಹಂಚಿಕೊಳ್ಳಲು ಅಪೇಕ್ಷಿಸುವ ಮೂವರು ತಾಯಂದಿರನ್ನು ದು–ಕೇಟ್ ಕೊನೆಗೂ ಹುಡುಕಿದಳು. ಈ ರೀತಿ ಪ್ರಾರಂಭಿಸಿ ಇತರರನ್ನು ಹುಡುಕುತ್ತಾ ಹೋದಳು. ಆಕೆ 'ಜುವೆನಲ್ ಡಯಾಬಿಟೀಸ್ ಫೌಂಡೇಷನ್'ಗೆ ಹೋದಳು. ಈ ಸಂಸ್ಥೆಯ ೧೫೦ ಶಾಖೆಗಳು ವಿಶ್ವದಲ್ಲೆಲ್ಲಾ ಇವೆ. ದು–ಕೈಟ್ ರಾಷ್ಟ್ರೀಯ ರೋಗ ಸಂಶೋಧನಾ ಅಂತರ ಪರಿವರ್ತನ (ನೇಷನಲ್ ಡಿಸೀಜ್ ರಿಸರ್ಚ್ ಇಂಟರ್‌ಚೇಂಜ್) ಸಂಸ್ಥೆಯನ್ನು ಸ್ಥಾಪಿಸಿದಳು. ಆಕೆ ಇದರ ಅಧ್ಯಕ್ಷೆ. ಲೀ ದು–ಕೈಟ್‌ನ ವಿಜಯದ ರಹಸ್ಯವೇನು? ಕೆಲಸ ಮಾಡುವ, ಹತ್ತಿಕ್ಕಲಾರದ ಇಚ್ಛಾಶಕ್ತಿ!

ಆಕೆ ಕೇಳುತ್ತಾಳೆ, "ನೀವು ಇನ್ನೊಬ್ಬ ವ್ಯಕ್ತಿಯ ಕಡೆ ನೋಡಿ ಮುಗುಳ್ನಕ್ಕರೆ, ಆತನೂ ಪ್ರತಿಯಾಗಿ ಮುಗುಳ್ನಗುತ್ತಾನೆಂಬುದನ್ನು ನೀವು ಗಮನಿಸಿದ್ದೀರಾ?" ಇದೇನೋ ಸರಿ, ನೀವು ಯಾರಿಗಾದರೂ ಏನಾದರೂ ಕೊಡುತ್ತೀರಾದರೆ, ಆತನೂ ಬದಲಾಗಿ ಅಂತಹ ವಸ್ತುವನ್ನು ಹಿಂತಿರುಗಿಸಲು ಅಪೇಕ್ಷಿಸುತ್ತಾನೆ. ನೀವು ದೃಢ ವ್ಯಕ್ತಿತ್ವದವರಾದರೆ ನಿಮ್ಮನ್ನು ಅನುಸರಿಸಲು ಇತರರು ಇಷ್ಟಪಡುತ್ತಾರೆ. ನೀವು ಗುರಿಮುಟ್ಟಲು ದೃಢಸಂಕಲ್ಪಗೈದರೆ ಇತರರೂ ಈ ವಿಷಯ ತಿಳಿದು ನಿಮಗಾಗಿ ಆ ದಿಸೆಯಲ್ಲಿ ಖಂಡಿತ ಪ್ರಯತ್ನಿಸುತ್ತಾರೆ.

ಅನುಯಾಯಿಗಳನ್ನು ಪಡೆಯಲು ನೀವು ಮಾಡಬೇಕಾದ ಅತ್ಯುತ್ತಮ ಕಾರ್ಯವೆಂದರೆ, ನಿಮ್ಮ ರೀತಿ ನೀತಿಗಳನ್ನು ಕನ್ನಡಿಯು ಪ್ರತಿಬಿಂಬದಂತೆ ಸ್ಪಷ್ಟ ಮತ್ತು ಪ್ರಾಮಾಣಿಕ ರೀತಿಯಲ್ಲಿ ಅವರ ಮುಂದಿಡಿ ಹಾಗೂ ಅವರಿಂದ ಏನು ಅಪೇಕ್ಷಿಸುತ್ತೀರೆಂಬದನ್ನು ನೇರವಾಗಿ ಹೇಳಿ.

ಇತರರಲ್ಲಿ ನಂಬಿಕೆಯನ್ನು ಇಟ್ಟರಿ

ಆ ವ್ಯಕ್ತಿ ಉತ್ತಮ ರೀತಿಯಲ್ಲಿ ಕೆಲಸ ಮಾಡುವನೆಂಬ ನಂಬಿಕೆ ನಿಮಗಿದ್ದರೆ ಆತ ಸದಾ ಉತ್ತಮ ರೀತಿಯಲ್ಲೇ ಕೆಲಸ ಮಾಡುತ್ತಾನೆಂದು ಸಮರ್ಥ ನಾಯಕರು ಹೇಳುತ್ತಿರುತ್ತಾರೆ. ಇದಕ್ಕೆ ವಿರುದ್ಧವಾಗಿ ಆ ವ್ಯಕ್ತಿ ತನ್ನ ಕಾರ್ಯಮಾಡುವುದರಲ್ಲಿ ಸಫಲನಾಗಲಾರನೆಂಬ ಸಂದೇಹ ನಿಮಗಿದ್ದರೆ, ಬಹುಶಃ ನಿಮ್ಮ ಅನಿಸಿಕೆಗನುಗುಣವಾಗಿಯೇ ಆತ ಕೆಲಸ ಮಾಡುತ್ತಾನೆ. ಪರೋಪಕಾರಿಯಾದ ವ್ಯಾಪಾರಿ ಡಬ್ಲ್ಯೂ. ಕ್ಲೆಮೆಂಟ್ ಸ್ಟೋನ್ ಈ ರೀತಿ ಸಲಹೆ ಕೊಡುತ್ತಾನೆ." ಇತರರ, ಬಗ್ಗೆ ನಿಮಗಿರುವ ಭರವಸೆಯನ್ನು ಪತ್ರ ಮುಖೇನ ತಿಳಿಸಬಹುದು, ತನ್ನ ಮಾರಾಟ ವಿಭಾಗದ ಕೆಲಸಗಾರರ ಬಗ್ಗೆ ನಂಬಿಕೆ ಪ್ರಕಟಿಸುವ ವ್ಯವಸ್ಥಾಪಕರು, ದಾಖಲೆ ಮೀರಿದ ಮಾರಾಟಕ್ಕೆ ಅವರನ್ನು ಪ್ರೇರೇಪಿಸಬಹುದು, ತಮ್ಮ ಶಿಷ್ಯರನ್ನು ವೈಯಕ್ತಿಕವಾಗಿ ಪ್ರೋತ್ಸಾಹಿಸುವ, ಶಹಭಾಸ್‌ಗಿರಿ ಸೂಚಿಸುವ ಅಧ್ಯಾಪಕರು ಅವರನ್ನು ಬಹಳ ಮೇಲ್ಮಟ್ಟಕ್ಕೆ ಏರಿಸುತ್ತಾರೆ. ಒಬ್ಬ ವ್ಯಕ್ತಿಯಲ್ಲಿ ಪೂರ್ಣ

ನಂಬಿಕೆ ಇಡುವುದರಿಂದ ಆತನಿಗೆ ಆತ್ಮ ವಿಶ್ವಾಸ ಮತ್ತು ಸಂತೃಪ್ತಿಯನ್ನು ಕೊಟ್ಟಂತಾಗುತ್ತಿದೆ. ಕೆಲವೊಮ್ಮೆ ಇದರ ಪ್ರತಿಫಲ ಅತಿ್ರಯವಾಗಲೂಬಹುದು. ಆದರೆ ತಜ್ಞರ ಪ್ರಕಾರ—ಇದು ಒಂದು ಪರಿಣಾಮಕಾರಿ ಮಾರ್ಗ.

ನಿರ್ದಿಷ್ಟ ಕಾರ್ಯಕ್ಷೇತ್ರವನ್ನು ಇಟ್ಟುಕೊಳ್ಳಿ

ನಿರ್ದಿಷ್ಟ ಗುರಿ ಇಲ್ಲದ ನಾಯಕನನ್ನು ಸಾಮಾನ್ಯಜನರು ಅನುಸರಿಸುವುದಿಲ್ಲ. ಸೌಂದರ್ಯ ಪ್ರಸಾಧನ ಸಂಸ್ಥೆಯ ಸಂಸ್ಥಾಪಕಿ ಎಸ್. ಟಿ. ಲೌಡರ್, ಸಾವಿರಾರು ಕೆಲಸಗಾರರ ನಾಯಕತ್ವವನ್ನು ಬಹಳ ಸಮರ್ಥಳಾಗಿ ನಿರ್ವಹಿಸಿದಳು. ತನಗೆ ಪರಿಚಿತನಾದ ಪ್ರತಿ ಪ್ರಮುಖ ವ್ಯಾಪಾರಿಯ ಯೋಜನೆಗಳ ಸ್ಪಷ್ಟ ಚಿತ್ರಣವನ್ನು ತಾನು ಕೊಡಬಲ್ಲೆನೆಂದು ಆಕೆ ವಾದಿಸುತ್ತಾಳೆ. ಅವರು ಏನನ್ನು ಪಡೆಯಬೇಕೆಂದಿದ್ದಾರೋ ಮತ್ತು ಯಾವ ವಿಷಯದ ಬಗ್ಗೆ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೋ ಅದನ್ನು ತಾನು ಹೇಳಬಲ್ಲೆನೆಂದು ಆಕೆ ಹೇಳುತ್ತಾಳೆ. ಭರವಸೆಗೆ ಬದಲಾಗಿ ಪ್ರತಿಫಲವನ್ನೇ ಕೊಡುವವರನ್ನು ಜನ ಮೆಚ್ಚುತ್ತಾರೆ ಎಂಬುದು ಆಕೆಯ ಅಭಿಪ್ರಾಯ.

ನಿಮ್ಮ ಕರ್ತವ್ಯ ಮಾಡಿ

'ಉತ್ತಮ ನಾಯಕರು ಪ್ರಶಾಂತ ಮನಸ್ಕರಾಗಿರುವುದನ್ನು ಕಲಿಯುತ್ತಾರೆ. ಅವರು ಸದಾ ವಿಜೇತರಂತೆ ತೋರುತ್ತಾರೆ. ಕೆಲವು ವೇಳೆ ಅವರಿಗೆ ತಮ್ಮ ಮೇಲೇ ಸಂದೇಹ ಉಂಟಾಗುತ್ತದೆ. ಆದರೆ ಅವರು ಇದನ್ನು ಇತರರಿಗೆ ವ್ಯಕ್ತಪಡಿಸುವುದಿಲ್ಲ. ತಮ್ಮ ಗುರಿ ತಮಗೆ ತಿಳಿದಿದೆ ಎನುವ ಆತ್ಮ ವಿಶ್ವಾಸದಿಂದ ಅವರು ಕೆಲಸ ಮಾಡುತ್ತಿರುತ್ತಾರೆ'—ಆಡಳಿತ ಸಲಹೆಗಾರ ಪೌಲಾ ಬರ್ನ್ ಹೇಳುತ್ತಾನೆ.

ತಮ್ಮ ವೇಷಭೂಷಣ, ರೀತಿನೀತಿ, ಇತರರ ದೃಷ್ಟಿಯಲ್ಲಿ ಪ್ರಮುಖವಾದದ್ದಾಗಿರುತ್ತದೆ, ಎಂಬುದನ್ನು ನಾಯಕರು ಅರಿತಿರುತ್ತಾರೆ. ಅವರು ಹೆಚ್ಚಿನಂಶ ಹಸನ್ಮುಖಿಗಳಾಗಿರುತ್ತಾರೆ. ಅವರ ಮಾತುಗಳು ಮಧುರವಾಗಿಯೂ ಸುಸಂಸ್ಕೃತವಾಗಿಯೂ ಇರುತ್ತವೆ. ಅವರು ಶಿಸ್ತುಬದ್ಧ, ವಿಶ್ವಾಸಾರ್ಹ ವ್ಯಕ್ತಿತ್ವವುಳ್ಳವರಾಗಿರುತ್ತಾರೆ.

ಸಶಕ್ತ ವ್ಯಕ್ತಿಗಳಾಗಿ

ಜ್ಞಾನದಲ್ಲಿ ಅಪಾರ ಶಕ್ತಿಯಿದೆ ಎಂಬ ಹೇಳಿಕೆ ಇಂದೂ ಅಕ್ಷರಶಃ ಸತ್ಯ. ಯೋಗ್ಯತೆ ಮತ್ತು ವ್ಯಕ್ತಿತ್ವ ಇತರರ ಮೇಲೆ ವಿಶೇಷ ಪ್ರಭಾವವನ್ನು ಬೀರುತ್ತದೆ. ಆದ್ದರಿಂದಲೇ ಸಲಹೆ ಮತ್ತು ಮಾರ್ಗದರ್ಶನಕ್ಕೆ ಅವರು ನಿಮ್ಮೆಡೆ ನೋಡುತ್ತಾರೆ.

ನಿಮ್ಮಲ್ಲಿ ಉತ್ಸಾಹ ಬೆಳೆಸಿಕೊಳ್ಳಿ

ಲೀ ದು ಕ್ರೈಟ್ ಹೇಳುತ್ತಾಳೆ, ಯಾವುದೇ ಕೆಲಸ ಮತ್ತು ಅದರ ಮಹತ್ವವನ್ನು ಸಂಪೂರ್ಣ ತಿಳಿದಾಗ, ಆತ ತನ್ನ ಕೇಂದ್ರೀಕೃತ ಆತ್ಮಶಕ್ತಿಯಿಂದ ಕೆಲಸ ಮಾಡುತ್ತಾನೆ. ಯಾವುದೇ ಕೆಲಸದ ಬಗ್ಗೆ ಆತ ಉತ್ತೇಜಿತನಾದಾಗ ತನ್ನ ಸರ್ವಶಕ್ತಿಯನ್ನೂ ಆ ಕೆಲಸಕ್ಕೆ ತೊಡಗಿಸುತ್ತಾನೆ.

ಇದು ಒಂದು ಪ್ರಭಾವಶಾಲಿ ಶಕ್ತಿಯಾಗಿದೆ. ಉತ್ತೇಜಿತನಾಗಲು ಅತ್ಯುತ್ತಮ ಮಾರ್ಗ ಯಾವುದು? ಅದಕ್ಕೆ ಬೇಕಾಗಿರುವ ಹುರುಪು ಮತ್ತು ಉತ್ಸಾಹಕ್ಕಾಗಿ ಸಮಗ್ರ ಶಕ್ತಿ ಯನ್ನು ಕೇಂದ್ರೀಕರಿಸಿಕೊಳ್ಳಲು ವಿಜಯ ಬಂದೇ ಬರುತ್ತದೆ.

ಒಂದು ದೃಷ್ಟಾಂತ

ಪರಿತ್ಯಕ್ತ ಯುವತಿ ಫ್ಲೋರಿಡಾಳನ್ನು ತನ್ನೊಂದಿಗೇ ಇರಿಸಿಕೊಂಡಿದ್ದ ಕ್ರಿಸ್ ಎಲ್ಲರ್, ತನ್ನ ಸ್ವತಂತ್ರ ಜೀವನವನ್ನು ರೂಪಿಸಿಕೊಳ್ಳಲು ಯೋಚಿಸಿದಳು. ಎಲ್ಲೇ ಆಗಲಿ, ಯಾವುದೇ ಕೆಲಸವಾಗಲಿ, ಪ್ರಗತಿ ಹೊಂದಲು ಅತ್ಯಂತ ಶ್ರದ್ಧೆಯಿಂದ ಪ್ರಯ ತ್ನಿಸಲಾರಂಭಿಸಿದಳು. ಹಿಂದುಳಿದ ಮಿಯಾ ಮಿನಲ್ಲಿ ಬಹಳಷ್ಟು ಜನ ಹಸಿವಿನಿಂದ ಪರಿತಪಿಸುತ್ತಿದ್ದುದನ್ನು ಆಕೆ ನೋಡಿದಳು. ಅಂದು ಸಂಜೆ ಆಕೆ ತನ್ನ ಸ್ನೇಹಿತೆಯೊಡನೆ ಇಪ್ಪತ್ತು ಸ್ಯಾಂಡ್‌ವಿಚ್ ತೆಗೆದುಕೊಂಡು ಹೋಗಿ ಮಾರಿ ಮನೆಗೆ ಹಿಂತಿರುಗಿದಳು. ಮಾರನೆಯ ದಿನ ಸಂಜೆ, ಇನ್ನೂ ಹೆಚ್ಚು ಸ್ಯಾಂಡ್ ವಿಚ್‌ಗಳನ್ನು ಆಕೆ ತಂದು ಮಾರಿ ದಳು. ನಂತರ ಆಕೆ ಸೂಪು ಮತ್ತು ಕಾಫಿ ಯನ್ನು ಮಾರಲು ಪ್ರಾರಂಭಿಸಿದಳು. ಕೇವಲ ತಾನೂ ಮತ್ತು ತನ್ನ ಸ್ನೇಹಿತೆ ಈ ಕೆಲಸಗಳನ್ನೆಲ್ಲಾ ನಿಭಾಯಿಸಲಾರೆ ವೆಂದು ಆಕೆಗೆ ಬಹಳ ಬೇಗ ಅನಿಸಲಾರಂಭಿ ಸಿತು. ಎಲ್ಲರ್ ಈ ರೀತಿ ಹೇಳುತ್ತಾಳೆ, "ಮೊದಮೊದಲು ನಾನು ಕೆಲಸಕ್ಕೆ ಜನ ರನ್ನು ತೆಗೆದುಕೊಳ್ಳಲಿಲ್ಲ. ಆದರೆ ಇದಲ್ಲದೆ ಬೇರೆ ದಾರಿಯೇ ಇರಲಿಲ್ಲ, ಕ್ರಮೇಣ ನನ್ನ ಕೈಕೆಳಗೆ ಇತರರು ಕೆಲಸಮಾಡುತ್ತಿದ್ದರು. ನಾನು ಫೋನ್ ಸಂಭಾಷಣೆ ಮಾತ್ರ ಮಾಡುತ್ತಿದ್ದೆ."

ಬರುಬರುತ್ತಾ ಆಕೆಯ ಸಾರ್ವಜನಿಕ ಸೇವೆ ಪ್ರಸಿದ್ಧವಾಯಿತು. ಸ್ಥಳೀಯ ವರ್ತ ಮಾನ ಪತ್ರಿಕೆಗಳು ಮತ್ತು ದೂರದರ್ಶನ ಕೇಂದ್ರಗಳು ಆಕೆಯ ಜೀವನದ ಬಗ್ಗೆ ಕಥೆ ಗಳನ್ನು ಬರೆದುವು, ಪ್ರಸಾರ ಮಾಡಿದುವು. ಪ್ರೆಸ್‌ನವರು ಮಾಡಿದ ಪ್ರಚಾರದಿಂದ ಸ್ವಯಂ ಸೇವಾ ಕರ್ತರೂ ಇವರೆಡೆ ಆಕರ್ಷಿತ ರಾದರು. ಅವರಲ್ಲಿ ಮುಂಚೆ ಧನ ಸಹಾಯ ಮಾಡುತ್ತಿದ್ದ ಉದಾರ ಮನಸ್ಸಿನ ಒಬ್ಬ ವ್ಯಕ್ತಿ, ನಂತರ ಈಕೆಯೊಡನೆ ಸಂಪರ್ಕ ಪಡೆದು ನಿರ್ದೇಶನ ಕಾರ್ಯಕ್ಕಾಗಿ ದುಡಿ ಯಲಾರಂಭಿಸಿದ.

ಈಗ ಕೆಲಸಗಾರರು ಪ್ರತಿ ದಿದ ೫೦೦ ಉತ್ತಮ ಮಟ್ಟದ ಸ್ಯಾಂಡ್‌ವಿಚ್ ಮತ್ತು ಸೂಪ್ ತಯಾರಿಸಿ ಮಾರುತ್ತಾರೆ.

"ಈ ಎಲ್ಲಾ ಕೆಲಸ ನನ್ನೊಬ್ಬಳಿಂದಲೇ ಸಾಧ್ಯವಾದದ್ದಲ್ಲ. ಈ ಕೆಲಸಕ್ಕೆ ಅನೇಕ ಜನರು ನನ್ನೊಡನೆ ಸೇರಿದ್ದಾರೆ. ನನ್ನ ನಾಯಕತ್ವದಲ್ಲಿ ನೂರಾರು ಜನರು ಕೆಲಸ ಮಾಡುತ್ತಾರೆ, ಸಾವಿರಾರು ಜನರು ಸಹಾಯ ಪಡೆಯುತ್ತಾರೆ" ಎಂದು ಎಲ್ಲರ್ ಹೇಳುತ್ತಾಳೆ. ವಾಸ್ತವವಾಗಿ ಇದೇ ನಾಯ ಕತ್ವದ ಲಕ್ಷಣ.

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

1. ಡಾ|| ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು
   'ಕಲಾ ನಿಲಯ' ಕಾಳಿದಾಸ ರಸ್ತೆ, ಜಯಲಕ್ಷ್ಮಿಪುರಂ, ಮೈಸೂರು–12

2. ಸಿ. ನಾಗಣ್ಣ, ಪ್ರಾಧ್ಯಾಪಕರು
   ನಂ. ಎಲ್. 10, ವಿಶ್ವವಿದ್ಯಾನಿಲಯ ವಸತಿಗಳು
   ಮಾನಸಗಂಗೋತ್ರಿ ಕ್ಯಾಂಪಸ್, ಮೈಸೂರು–570006

3. ಎಂ. ಜಯಂತಿಬಾಯಿ, ಸಹಾಯಕ ಅನುವಾದಕಿ, ಆಡಳಿತ ವಿಭಾಗ
   'ಕ್ರಾಫರ್ಡ್ ಭವನ', ಮೈಸೂರು ವಿಶ್ವವಿದ್ಯಾನಿಲಯ
   ಮೈಸೂರು–570005

4. ಡಾ|| ಸ. ಜ. ನಾಗಲೋಟಿಮಠ
   ಜೆ. ಎಸ್. ಎಸ್. ಮೆಡಿಕಲ್ ಕಾಲೇಜು, ಮೈಸೂರು–570007

5. ಜಿ. ಟಿ. ನಾರಾಯಣರಾವ್, ನಂ. 8 "ಅತ್ರಿ" ಕಾಮಾಕ್ಷಿ ಆಸ್ಪತ್ರೆ ರಸ್ತೆ
   ಕುವೆಂಪುನಗರ, ಮೈಸೂರು–570 023

6. ಸರಸ್ವತಿ ಬಡೆಕ್ಕಿಲ, ನಂ. 1757, 4ನೇ ಅಡ್ಡ ರಸ್ತೆ, ಅನಿಕೇತನ ಮಾರ್ಗ
   ಪಿ ಮತ್ತು ಟಿ ಬ್ಲಾಕ್, ಕುವೆಂಪುನಗರ, ಮೈಸೂರು–23

7. ಎ. ಪಿ. ಚಂದ್ರಶೇಖರ್, "ಇಂದ್ರಪ್ರಸ್ಥ", ಅಗ್ರಿಕಲ್ಚರಿಸ್ಟ್
   ಕಳಲವಾಡಿ ಗ್ರಾಮ, ಉದ್ಬೂರು ಪೋಸ್ಟ್, ಮೈಸೂರು–570 008

8. 'ಗಂಗಾ' ಪಾದೇಕಲ್
   "ಗಣೇಶ ಕೃಪಾ", ಕರೋಪಾಡಿ ಅಂಚೆ, ವಯಾ ವಿಟ್ಲ. ದ.ಕ.–574280

9. ಡಾ|| ಆರ್. ರಾಮಕೃಷ್ಣ
   ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು–570006

10. ಬಿ. ಎಸ್. ಮಯೂರ
    2731/1, 3ನೇ ಮುಖ್ಯರಸ್ತೆ, ವಾಣಿ ವಿಲಾಸ ಮೊಹಲ್ಲಾ
    ಮೈಸೂರು–570002

11. ಟಿ. ವಿ. ಅನ್ನಪೂರ್ಣಮ್ಮ, ಎಂ. ಐ. ಜಿ–5, "ಶ್ರೀಕರ", ಕುವೆಂಪುನಗರ
    ಮೈಸೂರು–570 023

Reg. No. KRNN 29 / WPP 6

LICENSE No. 21
LICENSED TO POST WITH PAYMENT

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಡೆಮ್ಮಿ ಅಷ್ಟದಳ ೮೦ ಪುಟಗಳು

ಚಂದಾ ವಿವರಗಳು :

ಬಿಡಿ ಪತ್ರಿಕೆ ರೂ. 6-00

ವಾರ್ಷಿಕ ಚಂದಾ ರೂ. 60-00

ಆಜೀವ ಸದಸ್ಯತ್ವದ ಚಂದಾ ವಿವರ :

ಸಂಸ್ಥೆಗೆ ರೂ. 600-00

ವ್ಯಕ್ತಿಗೆ ರೂ. 400-00

ಕಛೇರಿ ವಿಳಾಸ :

ಸಂಪಾದಕರು

'ಪುಸ್ತಕ ಪ್ರಪಂಚ' ಮಾಸಪತ್ರಿಕೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. 5/1, ವಿನೋಬ ರಸ್ತೆ, ಮಾನಸಗಂಗೋತ್ರಿ ಕ್ಯಾಂಪಸ್
ಮೈಸೂರು-570006

ದೂರವಾಣಿ : 512485

Edited by Chandrashekhararadhya, Printed by H. V. Sreenivasa char, Manager at Karnataka State Adult Education Council Press and Published by Karnataka State Adult Education Council, 5/1, Vinoba Road, Gangothri Campus, Mysore-570 006.